ANANTHKUMAR PRATISHTHANA

# ಅನಂತಪಥ

ಸಂಪುಟ-1 ಡಿಸೆಂಬರ್ - 2020 ಸಂಚಿಕೆ - 6



**ಕುಮಾರರಾಗಿ ಬಂದು ಅನಂತವಾಗಿ ಬೆಳೆದವರು**

ನಾನು ಕಂಡ ಅನಂತಕುಮಾರ್ ಮಾಲಿಕೆಯಲ್ಲಿ ಪುಟ-4

ಶ್ರೀ ದತ್ತಾತ್ರೇಯ ಹೊಸಬಾಳೆ

### ಅಟಲ್ ಬಿಹಾರಿ ವಾಜಪೇಯಿಯವರ ಜನ್ಮದಿನದ (ಡಿಸೆಂಬರ್ ೨೫) ನೆನಪಿಗಾಗಿ ವಿಶೇಷ ಲೇಖನ

## ಅಟಲ್ ಜೀ ಮತ್ತು ಅನಂತಕುಮಾರ್ : ಕೆಲವು ನೆನಪುಗಳು

ತೇಜಸ್ವಿನಿ ಅನಂತಕುಮಾರ್

ಅನಂತಕುಮಾರ್ ಅಟಲ್ ಬಿಹಾರಿ ವಾಜಪೇಯಿಯವರನ್ನು ಮೊದಲಬಾರಿಗೆ ಯಾವಾಗ ಭೇಟಿಯಾಗಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ೧೯೮೫ರಲ್ಲಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ರಾಷ್ಟ್ರಮಟ್ಟದ ಅಧಿವೇಶನವೊಂದು ದೆಹಲಿಯಲ್ಲಿ ಏರ್ಪಾಡಾಗಿತ್ತು. ಆ ಸಂದರ್ಭದಲ್ಲಿ ಅನಂತಕುಮಾರ್ ಅವರನ್ನು ಪರಿಷತ್ತಿನ ರಾಷ್ಟ್ರೀಯ ಕಾರ್ಯದರ್ಶಿ ಎಂದು ಘೋಷಣೆ ಮಾಡಲಾಗಿತ್ತು. ಆ ಸಮಾವೇಶದಲ್ಲಿ ಅಟಲ್ ಜೀ ಅವರು ಮುಖ್ಯ ಅತಿಥಿಗಳಾಗಿ ಬಂದಿದ್ದರು. ಶ್ರೀ ದತ್ತಾತ್ರೇಯ ಹೊಸಬಾಳೆ , ಶ್ರೀ ಜೆ.ಪಿ. ನಡ್ಡಾ ಮೊದಲಾದವರ ಭಾಷಣಗಳ ಜೊತೆಗೆ ಅನಂತಕುಮಾರ್ ಅವರ ಭಾಷಣವೂ ಇತ್ತು. ಬಹುಶ: ಅಲ್ಲೇ ವಾಜಪೇಯಿಯವರೊಡನೆ ಅನಂತಕುಮಾರ್ ಅವರ ಮೊದಲ ಭೇಟಿಯಾಗಿರಬಹುದೇನೋ. ಮುಂದಿನ ದಿನಗಳಲ್ಲಿ ವಿದ್ಯಾರ್ಥಿ ಪರಿಷತ್ತಿನ ಸಮಾವೇಶ ದೆಹಲಿಯಲ್ಲಿ ಇದ್ದಾಗಲೆಲ್ಲ ಬಹುಮಟ್ಟಿಗೆ ಅನಂತಕುಮಾರ್ ಅವರು ಅಟಲ್ ಜೀಯವರನ್ನು ಭೇಟಿಯಾಗುತ್ತ ಇದ್ದರು. ಆ ಸಂದರ್ಭದಲ್ಲಿ ಪಕ್ಷವೂ ಅಷ್ಟು ದೊಡ್ಡದಾಗಿರಲಿಲ್ಲ. ಪಕ್ಷದವರಾಗಿ ಇಬ್ಬರೇ ಎಂ.ಪಿ.ಗಳು ಇದ್ದವರು. ಹೀಗಾಗಿ ವಿದ್ಯಾರ್ಥಿ ಪರಿಷತ್, ಪಕ್ಷ, ಆರ್.ಎಸ್.ಎಸ್.ನ ಎಲ್ಲ ಅಖಿಲ ಭಾರತ ಮಟ್ಟದ ಕಾರ್ಯಕರ್ತರು ಪರಸ್ಪರ ಭೆಟ್ಟಿಯಾಗುವುದಕ್ಕೂ ವಾಜಪೇಯಿಯವರ ಮನೆಯೇ ತಾಣವಾಗಿರುತ್ತಿತ್ತು.



೧೯೯೮ ರಲ್ಲಿ ಅಧಿಕಾರಕ್ಕೆ ಬಂದ ವಾಜಪೇಯಿಯವರ ಮಂತ್ರಿಮಂಡಲದಲ್ಲಿ ಅನಂತ ಕುಮಾರ್ ಮೊದಲ ಬಾರಿಗೆ ಕೇಂದ್ರ ಸಚಿವರಾಗಿ ಸೇವೆ ಸಲ್ಲಿಸುವ ಅವಕಾಶ ಪಡೆದುಕೊಂಡರು.

೧೯೮೯ರ ನಂತರ ಅನಂತಕುಮಾರ್ ಪ್ರಧಾನ ಕಾರ್ಯದರ್ಶಿಗಳಾದ ಮೇಲೆ ವರ್ಷಕ್ಕೆ ಒಂದೆರಡು ಸಲವಾದರೂ ಕರ್ನಾಟಕಕ್ಕೆ ಅಟಲ್ ಜೀಯವರ ಪ್ರವಾಸ ಇದ್ದೇ ಇರುತ್ತಿತ್ತು. ಆ ಎಲ್ಲ ಪ್ರವಾಸಗಳಿಗೂ ಅನಂತಕುಮಾರ್ ಸಂಯೋಜಕರಾಗಿದ್ದು, ಅಟಲ್ ಜೀಯವರ ಆಗಮನದಿಂದ ಮೊದಲುಗೊಂಡು ಎಲ್ಲ ವ್ಯವಸ್ಥೆ ನೋಡಿಕೊಳ್ಳುತ್ತಿದ್ದರು. ಹಿಂದೀ ಭಾಷೆಯ ಸಂವಹನ ಸಮಸ್ಯೆ ಬೇರೆ ಇದ್ದುದರಿಂದ ಇವೆಲ್ಲ ಹೊಣೆಯನ್ನು ಅನಂತಕುಮಾರ್ ಅವರೇ ವಹಿಸುವುದು ಅನಿವಾರ್ಯವಾಗಿತ್ತು. ಆದರೆ ತಮ್ಮ ಕರ್ತವ್ಯವನ್ನು ಅನಂತಕುಮಾರ್ ಬಹಳ ಸುಲಲಿತವಾಗಿ ನಿರ್ವಹಿಸುತ್ತಿದ್ದುದರಿಂದ, ಕರ್ನಾಟಕ ಬಿ.ಜೆ.ಪಿ.ಗೆ ಸಂಬಂಧಪಟ್ಟಿದ್ದು ಸಂಪೂರ್ಣವಾಗಿ ಏನೇ ಇದ್ದರೂ ಅಟಲ್ ಜೀ ಅನಂತಕುಮಾರ್ ಅವರನ್ನೇ ಕೇಳುವದಿತ್ತು. ಹಾಗೆಯೇ ಹೇಳುವಂಥದ್ದು ಏನೇ ಸೂಚನೆಗಳಿದ್ದರೂ ಅನಂತಕುಮಾರ್ ಅವರ ಮುಖಾಂತರವೇ ಮುಂದುವರಿಯುತ್ತಿದ್ದುದು. ಹೀಗಾಗಿ ಕರ್ನಾಟಕದಲ್ಲಿ ೧೯೯೬ರವರೆಗಿನ ಪಕ್ಷದ ಚಟುವಟಿಕೆಗಳಲ್ಲಿ ಅನಂತಕುಮಾರ್ ಅವರಿಗೆ ಅಟಲ್ ಜೀಯವರ ಜೊತೆಗಿನ ಒಡನಾಟ ಗಾಢವಾಗೇ ಇದ್ದಿತು ದೆಹಲಿಯಲ್ಲೂ ನಿರಂತರವಾಗಿ ಮುಂದುವರೆಯಿತು.

೧೯೯೬ರಲ್ಲಿ ಅನಂತಕುಮಾರ್ ಅವರು ಮೊದಲ ಬಾರಿಗೆ ಲೋಕಸಭಾ ಸದಸ್ಯರಾಗಿ ಹೋದಮೇಲೆ ಪ್ರಥಮ ಬಾರಿಗೆ ಬಿಜೆಪಿಸರ್ಕಾರ ಬಂದಾಗ ಆ ಸರ್ಕಾರವನ್ನು ಉಳಿಸಲಿಕ್ಕೆ ಬಹಳ ಹೋರಾಟ ಆಯಿತು. ಆ ಸಂದರ್ಭದಲ್ಲಿ ಅನಂತಕುಮಾರ್ ಅವರು ಪ್ರಮೋದ್ ಮಹಾಜನ್ ರವರ ಸಹಾಯಕರಾಗಿ ಒಂದು ರೀತಿಯ ಕಾರ್ಯದರ್ಶಿಯ ಮಾದರಿಯಲ್ಲಿ ಹದಿಮೂರು

ಪುಟ 11ರಲ್ಲಿ ಮುಂದುವರೆದಿದೆ



ಈಶಾನ್ಯ ಭಾರತದ ವಿದ್ಯಾರ್ಥಿಗಳನ್ನು ಭಾರತದ ಇತರ ರಾಜ್ಯಗಳ ಮುಖ್ಯವಾಹಿನಿಯೊಂದಿಗೆ ಜೋಡಿಸುವ ಮಹದುದ್ದೇಶದಿಂದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಪ್ರಕಲ್ಪವಾದ ಸ್ಟೂಡೆಂಟ್ಸ್ ಎಕ್ಸ್ ಪೀರಿಯನ್ಸ್ ಇನ್ ಇಂಟರ್ ಸ್ಟೇಟ್ ಲಿವಿಂಗ್ ನಿಂದ ಪ್ರಾಯೋಜಿತವಾಗಿ, ಗೌಹಾತಿಯಲ್ಲಿ ಸ್ಥಾಪಿಸಲು ಉದ್ದೇಶಿಸಲಾದ ಯೂತ್ ಡೆವೆಲಪ್ ಮೆಂಟ್ ಸೆಂಟರಿನ ಶಿಲಾನ್ಯಾಸ ಕಾರ್ಯಕ್ರಮದಲ್ಲಿ (೨೨ ಮೇ ೨೦೦೨)ಅನಂತಕುಮಾರರೊಡನೆ ಶ್ರೀ ದತ್ತಾತ್ರೇಯ ಹೊಸಬಾಳೆ ಯವರೂ ಆಗ ಅಲ್ಲಿನ ಲೋಕಸಭಾ ಸದಸ್ಯರಾಗಿದ್ದ ಶ್ರೀಮತಿ ಬಿಜೊಯಾ ಚಕ್ರವರ್ತಿಯವರೂ ಭಾಗವಹಿಸಿದ್ದ ಸಂದರ್ಭದ ಚಿತ್ರ. ಅನಂತಕುಮಾರರೊಡನೆ ತಮ್ಮ ಒಡನಾಟವನ್ನು ನೆನಪಿಸಿಕೊಂಡಿರುವ ಶ್ರೀ ದತ್ತಾತ್ರೇಯ ಹೊಸಬಾಳೆಯವರ ಲೇಖನವನ್ನು ಇದೇ ಸಂಚಿಕೆಯಲ್ಲಿ ಓದಬಹುದು.



**ಆತ್ಮನಿರ್ಭರ ಭಾರತದೆಡೆಗೆ ಜೈವಿಕ ಇಂಧನ**

ಪುಟ - 2 ವೈ.ಬಿ. ರಾಮಕೃಷ್ಣ

**ರಾಜಧಾನಿ ದೆಹಲಿಯಲ್ಲಿ ಕನ್ನಡದ ಅನಂತ ಧ್ವನಿ**

ಡಾ. ಪುರುಷೋತ್ತಮ ಬಿಳಿಮಲೆ ಪುಟ - 5



**ಸಂಸ್ಕಾರವಂತ ರಾಷ್ಟ್ರನಾಯಕನಾಗಿ ಬೆಳೆದ ಹುಬ್ಬಳ್ಳಿಯ ಹುಡುಗ**

ಮುಕುಂದ ನಾತು ಪುಟ - 6





ಪುಟ - 8

**ಗಿರಿನಗರದ ರೈಟ್ ಸಹೋದರರು**



300 TPD food waste to Biogas plant in Pune by Noble Exchangers

# ಆತ್ಮನಿರ್ಭರ ಭಾರತದೆಡೆಗೆ ಜೈವಿಕ ಇಂಧನ

**ವೈ.ಬಿ. ರಾಮಕೃಷ್ಣ**
ವಿಷಯ ತಜ್ಞ ಸದಸ್ಯರು, ಜೈವಿಕ ಇಂಧನ ಕಾರ್ಯಪಡೆ, ಭಾರತ ಸರ್ಕಾರ

ನಮಗೆಲ್ಲಾ ತಿಳಿದಿರುವಂತೆ ಮಾನವನ ಪ್ರತಿಯೊಂದು ಚಟುವಟಿಕೆಗೂ ಶಕ್ತಿ ಅಥವಾ ಇಂಧನದ ಅವಶ್ಯಕತೆ ಇದೆ. ಇವುಗಳ ಸಹಾಯವಿಲ್ಲದೆ ನಾವು ಯಾವುದೇ ಕೆಲಸವನ್ನು ಮಾಡಲು ಸಾಧ್ಯವಿಲ್ಲ. ಆದಕಾರಣ, ಒಂದೆಡೆ ಬೆಳೆಯುತ್ತಿರುವ ಜನಸಂಖ್ಯೆ ಮತ್ತು ಇನ್ನೊಂದೆಡೆ ಆರ್ಥಿಕವ್ಯವಸ್ಥೆಯಲ್ಲಿ ಆಗುತ್ತಿರುವ ಪ್ರಗತಿ. ಈ ಪ್ರಗತಿಯಲ್ಲಿ ಉತ್ತಮ ಫಲಿತಾಂಶ ಗಳಿಸಬೇಕೆಂದರೆ ಅದಕ್ಕೆ ಬೇಕಾಗಿರುವುದು ಹೆಚ್ಚಿನ ಪ್ರಮಾಣದ ಇಂಧನದ ಬಳಕೆ.

ನಮಗೆ ತಿಳಿದಿರುವಂತೆ, ಸೂರ್ಯನಿಂದ ಬರುವ ಶಕ್ತಿಯು ಬೇರೆಬೇರೆ ರೀತಿಗಳಲ್ಲಿ ಶೇಖರಣೆಯಾಗಿದೆ. ಅದನ್ನು ಬೇರೆಬೇರೆ ಇಂಧನದ ಮೂಲಗಳಿಂದ ತೆಗೆದು ಬಳಕೆ ಮಾಡಿಕೊಳ್ಳುತ್ತಿದ್ದೇವೆ. ಆದರೆ, ಈ ಇಂಧನದ ಮೂಲಗಳು ಪ್ರಪಂಚದ ಕೆಲವೇ ಭಾಗಗಳಲ್ಲಿ ಮಾತ್ರ ಶೇಖರಣೆಯಾಗಿವೆ. ಹೀಗಾಗಿ ಪ್ರಪಂಚದ ಎಲ್ಲಾ ದೇಶಗಳು ಶಕ್ತಿಯ ಪೂರೈಕೆಗಾಗಿ ಕೆಲವೊಂದು ದೇಶಗಳ ಮೇಲೆ ಅವಲಂಬಿತವಾಗಿರುವುದನ್ನು ನೋಡುತ್ತಿದ್ದೇವೆ. ಆದಕಾರಣ, ಹೆಚ್ಚೂಕಡಿಮೆ ಎಲ್ಲಾ ದೇಶಗಳೂ ಇಂಧನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಸ್ವಾವಲಂಬಿಗಳಾಗಬೇಕು ಎನ್ನುವ ನಿಟ್ಟಿನಲ್ಲಿ ಆಲೋಚನೆ ಮಾಡುತ್ತಿದ್ದಾರೆ. ಹೇಗೆ ಸ್ವಾವಲಂಬಿಯಾಗಬಹುದು? ಇದೇ ನಮ್ಮ ಮುಂದಿರುವಂತಹ ಮೊಟ್ಟಮೊದಲ ಸವಾಲು.

ಎರಡನೆಯದು, ಇಂಧನ ಮೂಲಗಳಲ್ಲಿ ಕಚ್ಚಾತೈಲ ಅಥವಾ ಕಲ್ಲಿದ್ದಲು ಇವೆಲ್ಲವನ್ನು ಹೊರತೆಗೆದು ಸಂಸ್ಕರಿಸಿ ಅಗತ್ಯವಿರುವ ಶಕ್ತಿಯನ್ನು ಪೂರೈಕೆ ಮಾಡುವ ಸಂದರ್ಭದಲ್ಲಿ ದೊಡ್ಡ ಪ್ರಮಾಣದಲ್ಲಿ ಪರಿಸರವನ್ನು ನಾಶ ಮಾಡುತ್ತಿರುತ್ತೇವೆ. ಇಂದು ಹವಾಮಾನ ಬದಲಾವಣೆ ದೊಡ್ಡ ಸವಾಲಾಗಿದೆ. ದೊಡ್ಡ ಪ್ರಮಾಣದಲ್ಲಿ ಇಂಧನ ಪೂರೈಕೆಯಾಗುವಂತಹ ಸಂದರ್ಭದಲ್ಲಿ ಉಂಟಾಗುವಂತಹ ಮಾಲಿನ್ಯವೇ ಈ ಹವಾಮಾನ ಬದಲಾವಣೆಗೆ ಕಾರಣವಾಗಿದೆ. ಹಾಗಾಗಿ ಮುಂಬರುವ ದಿನಗಳಲ್ಲಿ ಯಾವ ರೀತಿ ಪರಿಸರಮಾಲಿನ್ಯವನ್ನು ನಾವು ತಗ್ಗಿಸಬೇಕು ಎಂಬುದು ನಮ್ಮ ಮುಂದೆ ಇರುವ ಎರಡನೆಯ ಸವಾಲು.

ನಮಗೆಲ್ಲಾ ತಿಳಿದಿರುವಂತೆ ಭಾರತ ಕೃಷಿಪ್ರಧಾನವಾದ ದೇಶ. ಆದರೆ ಇಂದು ಕೃಷಿ ನಮ್ಮ ದೇಶದಲ್ಲಿ ಯಾವ ಘಟ್ಟವನ್ನು ತಲುಪಿದೆ ಎಂದು ಆಲೋಚಿಸಿದರೆ, ಕೃಷಿ ಮಾಡುವುದೇ ಅಸಾಧ್ಯ ಎನ್ನುವಂತಹ ನಿರ್ಣಯಕ್ಕೆ ಬಂದು ತಲುಪಿದ್ದೇವೆ. ಕೃಷಿಯನ್ನು ಅವಲಂಬಿಸಿದ್ದ ಗ್ರಾಮೀಣ ಪ್ರದೇಶದ ಜನರು ಈಗ ನಗರ ಪ್ರದೇಶಗಳಿಗೆ ವಲಸೆ ಬರುತ್ತಿದ್ದಾರೆ. ಅನೇಕ ಕಾರಣಗಳಿಂದ ಇಂದು ಕೃಷಿ ಮಾಡುವುದು ಕಷ್ಟಕರವಾಗಿದೆ. ಜೊತೆಗೆ ಬೇಕಾಗಿರುವಂತಹ ಗೊಬ್ಬರ, ನೀರು ಅಥವಾ ಬೀಜಗಳು ಮತ್ತಿತರ ಮೂಲವಸ್ತುಗಳು ಈಗ ಹೆಚ್ಚು ದುಬಾರಿಯಾಗಿವೆ. ಅದರ ಜೊತೆಗೆ ಮಾರುಕಟ್ಟೆ ವ್ಯವಸ್ಥೆ, ಹವಾಮಾನ ವೈಪರೀತ್ಯ ಇವೆಲ್ಲಾ ಸಮಸ್ಯೆಗಳ ನಡುವೆ ರೈತ ಬೆಳೆದ ಉತ್ಪನ್ನಕ್ಕೆ ಮಾರುಕಟ್ಟೆಯ ಹೊಸ್ತಿಲಲ್ಲಿ ಆಗುವ ಶೋಷಣೆಯೂ ಸೇರಿ ಪರಿಸ್ಥಿತಿಯು ರೈತನನ್ನು ಆತ್ಮಹತ್ಯೆಗೆ ದೂಡುತ್ತಿದೆ.

ಈ ಮೂರು ಸಮಸ್ಯೆಗಳಿಗೂ ಸೂಕ್ತ ಸಮಾಧಾನ ಜೈವಿಕಇಂಧನ ಕ್ಷೇತ್ರದಿಂದ ದೊರಕಬಹುದು ಎಂಬ ಆಶಯ ಕಾಣುತ್ತಿದೆ. ಹಾಗಾದರೆ ಜೈವಿಕ ಇಂಧನಕ್ಷೇತ್ರದಿಂದ ನಾವು ಈ ಮೂರೂ ಸವಾಲುಗಳನ್ನು ಮುಂದಿನ ದಿನಗಳಲ್ಲಿ ಎದುರಿಸಬಹುದಾದರೆ, ಅದನ್ನು ಯಾವ ರೀತಿ ಎದುರಿಸಬೇಕು? ಜೈವಿಕಇಂಧನ ಕಾರ್ಯಕ್ರಮ ಯಾವರೀತಿ ಇರಬೇಕು? ವಿಶೇಷವಾಗಿ ನಾವು ಇಂಧನ ಪೂರೈಕೆಯಲ್ಲಿ ಸ್ವಾವಲಂಬನೆ ಸಾಧಿಸಬೇಕು. ಅದನ್ನು ಸಾಧಿಸಲು ಬೇಕಾಗಿರುವಂತಹ ಸಂಪನ್ಮೂಲಗಳು ನಮ್ಮಲ್ಲಿ ಇದೆಯೇ? ಸಂಪನ್ಮೂಲ ಅಲ್ಲಿ ಇಲ್ಲಿ ದೊರಕಿದರೂ, ಅದನ್ನು ಶಕ್ತಿಯಾಗಿ ಪರಿವರ್ತನೆ ಮಾಡುವಂತಹ ತಂತ್ರಜ್ಞಾನ ನಮ್ಮ ಬಳಿ ಇದೆಯೇ? ಸಂಪನ್ಮೂಲ, ತಂತ್ರಜ್ಞಾನ ಇದ್ದರೂ ಅದನ್ನು ರೂಪಿಸಿಕೊಳ್ಳುವಂತಹ ಶಕ್ತಿ ನಮ್ಮಲ್ಲಿ ಇದೆ ಎನ್ನುವುದಾದರೆ ಅದಕ್ಕೆ ಅಗತ್ಯವಾದಂತಹ, ಪೂರಕವಾದಂತಹ ವಾತಾವರಣವನ್ನು ನಮ್ಮ ದೇಶದಲ್ಲಿ ಸೃಷ್ಟಿ ಮಾಡಿದ್ದೇವೆಯೇ? ಇದು ಬಹಳ ಮುಖ್ಯ.

ಒಟ್ಟಾರೆ ಈಗ ನಾವು ಬಳಕೆ ಮಾಡುತ್ತಿರುವ ಇಂಧನದಲ್ಲಿ ಶೇ.೫೫ರಷ್ಟು ಆಮದು ಮಾಡಿಕೊಳ್ಳುತ್ತೇವೆ. ವಿಶೇಷವಾಗಿ ಕಚ್ಚಾತೈಲಕ್ಕೆ ಸಂಬಂಧಪಟ್ಟಂತೆ ಶೇ.೮೩ರಷ್ಟು ನಾವು ಆಮದು ಮಾಡಿಕೊಳ್ಳುತ್ತಿದ್ದೇವೆ. ಆಮದು ಮಾಡಿಕೊಳ್ಳುತ್ತಿರುವ ಒಟ್ಟು ತೈಲದ ಬೆಲೆ ಪ್ರತಿ ವರ್ಷಕ್ಕೆ ಅಂದಾಜು ೬ರಿಂದ ೭ ಲಕ್ಷಕೋಟಿ ರೂಪಾಯಿಗಳು! ಇಷ್ಟೊಂದು ಮೊತ್ತವು ವಿದೇಶಿ ವಿನಿಮಯದ ಮೂಲಕ ಹೋದಾಗ ಆ ದೇಶದ ಆರ್ಥಿಕಸ್ಥಿತಿ ಉತ್ತಮಗೊಳ್ಳುತ್ತದೆಯೇ ವಿನಃ ನಮ್ಮ ದೇಶದ ಆರ್ಥಿಕ ಸ್ಥಿತಿಯಲ್ಲ! ಆದ್ದರಿಂದ ಈ ಕ್ಷೇತ್ರದಲ್ಲಿ ಸ್ವಾವಲಂಬನೆಯತ್ತ ಹೆಜ್ಜೆ ಹಾಕಬೇಕಾಗಿರುವುದು ಬಹಳ ಮುಖ್ಯ

ಇಂದು ನಾವು ಬಳಕೆ ಮಾಡುತ್ತಿರುವ ಎಲ್ಲಾ ಶಕ್ತಿಯನ್ನು 'ಹೈಡ್ರೋಕಾರ್ಬನ್ಸ್' ಎಂದು ಕರೆಯುತ್ತೇವೆ. ವಿದ್ಯುಚ್ಛಕ್ತಿ, ವಾಹನಗಳಿಗೆ ಅಗತ್ಯವಿರುವಂತಹ ಇಂಧನಗಳು, ಅಡಿಗೆಅನಿಲಗಳು ಮತ್ತು ರಸಗೊಬ್ಬರಗಳು- ಈ ಎಲ್ಲಾ ಇಂಧನಗಳಲ್ಲಿ ಇಂಗಾಲ (ಕಾರ್ಬನ್) ಇರುತ್ತದೆ. ಎಲ್ಲಾ ಇಂಧನಗಳೂ ಸೇರಿ ನಮ್ಮ ದೇಶದಲ್ಲಿ ಒಟ್ಟು ೩೦೦ರಿಂದ ೪೦೦ ಮಿಲಿಯನ್ ಮೆಟ್ರಿಕ್ ಟನ್ ಗಳಷ್ಟು ಇಂಗಾಲವನ್ನು ನಾವು ಬಳಕೆ ಮಾಡುತ್ತಿದ್ದೇವೆ. ಹೀಗೆ ಇಂಗಾಲದ ಬಳಕೆಗಾಗಿ ನಾವು ಕಚ್ಚಾತೈಲದಂತಹ ಇಂಧನಮೂಲಗಳನ್ನೇ ಅವಲಂಬಿಸಬೇಕಾಗಿಲ್ಲ. ನಾವು ತ್ಯಾಜ್ಯಗಳೆಂದು ತಿರಸ್ಕರಿಸುವ ಅನೇಕ ವಸ್ತುಗಳೇ ಕಾರ್ಬನ್ ಒದಗಿಸುವ ಸಂಪನ್ಮೂಲಗಳಾಗಿವೆ. ಧಾನ್ಯಗಳನ್ನು ಬೆಳೆಯುವ ಸಂದರ್ಭದಲ್ಲಿ ಉತ್ಪನ್ನವಾಗುವ ತ್ಯಾಜ್ಯವಸ್ತುಗಳೇ ಒಂದುಸಾವಿರ ಮಿಲಿಯನ್ ಮೆಟ್ರಿಕ್ ಟನ್ ಗಳಷ್ಟು ದೊಡ್ಡ ಪ್ರಮಾಣದವು. ಇದರಲ್ಲಿ ನಾವು ಗೊಬ್ಬರವಾಗಿ ಮಾರ್ಪಾಟು ಮಾಡುವ, , ದನಕರುಗಳಿಗೆ ಮೇವಾಗಿ ಬಳಸುವ ತ್ಯಾಜ್ಯವನ್ನು ಬಿಟ್ಟಂತೆ ಸುಮಾರು ೫೦೦ ಮಿಲಿಯನ್ ಮೆಟ್ರಿಕ್ ಟನ್ ಗಳಷ್ಟು ಕೃಷಿತ್ಯಾಜ್ಯಗಳನ್ನು ನಾಶ ಮಾಡುತ್ತಿದ್ದೇವೆ. ಇನ್ನು ನಮ್ಮ ದೊಡ್ಡದೊಡ್ಡ ನಗರಗಳಲ್ಲಿ ಉತ್ಪನ್ನವಾಗುವ ಘನತ್ಯಾಜ್ಯವು ತುಂಬಾ ದೊಡ್ಡ ಪ್ರಮಾಣದಲ್ಲಿದೆ. ಅದನ್ನು ಏನು ಮಾಡಬೇಕು ಎಂದು ತಿಳಿಯುತ್ತಿಲ್ಲ. ಅದನ್ನು ಒಂದು ಕಡೆ ಸುರಿಯುತ್ತಿರುವುದರಿಂದ ಅದರಿಂದ ಬೇರೆಬೇರೆ ಪರಿಸರ ಸಮಸ್ಯೆಗಳು ಎದುರಾಗುತ್ತಿರುವುದನ್ನು ಕಾಣುತ್ತಿದ್ದೇವೆ. ಅದರ ಜೊತೆಗೆ ಒಳಚರಂಡಿಯ ನೀರು, ಕೈಗಾರಿಕೆಗಳಿಂದ ಹೊರಬೀಳುವ ಬೇರೆಬೇರೆ ತ್ಯಾಜ್ಯವಸ್ತುಗಳು, ಪ್ರಾಣಿಗಳ ಸಗಣಿ ಮತ್ತಿತರ ತ್ಯಾಜ್ಯಗಳೂ ಇವೆ. ನಮ್ಮ ದೇಶದಲ್ಲಿ ಈಗ ೧೩೦

ಪುಟ 3 ರಲ್ಲಿ ಮುಂದುವರೆದಿದೆ



Biomass to Ethanol 12 TPD demo plant by Praj Industries

ಪುಟ 3 ರಿಂದ

ಕೋಟಿಗಳಷ್ಟು ಜನಸಂಖ್ಯೆ ಇದ್ದರೆ ನಾವು ೪೦ ರಿಂದ ೫೦ ಕೋಟಿಗಳಷ್ಟು ಪ್ರಾಣಿಗಳನ್ನು ಸಾಕಿದ್ದೇವೆ. ಪ್ರಾಣಿಮೂಲದ ತ್ಯಾಜ್ಯವಸ್ತು ಒಂದು ಬಿಲಿಯನ್ ಮೆಟ್ರಿಕ್ ಟನ್ ಗಳಷ್ಟು ಉತ್ಪಾದನೆಯಾಗುತ್ತಿದೆ. ಈ ನಾಲ್ಕೈದು ತ್ಯಾಜ್ಯವಸ್ತುಗಳನ್ನು ಮರುಬಳಕೆ ಮಾಡಿಕೊಂಡು ನಮ್ಮ ಇಂಧನ ಪೂರೈಕೆ ನಾವು ಮಾಡಬಹುದಾದರೆ ಈ ತ್ಯಾಜ್ಯವಸ್ತುಗಳಿಂದ ಪ್ರತಿವರ್ಷ ನಮಗೆ ಸುಮಾರು ೫೦೦ ರಿಂದ ೫೫೦ ಮಿಲಿಯನ್ ಮೆಟ್ರಿಕ್ ಟನ್ ಗಳಷ್ಟು ಇಂಗಾಲ ದೊರಕುತ್ತದೆ. ಈಗ ಬಳಕೆ ಮಾಡುತ್ತಿರುವ ಇಂಧನದಲ್ಲಿರುವ ಒಟ್ಟು ಕಾರ್ಬನ್ ೩೫೦ ಮಿಲಿಯನ್ ಮೆಟ್ರಿಕ್ ಟನ್ ಗಳು. ಅಂದರೆ, ಸದ್ಯದ ಇಂಧನಮೂಲಗಳಿಂದ ದೊರಕುತ್ತಿರುವುದಕ್ಕಿಂತ ಹೆಚ್ಚಿನ ಇಂಗಾಲದ ಅಂಶ ಈ ತ್ಯಾಜ್ಯ ವಸ್ತುಗಳಲ್ಲಿದೆ.

ಆಹಾರಧಾನ್ಯಗಳನ್ನು ಬೆಳೆಯಲು ಬಳಕೆ ಮಾಡುತ್ತಿರುವ ಈ ಭೂಮಿಯಲ್ಲಿ ಇಂಧನಕ್ಕಾಗಿ ಬೇಕಾಗಿರುವಂತಹ ಅನೇಕ ಬೆಳೆಗಳನ್ನು ಆಹಾರಧಾನ್ಯಗಳ ಜೊತೆಜೊತೆಗೆ ನಾವು ಬೆಳೆಯಲು ಸಾಧ್ಯವಿದೆ! ಒಂದುವೇಳೆ ಹಾಗೇನಾದರೂ ಆದರೆ ನಾವು ಈ ಇಂಧನ ಕ್ಷೇತ್ರದಲ್ಲಿ ಕೇವಲ ಸ್ವಾವಲಂಬಿಗಳಾಗುವುದಷ್ಟೇ ಅಲ್ಲದೆ ಮುಂದಿನ ದಿನಗಳಲ್ಲಿ ಇಂಧನ ಕ್ಷೇತ್ರದಿಂದ ಸಾಕಷ್ಟುಪ್ರಮಾಣದ ಇಂಧನವನ್ನು ಬೇರೆಬೇರೆ ದೇಶಗಳಿಗೂ ರಫ್ತು ಮಾಡಬಹುದು.

ನಮ್ಮಲ್ಲಿ ನೂರಾರು ಸಂಶೋಧನಾ ಸಂಸ್ಥೆಗಳಿವೆ. ಇವುಗಳ ಮೂಲಕ ಜೈವಿಕ ಇಂಧನ ಕ್ಷೇತ್ರದಲ್ಲಿಯೂ ಸಾಕಷ್ಟು ಸಂಶೋಧನೆಯನ್ನು ಮಾಡಲಾಗಿತ್ತು. ಆದರೆ ಏನಾಗಿತ್ತು ಎಂದರೆ ಒಂದು ಸಂಸ್ಥೆಯವರು ಮಾಡಿದ ಸಂಶೋಧನೆ ಇನ್ನೊಂದು ಸಂಸ್ಥೆಯವರಿಗೆ ಗೊತ್ತಿಲ್ಲ. ಇದರಿಂದಾಗಿ.ಯಾವುದೋ ಒಂದು ಒಳ್ಳೆಯ ಮಟ್ಟದವರೆಗೂ ಸಂಶೋಧನೆ ನಡೆದು ಆ ಸಂಶೋಧನೆಯ ಫಲವನ್ನು ಪಡೆದುಕೊಳ್ಳುವ ಸಮಯದಲ್ಲಿ ವಿಫಲರಾಗಿದ್ದೇವೆ. ಇದನ್ನು ಸರಿಪಡಿಸಲು, ಈರೀತಿಯ ಸಂಶೋಧನೆಯಲ್ಲಿ ತೊಡಗಿಸಿಕೊಂಡಿದ್ದ ಬೇರೆಬೇರೆ ವ್ಯಕ್ತಿಗಳು, ಸಂಸ್ಥೆಗಳು, ಉದ್ದಿಮೆದಾರರು ಇವರೆಲ್ಲರನ್ನೂ ಒಟ್ಟುಗೂಡಿಸಿ ಒಂದು ನೆಟ್ ವರ್ಕ ಮಾಡಿದೆವು. ಈ ಜಾಲದಲ್ಲಿ ಸುಮಾರು ೫ಸಾವಿರಕ್ಕಿಂತ ಅಧಿಕ ಪ್ರಮಾಣದಲ್ಲಿ ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವವರು ಒಟ್ಟಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಕಳೆದ ಆರು ವರ್ಷಗಳಲ್ಲಿಈ ಕ್ಷೇತ್ರದಲ್ಲಿ ಬಹಳಷ್ಟು ಕೆಲಸ ಆಗಿದೆ.ಇವತ್ತು ಬೇಕಾಗಿರುವಂತಹ ತಂತ್ರಜ್ಞಾನಗಳನ್ನು ನಮ್ಮ ದೇಶದಲ್ಲಿಯೇ ನಾವು ರೂಪಿಸಿಕೊಂಡಿದ್ದೇವೆ. ಕೃಷಿ ತ್ಯಾಜ್ಯವಸ್ತುಗಳಿಂದ ಹಿಡಿದು ನಾನು ಹೇಳಿರುವ ಎಲ್ಲ ಸಂಪನ್ಮೂಲವನ್ನೂ ಬಳಕೆ ಮಾಡಿಕೊಂಡು ಇಂಧನವಾಗಿ ಮಾಡುವಂತಹ ತಂತ್ರಜ್ಞಾನಗಳು ನಮ್ಮಲ್ಲಿಯೇ ಇವೆ.

ತಂತ್ರಜ್ಞಾನದ ಕೊರತೆಯನ್ನು ನೀಗಿಸುವ ನಿಟ್ಟಿನಲ್ಲಿ 'ಟಾರ್ಗೆಟೆಡ್ ರಿಸರ್ಚ್' ಅಂದರೆ " ವಿಶೇಷವಾಗಿ ಈ ಕೆಲಸವನ್ನೇ ಮಾಡಬೇಕು, ಈ ಕೆಲಸವನ್ನು ಮಾಡಲು ಇಂತಿಷ್ಟು ಹಣ ಪಡೆದು ಎರಡು ವರ್ಷಗಳಲ್ಲಿ ಈ ರೀತಿಯ ಕೆಲಸಗಳು ಆಗಬೇಕು.ಇಷ್ಟು ಡೆಲಿವರ್ ಮಾಡಬೇಕು." ಹೀಗೆ ಟಾರ್ಗೆಟೆಡ್ ರಿಸರ್ಚ್ ಮೂಲಕ ಈ ಎಲ್ಲಾ ಕ್ಷೇತ್ರಗಳಲ್ಲಿ ಇರುವಂತಹ ಕೊರತೆಗಳನ್ನು ನೀಗಿಸುವ ನಿಟ್ಟಿನಲ್ಲಿ ನಾವು ಕೆಲಸ ಮಾಡಬೇಕು. ಅಗತ್ಯ ತಂತ್ರಜ್ಞಾನವಿದೆ, ಇದಕ್ಕೆ ಬೇಕಾಗಿರುವಂತಹ, ಪೂರಕವಾದಂತಹ ವಾತಾವರಣವನ್ನು ಸೃಷ್ಟಿ ಮಾಡೋಣ.

ಮೋದಿಯವರ ಸರ್ಕಾರ ೨೦೧೪ರಲ್ಲಿ ಅಧಿಕಾರಕ್ಕೆ ಬಂದಂತಹ ಸಂದರ್ಭದಲ್ಲಿ ನೋಡಿದಾಗ ಇಡೀ ದೇಶದಲ್ಲಿ ಎಥೆನಾಲ್ ಬ್ಲೆಂಡಿಂಗ್ ಕೇವಲ ಶೇ.೧.೪ ರಷ್ಟು ಪ್ರಮಾಣದಲ್ಲಿತ್ತು. ಆದರೆ ನಮ್ಮ ಟಾರ್ಗೆಟ್ ಇದ್ದದ್ದು ಶೇ.೨೦. ಅದೇರೀತಿ ಡೀಸಲ್ ಬ್ಲೆಂಡಿಂಗ್ ನಾವು ಆರಂಭಿಸಿಯೇ ಇರಲಿಲ್ಲ. ಇನ್ನು ಬಯೋಗ್ಯಾಸ್, ಬಯೋಜೆಟ್ ಫ್ಯೂಯಲ್ ಇವುಗಳ ಬಗ್ಗೆ ಆದ್ಯತೆ ನೀಡಿರಲೇ ಇಲ್ಲ. ಆಗ ನಾವು ತಂತ್ರಜ್ಞಾನದಲ್ಲಿರುವ ಕೊರತೆಗಳನ್ನು ನೀಗಿಸಿಕೊಳ್ಳುವ ನಿಟ್ಟಿನಲ್ಲಿ ಕೆಲಸ ಆರಂಭ ಮಾಡಿ ದೇಶಕ್ಕೆ ಯಾವ ರೀತಿಯ ವಿಧಾನವನ್ನು ರೂಪಿಸಿಕೊಳ್ಳಬೇಕು ಎಂದು ನಿರ್ಧರಿಸಿ ೨೦೧೮ರಲ್ಲಿ 'ಜೈವಿಕ ಇಂಧನನೀತಿ'ಯನ್ನು ಅಳವಡಿಸಿಕೊಂಡೆವು. ೨೦೧೪ರಲ್ಲಿ ಶೇ.೧.೪ರಷ್ಟು ಇದ್ದಂತಹ ಎಥೆನಾಲ್ ಬ್ಲೆಂಡಿಂಗ್ ಈಗ ಅದು ಶೇ.೬ರಷ್ಟು ಆಗಿದೆ. ಹೊಸನೀತಿಯ ಪ್ರಕಾರ ಪೆಟ್ರೋಲಿನಲ್ಲಿ ಎಥೆನಾಲ್ ಬ್ಲೆಂಡಿಂಗ್ ೨೦೨೨ರ ಹೊತ್ತಿಗೆ ಶೇ.೧೦.ಅದೇರೀತಿ ೨೦೩೦ರಷ್ಟರಲ್ಲಿ ಶೇ.೨೦ ರಷ್ಟು ನಮ್ಮ ದೇಶದಲ್ಲಿಯೇ, ನಮ್ಮ ಸಂಪನ್ಮೂಲಗಳನ್ನು ಬಳಸಿಕೊಂಡು ತಯಾರು ಮಾಡಿದಂತಹ ಇಂಧನಗಳನ್ನು ಮಿಶ್ರಮಾಡಿ ಬಳಕೆ ಮಾಡುವುದು.ಅಷ್ಟರಮಟ್ಟಿಗೆ ನಾವು ಇಂಧನ ಕ್ಷೇತ್ರದಲ್ಲಿ ಸ್ವಾವಲಂಬಿಗಳಾಗಬೇಕು. ಇವೆಲ್ಲವನ್ನೂ ಯೋಚನೆಮಾಡಿ, ಇಂದು ಕೇವಲ ರಾಷ್ಟ್ರೀಯನೀತಿ ಮಾತ್ರವಲ್ಲ ಒಂದು ಸದೃಢವಾದಂತಹ ಬಲಿಷ್ಠವಾದಂತಹ ಕಾರ್ಯಕ್ರಮವನ್ನು ರಾಷ್ಟ್ರಮಟ್ಟದಲ್ಲಿ ಹಾಕಿಕೊಳ್ಳಲಾಗಿದೆ.ಈ ಮೊದಲೇ ತಿಳಿಸಿದಂತೆ ಎಲ್ಲಾ ಸಂಶೋಧನಾ ಕ್ಷೇತ್ರಗಳಲ್ಲಿ ಕೆಲಸ ಮಾಡಿದಂತಹ ಸಂಸ್ಥೆಗಳು, ಉದ್ದಿಮೆದಾರರು ಎಲ್ಲರನ್ನೂ ತೊಡಗಿಸಿಕೊಂಡು ೨೦೨೨/೨೦೩೦ ಇಸವಿಯಷ್ಟರಲ್ಲಿ ನಿರೀಕ್ಷಿಸಿದಂತಹ ಗುರಿಯನ್ನು ತಲುಪುವ ನಿಟ್ಟಿನಲ್ಲಿ ಕೆಲಸವನ್ನು ಮಾಡಬೇಕಿದೆ.


ತಂತ್ರಜ್ಞಾನ ಕ್ಷೇತ್ರದ ಬಗ್ಗೆ ಹೇಳುವುದಾದರೆ ಉದಾ: ಕೃಷಿತ್ಯಾಜ್ಯ ವಸ್ತುಗಳಿಂದ ಎಥೆನಾಲ್ ತಯಾರಿಸಬೇಕು. ಪ್ರಪಂಚದಲ್ಲಿ ಇದಕ್ಕೆಲ್ಲೂ ತಂತ್ರಜ್ಞಾನ ಇಲ್ಲ. ೨೦ ವರ್ಷಗಳಿಂದ ಇಂತಹ ಪ್ರಯತ್ನ ನಡೆದಿದೆ, ಆದರೆ ಎಲ್ಲಿಯೂ ಸಫಲವಾದ ಉದಾಹರಣೆಗಳು ಇಲ್ಲ. ಆದರೇ ನಮ್ಮ ದೇಶದಲ್ಲಿ ತಯಾರಾದಂತಹ ಒಂದೆರಡು ತಂತ್ರಜ್ಞಾನಗಳನ್ನು ಹೊಂದಿದ್ದು, ಅದನ್ನು ಕಮರ್ಷಿಯಲ್ ಸ್ಕೇಲ್ ನಲ್ಲಿ ತೆಗೆದುಕೊಂಡು ಹೋಗುವಂತಹ ಕೆಲಸ ಮಾಡಿದ್ದೀವಿ.ಇಂದು ಐದುನೂರು ಮೆಟ್ರಿಕ್ ಟನ್ ಗಳಷ್ಟು ಕೃಷಿತ್ಯಾಜ್ಯವನ್ನು ಬಳಸಿ ಪ್ರತಿದಿನ ಒಂದು ಲಕ್ಷಲೀಟರ್ ಎಥೆನಾಲ್ ತಯಾರು ಮಾಡುವಂತಹ ತಂತ್ರಜ್ಞಾನಗಳನ್ನು ನಮ್ಮ ದೇಶದಲ್ಲಿ ರೂಪಿಸಲಾಗಿದ್ದು ಈ ಮಾದರಿಯ ೧೩ ಘಟಕಗಳ ಸ್ಥಾಪನೆಗೆ ಚಾಲನೆ ನೀಡಲಾಗಿದೆ.

ನಮ್ಮ ದೇಶದಲ್ಲಿ ಒಟ್ಟು ೧೮-೨೦ ರಿಫೈನರಿಗಳಿವೆ. ಆ ರಿಫೈನರಿಗಳಿಂದ ನಾವು ದೊಡ್ಡ ಪ್ರಮಾಣದ ಪೆಟ್ರೋಲ್,ಡೀಜಲ್ ಅನಿಲಗಳನ್ನು ತಯಾರು ಮಾಡುವಂತಹ ಸಂದರ್ಭದಲ್ಲಿ ಬೃಹತ್ಮೊತ್ತದಲ್ಲಿ ಕಾರ್ಬನ್ ಡಯಾಕ್ಸೈಡ್, ಕಾರ್ಬನ್ ಮಾನಾಕ್ಸೈಡ್, ಹೈಡ್ರೋಜನ್ ಇವೆಲ್ಲವನ್ನೂ ನಾವು ವಾತಾವರಣಕ್ಕೆ ಬಿಟ್ಟು ಬಿಡುತ್ತೇವೆ. ಅಂದರೆ ಇವುಗಳು ವ್ಯರ್ಥವಾಗುತ್ತಿವೆ. ದೊಡ್ಡದೊಡ್ಡ ಕಾರ್ಖಾನೆಗಳಿಂದ ಹೊರಹೊಮ್ಮುವಂತಹ ಅನಿಲಗಳು ಪರಿಸರವನ್ನು ಮಾಲಿನ್ಯಗೊಳಿಸುತ್ತಿವೆ. ಅದನ್ನು ಸಹ ತಡೆಗಟ್ಟಿ ಉಪಯೋಗ ಮಾಡಿಕೊಳ್ಳಬಹುದು. ಅದಕ್ಕೆ ಭಿನ್ನವಾದ ತಂತ್ರಜ್ಞಾನದ ಅವಶ್ಯಕತೆ ಇದೆ. ಅದನ್ನು 'ಗ್ಯಾಸ್ ಫರ್ಮಂಟೇಷನ್' ಎಂದು ಕರೆಯುತ್ತಾರೆ. ಆ ಅನಿಲದಿಂದ ಎಥೆನಾಲ್ ತಯಾರು ಮಾಡುವಂತಹ ಪ್ರಪಂಚದ ಮೊಟ್ಟಮೊದಲ ಘಟಕ ನಮ್ಮ ದೇಶದ ಪಾಣಿಪಟ್ ನಲ್ಲಿ ಸ್ಥಾಪಿತವಾಗುತ್ತಿದೆ. ಇದು ಮುಂದಿನ ವರ್ಷದ ಕೊನೆಯಲ್ಲಿ ತನ್ನ ಕಾರ್ಯವನ್ನು ಆರಂಭಿಸುತ್ತದೆ. ಪ್ರತಿದಿನ ಒಂದು ಕಾರ್ಖಾನೆಯಿಂದ ಹೊರಹೊಮ್ಮುವ ಅನಿಲದಿಂದ ಒಂದು ಲಕ್ಷ ಲೀಟರ್ ಗಳಷ್ಟು ಎಥೆನಾಲ್ ಉತ್ಪತ್ತಿಯಾಗುತ್ತದೆ.ಅಂದರೆ ವರ್ಷದಲ್ಲಿ ಮೂರೂವರೆ ಕೋಟಿ ಲೀಟರ್ ನಷ್ಟು ಎಥನಾಲ್ ಒಂದು ಘಟಕದಲ್ಲಿ ತಯಾರಾಗುತ್ತದೆ. ಈ ಯೋಜನೆ ಯಶಸ್ವಿಯಾದರೆ, ಆಗ ದೇಶದಲ್ಲಿರುವ ಎಲ್ಲಾ ರಿಫೈನರಿಗಳು, ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳಿಂದ ಹೊರಹೊಮ್ಮುತ್ತಿರುವ ಅನಿಲ ತ್ಯಾಜ್ಯಗಳನ್ನು ಬಳಸಿಕೊಂಡು ಅದನ್ನು ಶಕ್ತಿಯಾಗಿ ಪರಿವರ್ತಿಸುವಂತಹ ತಂತ್ರಜ್ಞಾನವನ್ನು ಬಳಸಿಕೊಂಡು ಎಥೆನಾಲ್ ತಯಾರಿಸುವಂತಹ ಘಟಕಗಳನ್ನು ಸ್ಥಾಪಿಸಬಹುದಾಗಿದೆ.

ಮುಖ್ಯವಾಗಿ ಇವೆಲ್ಲ ನಮ್ಮ ದೇಶದ್ದೇ ತಂತ್ರಜ್ಞಾನ, ನಾವು ತಂತ್ರಜ್ಞಾನದಲ್ಲಿ ಹಿಂದೆ ಉಳಿದಿಲ್ಲ. ೧೮೯೩ರಲ್ಲೇ ಪ್ರಪಂಚದ ಮೊಟ್ಟಮೊದಲ ಜೈವಿಕ ಇಂಧನ ಘಟಕವನ್ನು ಬಾಂಬೆ ನಗರದ ಮಾತುಂಗದಲ್ಲಿ ಸ್ಥಾಪಿಸಲಾಗಿತ್ತು. ನಮ್ಮ ರಾಜ್ಯದ ಮಂಡ್ಯಜಿಲ್ಲೆಯಲ್ಲಿ ೧೯೪೦ರಲ್ಲಿ ಮೊಟ್ಟಮೊದಲಬಾರಿಗೆ ಎಥೆನಾಲ್ ಅನ್ನು ತಯಾರು ಮಾಡಲಾಗಿತ್ತು. ಎರಡನೆಯ ಮಹಾಯುದ್ಧ ಆಗುತ್ತಿದ್ದ ಸಂದರ್ಭದಲ್ಲಿ ಮಂಡ್ಯ ನಗರದಲ್ಲಿ ತಯಾರಾಗುತ್ತಿದ್ದ ಎಥೆನಾಲ್ ಅನ್ನು ಮುಂಬೈಗೆ ತೆಗೆದುಕೊಂಡು ಹೋಗಿ ಶೇ.೨೦ರಷ್ಟು ಬ್ಲೆಂಡಿಂಗ್ ಮಾಡಲಾಗಿತ್ತು.

ಜೈವಿಕ ಇಂಧನ ಅನಿಲ ಕ್ಷೇತ್ರದಲ್ಲಿ ಸುಮಾರು ೫ ಸಾವಿರ ಘಟಕಗಳನ್ನು ನಾವು ೨೦೨೩ ರೊಳಗೆ ದೇಶದಲ್ಲಿ ಸ್ಥಾಪಿಸುವ ಪುಟ 7 ರಲ್ಲಿ ಮುಂದುವರೆದಿದೆ

## ಅನಂತಪಥದ ಐದನೆಯ ಸಂಚಿಕೆ ಬಿಡುಗಡೆ




ನವೆಂಬರ್ ೨೨, ೨೦೨೦ರಂದು ನಡೆದ ಅನಂತಪಥದ ೫ನೆಯ ಸಂಚಿಕೆಯ ಬಿಡುಗಡೆ ಕಾರ್ಯಕ್ರಮದಲ್ಲಿ ಭಾರತ ಸರ್ಕಾರದ ಜೈವಿಕ ಇಂಧನ ಕಾರ್ಯಪಡೆಯ ತಜ್ಞ ಸದಸ್ಯರಾದ ಶ್ರೀ ವೈ. ಬಿ. ರಾಮಕೃಷ್ಣ ರವರು ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಸಂಚಿಕೆಯನ್ನು ಬಿಡುಗಡೆ ಮಾಡಿ ಮಾತನಾಡಿದ ಶ್ರೀ ರಾಮಕೃಷ್ಣ ಅವರು ತಮಗೆ ಈ ಸದವಕಾಶವನ್ನು ಒದಗಿಸಿದುದಕ್ಕಾಗಿ ಶ್ರೀಮತಿ ತೇಜಸ್ವಿನಿಯವರಿಗೂ ಅನಂತ ಪಥದ ಎಲ್ಲಾ ಪದಾಧಿಕಾರಿಗಳಿಗೂ ವಂದನೆ ಸಲ್ಲಿಸಿದರು. ಅನಂತಕುಮಾರ್ ಅವರೊಡನೆ ತಾವು ವಿದ್ಯಾರ್ಥಿಪರಿಷತ್ತಿನಲ್ಲಿ ಕೆಲಸ ಮಾಡುವ ಸಂದರ್ಭದಲ್ಲಿ ನಡೆದ ಘಟನೆಗಳನ್ನು ನೆನಪಿಸಿಕೊಂಡ ರಾಮಕೃಷ್ಣರವರು, ಅನಂತ ಕುಮಾರ್ ಅವರ ಅನೇಕ ಕನಸುಗಳನ್ನು ಹಂಚಿಕೊಳ್ಳುವುದು ಮತ್ತು ಅವರ ಕನಸುಗಳನ್ನು ನನಸು ಮಾಡುವ ಕೆಲಸ ಅನಂತಕುಮಾರ್ ಪ್ರತಿಷ್ಠಾನದ ಕಡೆಯಿಂದ ನಡೆಯಬೇಕಾಗಿದೆ ಎಂದರು. ಅನಂತಕುಮಾರ್ ಪ್ರತಿಷ್ಠಾನದ ಕಡೆಯಿಂದ ಅದಕ್ಕೆ ಕನ್ನಡಿಯಾಗಿ ಅನಂತಪಥ ಇರುತ್ತದೆ. ಎಲ್ಲರಿಗೂ ವಿಚಾರಗಳನ್ನು ಹಂಚಿಕೊಳ್ಳಲು ಈ ಅನಂತಪಥ ಸಹಾಯಕಾರಿಯಾಗುತ್ತದೆ ಎಂದು ಆಶಿಸಿದರು . ಇದೇ ಕಾರ್ಯಕ್ರಮದ ಮುಂದುವರಿದ ಭಾಗವಾಗಿ, ಪ್ರತಿಷ್ಠಾನವು ಹಮ್ಮಿಕೊಳ್ಳುತ್ತಿರುವ ವಿಶೇಷ ಉಪನ್ಯಾಸ ಮಾಲಿಕೆಯ ಅಂಗವಾಗಿ " ಆತ್ಮನಿರ್ಭರ ಭಾರತದೆಡೆಗೆ ಜೈವಿಕ ಇಂಧನ" ಎಂಬ ವಿಷಯವನ್ನು ಕುರಿತು ಶ್ರೀ ರಾಮಕೃಷ್ಣ ಭಾಷಣ ಮಾಡಿದರು. ಈ ಉಪನ್ಯಾಸದ ಸಾರಾಂಶವನ್ನು ಇದೇ ಸಂಚಿಕೆಯ ಎರಡನೆಯ ಪುಟದಲ್ಲಿ ಓದಬಹುದಾಗಿದೆ.

# ಕುಮಾರರಾಗಿ ಬಂದು ಅನಂತವಾಗಿ ಬೆಳೆದವರು

ಶ್ರೀ ದತ್ತಾತ್ರೇಯ ಹೊಸಬಾಳೆ, ಸಹ ಸರಕಾರ್ಯವಾಹರು, ರಾಷ್ಟ್ರೀಯ ಸ್ವಯಂಸೇವಕ ಸಂಘ

ನಾನು ಕಂಡಂತೆ



ಅನಂತಕುಮಾರ್

ಅಕ್ಟೋಬರ್ ೨೯, ೨೦೧೮. ಅಂದು ಸಂಜೆ ಅನಂತ್ ಅವರನ್ನು ನೋಡಬೇಕೆಂಬ ಹಂಬಲದಿಂದ ಬೆಂಗಳೂರಿಗೆ ಬಂದೆ. ಆಗ ಮುಂಬೈನಲ್ಲಿ ಸಂಘದ ಬೈಠಕ್ ಇತ್ತು. ಆದರೂ ತೇಜಸ್ವಿನಿಯವರ ಜೊತೆ ಮಾತುಕತೆ ನಡೆಸಿ ಪರಿಸ್ಥಿತಿಯನ್ನು ತಿಳಿದು ಬರಲೇಬೇಕೆಂದು ಬಂದೆ. ಆಸ್ಪತ್ರೆಗೆ ಹೋದೆ. ಡಾ.ಶ್ರೀನಾಥ್ ಕೂಡ ಅಲ್ಲಿದ್ದರು. ರಾತ್ರಿ ಹನ್ನೆರಡು ಹನ್ನೆರಡೂವರೆ ಆದರೂ ಅವರಾರೂ ನನ್ನನ್ನು ಒಳಗೆ ಹೋಗಿ ಅನಂತ್ ರನ್ನು ನೋಡಲು ಬಿಡಲಿಲ್ಲ. ಆ ಸ್ಥಿತಿಯಲ್ಲಿ ಪ್ರಾಯಶಃ ಸ್ವತಃ ತಾವು ಬೇರೆಯವರನ್ನಾಗಲೀ ಅಥವಾ ಬೇರೆಯವರು ತಮ್ಮನ್ನಾಗಲಿ ಭೇಟಿ ಮಾಡುವುದನ್ನು ಅನಂತಕುಮಾರ್ ಅವರು ಇಷ್ಟಪಡುತ್ತಿರಲಿಲ್ಲ. ನಾನು ವೈದ್ಯರೊಂದಿಗೆ ಮಾತನಾಡಿ ನಾಳೆ ಬೆಳಗ್ಗೆ ನಾನು ಬೆಂಗಳೂರಿನಿಂದ ಹೊರಡುವುದಾಗಿ ತಿಳಿಸಿದೆ. ಕಳೆದ ಬಾರಿ ನಾನು ಬೆಂಗಳೂರಿನಲ್ಲೇ ಇದ್ದಾಗ ಅಮೆರಿಕದಿಂದ ಅನಂತ್ ಮರಳಿ ಬಂದಿದ್ದರು. ಆಗಲೂ ಅವರನ್ನು ಭೇಟಿಯಾಗಲು ಸಾಧ್ಯವಾಗಿರಲಿಲ್ಲ. ಬಹುಶಃ ಈಗಲೂ ಆಗುವುದಿಲ್ಲ ಎನ್ನಿಸಿತು. ಆದರೆ, ಡಾಕ್ಟರ್ ಮಾರನೆಯ ದಿನ ಬೆಳಗ್ಗೆ ಎಂಟೂವರೆ ಹೊತ್ತಿಗೆ ನನ್ನನ್ನು ಬರಲು ಹೇಳಿದರು. ಬೆಳಗ್ಗೆ ಅದೇ ಸಮಯಕ್ಕೆ ಹೋದೆ. ಅನಂತ್ ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ. ಕೈ ಕುಲುಕಿದರು. ನಾನು ಒಂದು ಮಾತು ಹೇಳಿದೆ: " ಅನಂತ್ , ನೀವು ಯಾವುದೇ ಪರೀಕ್ಷೆಯಲ್ಲಿ ಫೇಲಾಗಿಲ್ಲ, ಯಾವುದೇ ಹೋರಾಟದಲ್ಲೂ ವಿಫಲರಾಗಿಲ್ಲ, ಎಲ್ಲ ಚುನಾವಣೆಯಲ್ಲೂ ನೀವು ಗೆದ್ದಿದ್ದೀರಿ. ತೇಜಸ್ವಿನಿಯವರ ಪಾಲಿಗೆ, ಕರ್ನಾಟಕಕ್ಕೆ, ಪಕ್ಷಕ್ಕೆ ಹಾಗೂ ನಮ್ಮೆಲ್ಲರಿಗಾಗಿ ನೀವು ಅನೇಕ ವರ್ಷಗಳ ಕಾಲ ಇರಬೇಕಾಗಿದೆ. ಅದಕ್ಕಾಗಿ ನೀವು ಈ ಹೋರಾಟದಲ್ಲಿ ಗೆದ್ದು ಈ ಆಸ್ಪತ್ರೆಯಿಂದ ಹೊರಗೆ ಬರಬೇಕಾಗಿದೆ, ಬರ್ತೀರಿ " ಎಂದೆ. ಅವರು ತಮ್ಮ ಬಲಗೈ ಎತ್ತಿ ಹೆಬ್ಬೆರಳು ಮೇಲೆ ಮಾಡಿ ತೋರಿಸಿದರು. ಅದೇ ಚಿತ್ರ ಈಗಲೂ ನನ್ನ ಮನಸ್ಸಿನಲ್ಲಿದೆ. ಅನಂತ್ ಯಾವಾಗಲೂ ಗೆಲುವು ತಮ್ಮದಾಗುತ್ತೆ ಎಂದು ಹೆಬ್ಬೆರಳು ಮೇಲೆ ಮಾಡಿ ತೋರಿಸುತ್ತಿದ್ದ ವ್ಯಕ್ತಿ. ಆದರೆ ಮನುಷ್ಯ ತನ್ನ ಅಂತಿಮ ಹೋರಾಟದಲ್ಲೇ ಸೋಲುತ್ತಾನೆ. ಏಕೆಂದರೆ, ಅದರ ನಂತರ ಹೋರಾಟ ಇರುವುದಿಲ್ಲ. ಇದೇ ಅಂತಿಮ ಹೋರಾಟ ಎಂಬುದು ನಮಗೆ ಗೊತ್ತಿರಲಿಲ್ಲ, ಪ್ರಾಯಶಃ ಅನಂತ್ ಅವರಿಗೆ ಗೊತ್ತಿತ್ತು. ಅವತ್ತೇ ಅಲ್ಲ, ಅವರಿಗೆ ಮುಂಚೆಯೇ ಗೊತ್ತಿತ್ತು. ಆದರೂ ನಾನು ಗೆಲ್ತೀನಿ ಅಂತಲೇ ಅವರು ಹಲವಾರು ಜನರೊಡನೆ ಹೇಳಿದ್ದರು.

ಅನಂತಕುಮಾರ್ ಅವರನ್ನು ನಾನು ಮೊದಲು ಭೇಟಿಯಾಗಿದ್ದು .ಅವರು ಪಿಯುಸಿ ವಿದ್ಯಾರ್ಥಿಯಾಗಿದ್ದಾಗ . ಜಯಪ್ರಕಾಶ್ ನಾರಾಯಣರ ಆಂದೋಲನದಲ್ಲಿ ಭಾಗವಹಿಸಿದ ಅತ್ಯಂತ ಕಿರಿಯ ವಿದ್ಯಾರ್ಥಿಗಳಲ್ಲಿ ಅವರೂ ಒಬ್ಬರು. ಅನಂತ್ ನನಗಿಂತ ಐದು ವರ್ಷ ಚಿಕ್ಕವರು. ಅವರ ತಂದೆ, ತಾಯಿ, ಇಡೀ ಮನೆಯೊಂದಿಗೆ ಸಂಘಟನೆಯ ಕಾರ್ಯಕರ್ತರಿಗೆ ಘನಿಷ್ಠವಾದ ಸಂಬಂಧವಿತ್ತು. ನಾನೂ ಅವರೂ ಒಟ್ಟೊಟ್ಟಿಗೇ ಕೆಲಸ ಮಾಡಿದವರು. ಹಲವಾರು ಸಂಗತಿಗಳನ್ನು ಪರಸ್ಪರ ಹಂಚಿಕೊಂಡಿದ್ದೇವೆ. ಅದೆಷ್ಟೋ ವೇಳೆ ರೈಲಿನಲ್ಲಿ ಒಂದೇ ಬರ್ತ್ ನಲ್ಲಿ ನಾವಿಬ್ಬರೂ ಮಲಗಿ ಪ್ರಯಾಣಿಸಿದ್ದೇವೆ. ವಿದ್ಯಾರ್ಥಿ ಪರಿಷತ್ ದಿನಗಳಲ್ಲಿ ಅನಂತ್ ಅವರು ಗ್ರೂಪ್ ಲೀಡರ್ ಆಗಿದ್ದರು. ಅವರು ಇದ್ದಲ್ಲಿ ನೇತೃತ್ವ ಇತ್ತು, ಅವರು ಇದ್ದಲ್ಲಿ ನಗೆಚಾಟಿ ಇರುತ್ತಿತ್ತು. ಅವರು ಇದ್ದಲ್ಲಿ ವಿಚಾರವೂ ಇರುತ್ತಿತ್ತು. ಅಲ್ಲಿ ಸ್ನೇಹ ಇರುತ್ತಿತ್ತು, ಕರ್ತವ್ಯ ಇತ್ತು. ಭಾವನೆಗಳಿರುತ್ತಿದ್ದವು .ಇವೆಲ್ಲ ಸಮೃದ್ಧಿಯ ಸಂಕೇತವಾಗಿತ್ತು ಅವರ ಮುಖ.

ಮನುಷ್ಯನ ಬೆಳವಣಿಗೆಯಲ್ಲಿ ವಂಶ, ಸನ್ನಿವೇಶ-ಸುತ್ತಲಿನ ಪರಿಸ್ಥಿತಿ ಮತ್ತು ಸ್ವಪ್ರಯತ್ನ ಈ ಮೂರೂ ಇರುತ್ತವೆ. ಅನಂತಕುಮಾರ್ ಅವರ ವಂಶ ತಾಯಿ ತಂದೆ ಎರಡೂ ಕಡೆಯಲ್ಲೂ ವಿದ್ವಾಂಸರ ವಂಶ. ಸಮಾಜದ ಬಗ್ಗೆ ಕಳಕಳಿ ಇಟ್ಟುಕೊಂಡಿದ್ದಂತಹ ತಲೆಮಾರು. ಅವರು ಸನ್ನಿವೇಶದಿಂದಾಗಿ ಬೆಳೆದರು. ಸಂಘದ ಶಾಖೆಗೆ ಬಂದರು, ವಿದ್ಯಾರ್ಥಿ ಪರಿಷತ್ ಕಾರ್ಯಕರ್ತರಾಗಿ ರಾಜ್ಯದ ಉದ್ದಗಲಕ್ಕೂ ಓಡಾಡಿದರು. ಅಖಿಲ ಭಾರತ ಮಟ್ಟದ ಪದಾಧಿಕಾರಿಯಾಗಿಯೂ ಆದರು. ದೇಶದ ಅನೇಕ ಕಡೆ ನಡೆದ ಕಾರ್ಯಕ್ರಮ, ಹೋರಾಟಗಳಲ್ಲಿ ಅವರು ಆ ವಯಸ್ಸಿನಲ್ಲಿಯೇ ಭಾಗಿಯಾದರು. ಅವರು ಆನಂತರ ಭಾಜಪದ ಕೋರ್ ಟೀಂನಲ್ಲಿಯೂ ಇದ್ದರು. ತನಗೇ ತಾನು ಶಿಲ್ಪಿಯಾಗಿ ಸ್ವಪ್ರಯತ್ನದಿಂದ ಅವರು ಬೆಳೆದರು. ೩೬ ನೇ ವಯಸ್ಸಿನಲ್ಲಿ ಬೆಂಗಳೂರಿನಂತಹ ಒಂದು ಮಹಾನಗರದಿಂದ ಚುನಾವಣೆಯಲ್ಲಿ ಗೆದ್ದು ಲೋಕಸಭೆ ಪ್ರವೇಶಿಸಿದ್ದಲ್ಲದೆ, ಸತತ ಆರು ಬಾರಿ ಅದೇ ಕ್ಷೇತ್ರದಿಂದ ಆಯ್ಕೆಯಾದರು. ಇಡೀ ದಕ್ಷಿಣ ಭಾರತದಲ್ಲಿ ಭಾಜಪಕ್ಕೆ ಇಂತಹ ಒಂದು ಗೆಲುವನ್ನು ಯಾರೂ ತಂದುಕೊಟ್ಟಿಲ್ಲ.

ನಾನು ಮೊನ್ನೆ ವಾರಾಣಸಿಯಲ್ಲಿ ಓರ್ವ ಕಾರ್ಯಕರ್ತರನ್ನು ಭೇಟಿಯಾಗಿದ್ದೆ. ಅವರು ಹೇಳಿದರು; ತನ್ನ ತಂದೆ ಹಿಂದೆ ಜನಸಂಘದ ಕಾರ್ಯಕರ್ತರಾಗಿದ್ದರು ಎಂಬುದನ್ನು ತಿಳಿದು ಅದೊಂದೇ ಕಾರಣಕ್ಕಾಗಿ ಅನಂತಕುಮಾರ್ ಅವರು ನನ್ನನ್ನು ಹುಡುಕಿಕೊಂಡು ನಮ್ಮ ಮನೆಗೆ ಬಂದಿದ್ದರು ಎಂದು ಹೇಳುತ್ತಲೇ ಕಣ್ಣೀರು ಹಾಕಿದರು. ಭೇಟಿ ಮಾಡಿದ್ದು ಒಂದೇ ಸಾರಿ ಇರಬಹುದು, ಆದರೆ ಮರೆಯಲಾಗದ ಛಾಪನ್ನು, ಸ್ನೇಹವನ್ನು, ಭಾವನೆಯ ಆ ಬೆಸುಗೆಯನ್ನು ಅವರು ಮೂಡಿಸಿದ್ದರು.



ಅನಂತಕುಮಾರ್ ಬರೆಹದಲ್ಲಿ, ಭಾಷಣದಲ್ಲಿ ಅತ್ಯಂತ ಕೌಶಲ್ಯ ಹೊಂದಿದ್ದವರು. ವಿದ್ಯಾರ್ಥಿ ಕಾರ್ಯಕರ್ತನಾಗಿ, ಲೋಕಸಭೆಯಲ್ಲಿ ಭಾಗಿಯಾಗಿ, ಹಲವಾರು ಸಭೆಗಳಲ್ಲಿ ಭಾಷಣಕಾರರಾಗಿ ಅವರು ಹುರುಪಿನಿಂದ ಮಾತನಾಡಿದವರು. ಅವರ ಮಾತಿನಲ್ಲಿ ವಿದ್ವತ್ ಇರುತ್ತಿತ್ತು. ಅವರು ಇಂಗ್ಲೀಷ್ ಸಾಹಿತ್ಯ ಓದಿದವರು, ದೇಶದ ಇತಿಹಾಸ ಬಲ್ಲವರು, ದೇಶದ ಉದ್ದಗಲಕ್ಕೂ ಓಡಾಡಿದವರು. ಅವರಿಗೆ ಸಾಹಿತ್ಯದ ರುಚಿ ಇತ್ತು, ವಿಜ್ಞಾನದ ಬಗ್ಗೆ ಕುತೂಹಲವಿತ್ತು, ಸಮಾಜ ಸೇವೆಯಲ್ಲಿ ಕಳಕಳಿ ಇತ್ತು, ಜೀವನದ ಬಗ್ಗೆ ಪ್ರೀತಿ ಇತ್ತು. ಅವರು ಅದಮ್ಯ ಉತ್ಸಾಹದ ವ್ಯಕ್ತಿಯಾಗಿದ್ದರು. ಎಂತಹ ದುಃಖದ ಸಂದರ್ಭದಲ್ಲೂ ನಗೆಯನ್ನು ತರಬಲ್ಲ, ಎಂತಹ ನಗೆಯಲ್ಲೂ ಕರ್ತವ್ಯವನ್ನು ಮರೆಯದಂತಹ, ಎಂತಹ ಕರ್ತವ್ಯದಲ್ಲೂ ವಿಚಾರಕ್ಕೆ ಒತ್ತು ಕೊಡುವಂತಹ ವ್ಯಕ್ತಿತ್ವ ಅವರದಾಗಿತ್ತು.

ಇಂತಹ ಓರ್ವ ಸ್ನೇಹಿತ, ಸಹೋದರ ಇಂದು ಇಲ್ಲ ಅನ್ನಿಸಿದಾಗ ಮನಸ್ಸಿಗೆ ನೋವಷ್ಟೇ ಅಲ್ಲ, ನಮ್ಮ ವ್ಯಕ್ತಿತ್ವದ ಒಂದು ಭಾಗವೇ ಕಳಚಿಹೋದಂತೆ ಅನ್ನಿಸುತ್ತದೆ. ಅವರು ಅನೇಕ ರಾಜ್ಯಗಳಿಗೆ ಪ್ರಭಾರಿಯಾಗಿ ಕೆಲಸ ಮಾಡಿದ್ದರು. ಸಂಘದ ಜವಾಬ್ದಾರಿ ನಿರ್ವಹಣೆಗಾಗಿ ೮-೯ ವರ್ಷ ಬಿಹಾರದ ಪಟ್ನಾ ನನ್ನ ಕೇಂದ್ರವಾಗಿತ್ತು. ಆ ಸಂದರ್ಭದ ನಡುವೆಯೇ ಬಿಹಾರದ ಚುನಾವಣೆ ಬಂತು. ಅನಂತಕುಮಾರ್ ಬಿಹಾರದ ಪ್ರಭಾರಿಯಾಗಿ ಬಂದರು. ಅಲ್ಲಿಯೇ ನಾನು ಇದ್ದುದರಿಂದ ಆ ರಾಜ್ಯದ ಹಲವಾರು ಪ್ರಮುಖರ ಪರಿಚಯ ನನಗೂ ಇತ್ತು. ಹಾಗಾಗಿ ಒಂದು ದಿನ ರಾತ್ರಿ ಅನಂತ್ ನನ್ನ ವಸತಿಯಲ್ಲಿ ಬಂದು ಕುಳಿತರು. ರಾತ್ರಿ ೨-೩ ಗಂಟೆಯವರೆಗೂ ಬಿಹಾರದ ಬಗ್ಗೆ ಬಹಳ ಚರ್ಚೆ ಆಯಿತು. ಯಾರ್ಯಾರಿಗೆ ಟಿಕೆಟ್ ಕೊಡಬಹುದು ಎಂದು ಅವರು ನನ್ನ ಬಳಿ ಕೇಳಿದರು. ಆ ವಿಷಯವನ್ನು ನಾನಂತೂ ಹೇಳುವುದಿಲ್ಲ ಎಂದೆ. ಯಾರಿಗೆ ಟಿಕೆಟ್ ನೀಡಬೇಕು ಎಂಬ ಬಗ್ಗೆ ನೀವೂ ನನ್ನನ್ನು ಕೇಳಬಾರದು; ನಾನೂ ಹೇಳುವುದಿಲ್ಲ ಎಂದೆ. ಸರಿ, ಎಂದು ಹೊರಟುಹೋದರು. ಇದಾದ ನಾಲ್ಕನೇ ದಿನಕ್ಕೆ ಫೋನ್ ಬಂತು- ಒಂದು ಕ್ಷೇತ್ರದ ಬಗ್ಗೆ ಮಾತ್ರ ನಿಮ್ಮ ಬಳಿ ಕೇಳಬೇಕು ಎಂದರು. ಆಗ ನಾನು, ಅನಂತ್ ನೀವೂ-ನಾನೂ ಕೊಟ್ಟ ಮಾತನ್ನು ನೆನಪಿಟ್ಟುಕೊಳ್ಳಬೇಕಲ್ವೇ ಎಂದೆ. ಇಲ್ಲ ಬಹಳ ಸಂದಿಗ್ಧದಲ್ಲಿದ್ದೇನೆ ಎಂದರು. ಆಗ ನಾನು ನೀವು ಏನು ಮಾಡುತ್ತೀರೋ ಅದು ನನಗೆ ಗೊತ್ತಿದೆ ಅಂದುಕೊಳ್ಳಿ ಎಂದೆ. ಆದರೂ ಅವರು ಕೇಳಿದ್ದರಿಂದ ನಾನು ಒಂದು ಮಾತು ಹೇಳಬೇಕಾಯ್ತು. ಆದರೆ, ಯಾರಿಗೂ ಕೂಡ ಅವರು ನಾನು ಆ ಮಾತನ್ನು ಹೇಳಿದೆ ಎಂದು ಹೇಳಲಿಲ್ಲ. ಕೊಟ್ಟ ಮಾತನ್ನು ಅವರು ಉಳಿಸಿಕೊಂಡರು. ರಾಜಕೀಯವಾಗಿ ಇಂತಹ ಅನೇಕ ಸಂಗತಿಗಳು ನಡೆಯುತ್ತವೆ. ಎಲ್ಲರ ಹಿತ ಬಯಸುವಾಗ ಕೊಟ್ಟ ಮಾತನ್ನು ಉಳಿಸಿಕೊಳ್ಳಬೇಕು ಎಂಬುದು ಸಾರ್ವಜನಿಕ ಜೀವನದ ಒಂದು ಪಾಠ.

ಅನಂತ್-ನಾನು ಎಷ್ಟೋ ಬಾರಿ ರಾತ್ರಿ ತುಂಬಾ ಹೊತ್ತು ಹರಟೆ ಹೊಡೀತಾ ಇರುತ್ತಿದ್ದೆವು. ಅವರ ಜೀವನದಲ್ಲಿ ಒಮ್ಮೆ ಸಂದಿಗ್ಧವೊಂದು ತಲೆದೋರಿತ್ತು. ಪಕ್ಷದಲ್ಲಿ, ಜೀವನದಲ್ಲಿ ಅಂತಹ ಒಂದು ಸಂದರ್ಭ ಎದುರಾಗಿತ್ತು. ನಾನೂ ಅವರೊಂದಿಗೆ ಮಾತನಾಡಬೇಕೆಂದು ಅನ್ನಿಸಿತ್ತು, ಅವರಿಗೂ ಹಾಗೆಯೇ ನನ್ನೊಂದಿಗೆ ಮಾತನಾಡಬೇಕೆಂದು ಅನ್ನಿಸಿತ್ತು. ಲಕ್ನೋದಲ್ಲಿ ನಡೆದ ಮದುವೆಯೊಂದರಲ್ಲಿ ಇಬ್ಬರೂ ಭಾಗಿಯಾಗಿದ್ದೆವು. ಅಂದು ಸಂಜೆ ಮಾತನಾಡಲು ಕುಳಿತೆವು. ನಾವು ಎದ್ದಾಗ ಸೂರ್ಯೋದಯ ಆಗಿತ್ತು. ಆನಂತರ ಅವರು ತಮ್ಮ ಕೆಲಸಕ್ಕೆ ಹೊರಟುಹೋದರು. ಆನಂತರ ಒಂದು ಎಸ್ಎಂಎಸ್ ಕಳಿಸಿದರು; 'ಯು ವಿಲ್ ನಾಟ್ ಸೀ ದ ಸೇಮ್ ಅನಂತಕುಮಾರ್, ಫ್ರಂ ಟುಡೇ ಮಾರ್ನಿಂಗ್ ಫ್ರಂ ಸನ್ ರೈಸ್ ಹಿ ಈಸ್ ಹ್ಯಾವಿಂಗ್ ಎ ರೀಬರ್ತ್' ಎಂದು ಹೇಳಿ ತಮ್ಮ ದಾರಿಯನ್ನು ಬದಲಿಸಿಕೊಂಡರು. ಹಿಂದಿನ ದಿನ ಅವರ ಮನಸ್ಸು ಅತ್ಯಂತ ದುಗುಡದಿಂದ ತುಂಬಿತ್ತು; ಜೀವನದಲ್ಲಿ ಸ್ವಲ್ಪಮಟ್ಟಿಗೆ ಜಿಗುಪ್ಸೆಗೆ ಒಳಗಾದಂತೆ ನನಗೆ ಅನ್ನಿಸಿತ್ತು. ಅಂತಹ ಸಂದರ್ಭದಲ್ಲಿ ಅವರು ನನಗೆ ಮಾತು ಕೊಟ್ಟು 'ರೀಬರ್ತ್' ಎಂದು ಮುನ್ನಡೆದರು. ಅಂತಹುದೇ ' ರೀಬರ್ತ್' ಈ ಆಸ್ಪತ್ರೆಯಿಂದ ಹೊರಬರುವಷ್ಟು ಚೈತನ್ಯವನ್ನು ಅವರಿಗೆ ತುಂಬುತ್ತೆ ಎಂದು ನಾನು ಅಂದುಕೊಂಡಿದ್ದೆ, ಆದರೆ ಅದು ಆಗಲಿಲ್ಲ.

ಸಂಘಟನೆಯನ್ನು ಅವರು ಕಟ್ಟಿ ಬೆಳೆಸಿದರು, ಅನೇಕ ಪುಟ 5 ರಲ್ಲಿ ಮುಂದುವರೆದಿದೆ

# ರಾಜಧಾನಿ ದೆಹಲಿಯಲ್ಲಿ ಕನ್ನಡದ ಧ್ವನಿ ಗಟ್ಟಿಗೊಳಿಸಿದ ಅಪೂರ್ವ ರಾಜಕಾರಣಿ

**ಡಾ. ಪುರುಷೋತ್ತಮ ಬಿಳಿಮಲೆ**, ನಿವೃತ್ತ ಪ್ರಾಧ್ಯಾಪಕರು, ಜೆ.ಎನ್.ಯು. ನವದೆಹಲಿ

ದೆಹಲಿಯು ಕಳೆದ ಸುಮಾರು ೪೦ ವರ್ಷಗಳಿಂದ ಮಹಾನಗರವಾಗಿ ಬೆಳೆದು, ದೇಶದ ಎಲ್ಲ ಭಾಷಿಕರನ್ನು ತನ್ನೆಡೆಗೆ ಆಕರ್ಷಿಸಿದೆ. ಇವತ್ತು ದೆಹಲಿಯ ತುಂಬ ಬಂಗಾಲಿಗಳು, ಪಂಜಾಬಿಗಳು, ತಮಿಳರು, ತೆಲುಗರು, ಮಲೆಯಾಳಿಗಳು, ಮರಾಠಿಗರು, ಬಿಹಾರಿಗಳು, ಒಡಿಯಾದವರು, ಉತ್ತರ ಪೂರ್ವ ರಾಜ್ಯದವರು ಮತು ಕನ್ನಡಿಗರು ತುಂಬಿಕೊಂಡಿದ್ದಾರೆ. ಈ ರಾಜಧಾನಿಯಲ್ಲಿ ಕನ್ನಡಿಗರ ಸ್ಥಿತಿ-ಗತಿ ಏನೆಂಬುದು ಒಂದು ಪ್ರಶ್ನೆಯಾದರೆ, ಪ್ರಜಾಪ್ರಭುತ್ವದ ಕೇಂದ್ರ ಸ್ಥಾನದಲ್ಲಿ 'ಕರ್ನಾಟಕ ರಾಜ್ಯ'ಕ್ಕಿರುವ ಸ್ಥಾನ-ಮಾನ ಏನೆಂಬುದು ಇನ್ನೊಂದು ಪ್ರಶ್ನೆ. ಈ ಎರಡೂ ಪ್ರಶ್ನೆಗಳನ್ನು ಮೈಮೇಲೆ ಎಳೆದುಕೊಂಡು ಅದಕ್ಕೆ ಉತ್ತರ ನೀಡುವಂತೆ ಕೆಲಸ ಮಾಡಿದ ಕೆಲವೇ ಕೆಲವು ಜನರಲ್ಲಿ ದಿವಂಗತ ಅನಂತ ಕುಮಾರ್ ಒಬ್ಬರು. ಅವರು ದೆಹಲಿ ಕನ್ನಡಿಗರ ಜೀವನ ಮಟ್ಟದ ಸುಧಾರಣೆಗೆ ಕೆಲಸ ಮಾಡಿದರು, ಮತ್ತು ರಾಜಧಾನಿಯಲ್ಲಿ ಕರ್ನಾಟಕದ ಬಲ ಸಂವರ್ಧನೆಗೂ ದುಡಿದರು. ಕರ್ನಾಟಕ ಮತು ಅಲ್ಲಿಯ ತುಳು, ಕೊಡವ, ಕೊಂಕಣಿ ಮತ್ತಿತರ ವಿವಿಧ ಭಾಷಿಕರಿಗೆ ಸಂಬಂಧಿಸಿದ ಹಾಗೆ ಪಕ್ಷಾತೀತವಾಗಿ ಯೋಚನೆ ಮಾಡುತ್ತಿದ್ದ ಬೆರಳೆಣಿಕೆಯ ರಾಜಕಾರಣಿಗಳಲ್ಲಿ ಅವರು ಅಗ್ರಗಣ್ಯರು.

ಒಂದೆರಡು ಉದಾಹರಣೆಗಳಿಂದ ಇದನ್ನು ಸ್ಪಷ್ಟಪಡಿಸಬಹುದು. ದೆಹಲಿಯ ಬಹುತೇಕ ಜನರಿಗೆ ಕರ್ನಾಟಕವೆಂಬ ಒಂದು ಪ್ರತ್ಯೇಕ ರಾಜ್ಯವಿದೆ, ಅಲ್ಲಿ ಕನ್ನಡವೆಂಬ ಸಾವಿರಾರು ವರ್ಷಗಳ ಇತಿಹಾಸವಿರುವ ಒಂದು ಭಾಷೆಯಿದೆ ಎಂಬುದೇ ತಿಳಿದಿಲ್ಲ. ಇಂಥದಕ್ಕೆ ಬಹುಮಟ್ಟಿಗೆ ದುರ್ಬಲ ಕನ್ನಡಿಗರೇ ಕಾರಣರು. ರಾಜಧಾನಿಯಲ್ಲಿ ಕನ್ನಡಿಗರನ್ನು ಸಂಘಟಿಸಿ ಅವರ ಧ್ವನಿಯನ್ನು ಹೆಚ್ಚಿಸಿದ ಮಹತ್ವದ ಕೆಲಸ ಮಾಡಿದವರೆಂದರೆ ಡಾ.ಸರೋಜಿನಿ ಮಹಿಷಿ ಅವರು. ಅಪ್ಪಟ ಕನ್ನಡಾಭಿಮಾನಿಯಾಗಿದ್ದ ಅವರು ತಮ್ಮ ಭಾಷಣಗಳಲ್ಲಿ ಕನ್ನಡದ ಕವಿವಾಣಿಗಳನ್ನು ಉದ್ಧರಿಸಿ, ಕರ್ನಾಟಕ-ಕನ್ನಡದ ಅಸ್ತಿತ್ವಕ್ಕೆ ರಾಜಧಾನಿಯಲ್ಲಿ ನಾಂದಿಹಾಡಿದರು.

ಸರೋಜಿನಿ ಮಹಿಷಿಯವರು ಆರಂಭಿಸಿದ ದೆಹಲಿ ಕರ್ನಾಟಕ ಸಂಘದ ಕಟ್ಟಡವು ಹಳೆಯದಾದಾಗ ಅದನ್ನು ಮುರಿದು ಹೊಸ ಕಟ್ಟಡವನ್ನು ಕಟ್ಟಲು ದೆಹಲಿ ಕನ್ನಡಿಗರು ೧೯೯೦ರ ದಶಕದಿಂದಲೂ ಯೋಚಿಸುತ್ತಿದ್ದರು. ಆಗ ಸಂಘದ ಅಧ್ಯಕ್ಷರಾಗಿದ್ದ ಶ್ರೀ ಕೆ. ಆರ್. ನಾಗರಾಜ್ ಅವರು ಅದರ ನೇತೃತ್ವ ವಹಿಸಿದರು. ಕಟ್ಟಡದ ನೀಲಿ ನಕ್ಷೆಯೂ ತಯಾರಾಗಿ ಒಪ್ಪಿಗೆಗಾಗಿ ದೆಹಲಿ ನಗರ ನಿಗಮಕ್ಕೆ ಸಲ್ಲಿಕೆಯಾಯಿತು. ಆದರೆ ನಿಗಮವು ನಿಯಮಕ್ಕಿಂತ ಹೆಚ್ಚು ಜಾಗವನ್ನು ಬಾಡಿಗೆಗೆ ನೀಡಿದ್ದೀರಿ ಎಂಬ ಕಾರಣ ನೀಡಿ ಎರಡೂವರೆ ಕೋಟಿ ರೂಪಾಯಿಗಳಿಗೂ ಹೆಚ್ಚು ದಂಡವನ್ನು ವಿಧಿಸಿ, ಆ ದಂಡದ ಹಣವನ್ನು ಕಟ್ಟಿದರೆ ಮಾತ್ರ ಹೊಸ ಕಟ್ಟಡಕ್ಕೆ ಅನುಮತಿ ನೀಡುವುದಾಗಿ ಸಂಘಕ್ಕೆ ನೋಟೀಸು ನೀಡಿತು. ಆಗ ಸಂಘದಲ್ಲಿ ಇದ್ದದ್ದೇ ಸುಮಾರು ಒಂದು ಕೋಟಿ ರೂಪಾಯಿಗಳು. ಹೀಗಾಗಿ ದಂಡ ಕಟ್ಟುವ ಪ್ರಶ್ನೆಯೇ ಇರಲಿಲ್ಲ. ಕಟ್ಟಡದ ಕೆಲಸಗಳು ನೆನೆಗುದಿಗೆ ಬಿದ್ದವು.

ಅದೇ ಸುಮಾರಿಗೆ ದೆಹಲಿ ಕನ್ನಡಿಗರ ಸೌಭಾಗ್ಯವೋ ಎಂಬಂತೆ ಶ್ರೀ ಅನಂತ ಕುಮಾರ್ ಅವರು ಅಟಲ್ ಬಿಹಾರಿ ವಾಜಪೇಯಿ ಸರಕಾರದಲ್ಲಿ ನಗರಾಭಿವೃದ್ಧಿ ಸಚಿವರಾಗಿ (೨೦೦೦) ನೇಮಕಗೊಂಡರು. ಸಂಘದ ಕಡತವನ್ನು ಅವರಿಗೆ ತಲುಪಿಸಲಾಯಿತು. ಉತ್ಸಾಹದ ಚಿಲುಮೆಯಂತಿದ್ದ ಅನಂತ ಕುಮಾರ್ ಅವರು ಕಡತವನ್ನು ಇಡಿಯಾಗಿ ಪರಿಶೀಲಿಸಿದರು. ಸಂಬಂಧಿಸಿದ ಅಧಿಕಾರಿಯನ್ನು ಕರೆಸಿ ಅವರು ಕೇಳಿದ ಪ್ರಶ್ನೆಯೆಂದರೆ ' ಈ ಕರ್ನಾಟಕ ಸಂಘವು ನಮ್ಮದು. ಇದಕ್ಕೆ ಯಾಕೆ ಇಷ್ಟೊಂದು ದಂಡ ವಿಧಿಸಿದ್ದೀರಿ?'

ಅದಕ್ಕೆ ಉತ್ತರವಾಗಿ ಅಧಿಕಾರಿಯು, ' ಸಂಘವು ಬಾಡಿಗೆಗೆ ನೀಡಿದ ಸ್ಥಳ ನಿಯಮಕ್ಕಿಂತ ಹೆಚ್ಚು. ಹಾಗಾಗಿ ದಂಡ ವಿಧಿಸಿದ್ದೇವೆ' ಅಂದರು.

ಅನಂತ ಕುಮಾರ್ ಅವರದು ಮರು ಪ್ರಶ್ನೆ ' ಹೆಚ್ಚು ಜಾಗ ಬಾಡಿಗೆ ನೀಡಿ, ಹಣ ಸಂಗ್ರಹ ಮಾಡಿದ ಸಂಘವು ಆ ಹಣವನ್ನು ಏನು ಮಾಡಿದೆ?

ಅಧಿಕಾರಿ : ಗೊತ್ತಿಲ್ಲ.

ಅನಂತ ಕುಮಾರ್ ಮುಂದರಿಸಿದರು- 'ನಾ ಹೇಳ್ತೇನೆ, ಕೇಳಿ, ಆ ಹಣವನ್ನು ಅವರು ದೆಹಲಿಯಲ್ಲಿ ಕನ್ನಡ ಸಂಸ್ಕೃತಿಯ ಅಭಿವೃದ್ಧಿಗೆ ಬಳಸಿದ್ದಾರೆ. ನೀವೇನು ಅವರಿಗೆ ಅನುದಾನ ಕೊಡ್ತೀರಾ?'

ಕಡತವನ್ನು ಅನಂತಕುಮಾರ್ ಅವರ ಮೇಜಲ್ಲಿಯೇ ಬಿಟ್ಟು ಅಧಿಕಾರಿ ಹಿಂದಿರುಗಿದ. ಅನಂತ ಕುಮಾರ್ ಹಠ ಬಿಡದ ತ್ರಿವಿಕ್ರಮನಂತೆ ಆ ಕಡತದ ಬೆನ್ನು ಬಿದ್ದರು. ಆರು ತಿಂಗಳಲ್ಲಿ ನಗರ ನಿಗಮದ ಕಾನೂನಿನಲ್ಲಿಯೇ ತಿದ್ದುಪಡಿ ತಂದು ಎರಡೂವರೆ ಕೋಟಿ ರೂಪಾಯಿಗಳ ದಂಡವನ್ನು ೫೫ ಲಕ್ಷಗಳಿಗೆ ಇಳಿಸಿದರು. ಮಾತ್ರವಲ್ಲ ಈ ೫೫ ಲಕ್ಷ ರೂಪಾಯಿಗಳನ್ನು ಸಂಘದಿಂದ ಹೆಚ್ಚುವರಿ ಜಾಗ ಪಡೆದ ಬ್ಯಾಂಕಿನಿಂದ ವಸೂಲಿ ಮಾಡಿ ಎಂಬ ಕಿವಿಮಾತೂ ಹೇಳಿದರು.

ಅವರು ಹೇಳಿದಂತೆಯೇ ಮುಂದೆ ಎಲ್ಲವೂ ನಡೆಯಿತು. ಸಂಘದ ಕಟ್ಟಡವೂ ಮೇಲೆದ್ದಿತು. ಇಂದು ರಾಜಧಾನಿಯ ಆಯಕಟ್ಟಿನ ಜಾಗದಲ್ಲಿ ತನ್ನದೇ ಆದ ಕಟ್ಟಡ ಹೊಂದಿ, ಸಾಂಸ್ಕೃತಿಕ, ಸಾಹಿತ್ಯಿಕ ಕಾರ್ಯಕ್ರಮಗಳನ್ನು ನಡೆಸುತ್ತಾ ದೆಹಲಿಯ ಪ್ರತಿಷ್ಠಿತ ಸಂಘಗಳಲ್ಲಿ ಒಂದಾಗಿ ಬೆಳೆದಿರುವ ಕರ್ನಾಟಕ ಸಂಘಕ್ಕೆ ಅನಂತ ಕುಮಾರ್ ಆಗ ಮಾಡಿದ ಸಹಾಯ ಐತಿಹಾಸಿಕವಾದುದು. ಅವರಿಲ್ಲದಿದ್ದರೆ ಸಂಘದ ಕಟ್ಟಡವೇ ಮೇಲೇಳುತ್ತಿರಲಿಲ್ಲ. ಮುಂದೆ ಕಟ್ಟಡದ ಶಂಕು ಸ್ಥಾಪನೆಯಲ್ಲೂ ಅವರು ಆಸಕ್ತಿ ವಹಿಸಿದರು. ನಾನು ಸಂಘದ ಅಧ್ಯಕ್ಷನಾಗಿದ್ದ ಅವಧಿಯಲ್ಲಿ ( ೨೦೦೪- ೨೦೦೮) ಹೊಸದಾಗಿ ಮೇಲೇಳುತ್ತಿದ್ದ ಸಾಂಸ್ಕೃತಿಕ ಸಮುಚ್ಚಯಕ್ಕೆ ಧನ ಸಂಗ್ರಹ ಮಾಡಲು ಅವರು ಬೆಂಬಲವಾಗಿ ನಿಂತಿದ್ದರು. ರಾಜ್ಯದ ಎಲ್ಲ ಸಂಸದರೂ ಸಂಘದ ಹೊಸ ಕಟ್ಟಡಕ್ಕೆ ಆರ್ಥಿಕವಾಗಿ ಸಹಾಯ ಮಾಡಬೇಕೆಂದು ಅವರು ಸಾರ್ವಜನಿಕವಾಗಿಯೇ ಕರೆ ಕೊಟ್ಟಿದ್ದರು. ಎಷ್ಟೇ ಕೆಲಸವಿದ್ದರೂ ಅವುಗಳನ್ನು ಬದಿಗಿಟ್ಟು, ಸಂಘದ

ಪುಟ 7 ರಲ್ಲಿ ಮುಂದುವರೆದಿದೆ

## ಕುಮಾರರಾಗಿ ಬಂದು ಅನಂತವಾಗಿ ಬೆಳೆದವರು

ಪುಟ 4 ರಿಂದ

ಕನಸುಗಳನ್ನು ಅವರು ಹೊಂದಿದ್ದರು. ಆ ಕನಸುಗಳು ನನಸಾಗಬೇಕು ಎಂದು ಎಲ್ಲರಿಗೂ ಅನ್ನಿಸಿತ್ತು. ಸಂಘಟನಾ ಶಾಸ್ತ್ರವನ್ನು ಕಲಿತ ಒಬ್ಬ ಕಾರ್ಯಕರ್ತ. ಕರ್ತೃತ್ವ, ನೇತೃತ್ವ, ವ್ಯಕ್ತಿತ್ವ ಎಲ್ಲವೂ ಮೇಳೈಸಿದಂತಹ ಓರ್ವ ವ್ಯಕ್ತಿ. ವೈಯಕ್ತಿಕ ಸ್ನೇಹಕ್ಕೆ ಮಿತಿಯೇ ಇಲ್ಲ, ಸಾಮಾಜಿಕ ಕರ್ತವ್ಯಕ್ಕೆ ಕಟ್ಟುಪಾಡುಗಳಿಲ್ಲ, ರಾಜಕೀಯ ಸಾಮರ್ಥ್ಯಕ್ಕೆ ಕಡಿಮೆ ಇಲ್ಲ. ಅಂತಹ ಓರ್ವ ವ್ಯಕ್ತಿ ಅನಂತ್. ತನಗೆ ಆದರ್ಶವಾಗಿ ನಾನು ಬಲ್ಲಂತೆ ಇಬ್ಬರು ವ್ಯಕ್ತಿಗಳನ್ನು ಅವರು ತಮ್ಮ ಕಣ್ಣ ಮುಂದೆ ಇಟ್ಟುಕೊಂಡಿದ್ದರು. ಒಬ್ಬರು ಡಾಕ್ಟರ್ ಜೀ (ಡಾ.ಹೆಡಗೇವಾರ್). ಅನೇಕ ಬಾರಿ ಡಾಕ್ಟರ್ ಜೀಯವರ ಜೀವನದ ಘಟನೆಯನ್ನು ನೆನೆದು ದಾರಿ ಹೇಗಿರಬೇಕು ಎಂಬುದನ್ನು ನಿಶ್ಚಯಿಸುತ್ತಿದ್ದರು. ಮತ್ತೊಬ್ಬರು ಶಿವಾಜಿ ಮಹಾರಾಜ್. ಅವರ ಮನೆಯಲ್ಲಿ ಶಿವಾಜಿಯ ಚಿತ್ರವನ್ನು ಹಾಕಿಕೊಂಡಿದ್ದರು. ಶಿವಾಜಿ ಬಗ್ಗೆ ಸಮರ್ಥ ರಾಮದಾಸರು ಹೇಳುತ್ತಿದ್ದರು; ವಿಚಾರವಂತ, ಶೀಲವಂತ, ಯಶೋವಂತ, ಗುಣವಂತ, ಕರ್ಮವಂತ, ಕ್ರಿಯಾವಂತ, ಸ್ನೇಹವಂತ.....! ಈ ಎಲ್ಲ ಗುಣಗಳನ್ನು ಸಮರ್ಥರು ಶಿವಾಜಿಯಲ್ಲಿ ಕಂಡಿದ್ದರು. ಆ ಗುಣಗಳು ಅನಂತಕುಮಾರರಲ್ಲೂ ಇದ್ದವು ಎಂಬುದನ್ನು ನಾನು ಬಲ್ಲೆ, ಸ್ವತಃ ಅನುಭವಿಸಿದ್ದೇನೆ.

ಸಾತ್ವಿಕ ವ್ಯಕ್ತಿತ್ವದ ಅನಂತ್ ಬಗ್ಗೆ ವಿದ್ಯಾರ್ಥಿ ಜೀವನದಿಂದಲೇ ಪ್ರತಿನಿತ್ಯ ಸ್ನಾನಾನಂತರ ದೇವರ ಮನೆಯಲ್ಲಿ ಕುಳಿತು ಭಗವದ್ಗೀತೆಯ ಶ್ಲೋಕಗಳನ್ನು ಅವರು ಪಠಿಸುತ್ತಿದ್ದರು. ಗೀತೆಯನ್ನು ಓದಿಯೇ ತನ್ನ ನಿತ್ಯಕಾರ್ಯವನ್ನು ಆರಂಭಿಸುತ್ತಿದ್ದರು. ಗೀತೆಯಲ್ಲಿ ಹೇಳಿದಂತೆ: 'ಮುಕ್ತಸಂಘೋ ಅನಹಂವಾದಿ ಧೃತ್ಯುತ್ಸಾಹ ಸಮನ್ವಿತಃ || ಸಿದ್ಧಾಸಿದ್ಧ್ಯೋರ್ನಿರ್ವಿಕಾರಃ ಕರ್ತಾ ಸಾತ್ವಿಕ ಉಚ್ಯತೇ|| ಮುಕ್ತಸಂಘನಾಗಿ, ಧೃತಿ ಉತ್ಸಾಹಗಳಿಗೆ ಕಡಿಮೆ ಇಲ್ಲದಂತೆ ಸಿದ್ಧಿ ಮತ್ತು ಅಸಿದ್ಧಿಯಲ್ಲಿ ಅಂದರೆ ಸಫಲತೆ ಮತ್ತು ವಿಫಲತೆಗಳಲ್ಲಿ ಒಂದೇ ರೀತಿ ನಡೆಯುವವನನ್ನು ಸಾತ್ವಿಕ ಎಂದು ಹೇಳುತ್ತಾರೆ. ನಿತ್ಯ ಭಗವದ್ಗೀತೆ ಪಾರಾಯಣ ಮಾಡುತ್ತಿದ್ದ ಅನಂತ್ ನಮಗೆ ಲೀಡರ್. ಅವರು ಕುಮಾರರಾಗಿ ಬಂದರು, ಅನಂತವಾಗಿ ಬೆಳೆದರು.

ಈಗ ಅನಂತ್ ಇಲ್ಲವಾದರು. ಅನಂತ್ ಇಲ್ಲದ ಕರ್ನಾಟಕ, ಸಂಸತ್ತು, ಭಾರತೀಯ ಜನತಾ ಪಾರ್ಟಿ, ಅನಂತ್ ಇಲ್ಲದ ನಮ್ಮ ಜೀವನ- ಇವೆಲ್ಲವನ್ನೂ ನಾವು ಮೈಗೂಡಿಸಿಕೊಳ್ಳಬೇಕಾಗಿದೆ. ದೈವೇಚ್ಛೆ, ಇದನ್ನು ನಾವು ಸ್ವೀಕಾರ ಮಾಡಬೇಕಾಗಿದೆ. ಎಷ್ಟು ದಿನ ಬದುಕಿದರೂ ಸರಿ, ವಿಧಿಯ ಆಟವಂತೂ ಸತ್ಯ. ಸುಗಂಧವನ್ನೂ, ಸೌಂದರ್ಯವನ್ನೂ ಸೂಸುವ ಹೂವಿಗೆ ಗೊತ್ತಿರುತ್ತದೆ ನಾನು ಅರಳಿದರೂ ಸ್ವಲ್ಪ ಹೊತ್ತಿಗೇ ಬಾಡಿಹೋಗ್ತೀನಿ ಅಂತ. ಆದರೂ ಸಹ ಹೂವು ಅರಳುತ್ತದೆ, ಸೌಂದರ್ಯವನ್ನು ಸೂಸುತ್ತದೆ, ಸುಗಂಧವನ್ನು ಬೀರುತ್ತದೆ, ಆನಂತರ ಬಾಡಿಹೋಗುತ್ತದೆ. ಕೆಳಗೆ ಬಿದ್ದು ಗೊಬ್ಬರವಾಗುತ್ತದೆ. ಹಾಗೆಯೇ ಅನಂತ್ ಅರಳಿದರು, ಸುಗಂಧವನ್ನೂ, ಸೌಂದರ್ಯವನ್ನೂ ಸೂಸಿದರು. ಸಂಘದಲ್ಲಿ ಒಂದು ಹಾಡಿನ ಪಂಕ್ತಿ ಇದೆ: 'ತನು ಸಮರ್ಪಿತ, ಮನ ಸಮರ್ಪಿತ, ಔರ್ ಯಹ್ ಜೀವನ ಸಮರ್ಪಿತ, ಚಾಹತಾ ಹೂಂ ಮಾತೃಭೂ ತುಝ್ ಕೋ ಅಭೀ ಕುಛ್ ಔರ್ ಭೀ ದೂಂ'. ನನ್ನ ತನು-ಮನ ಜೀವನವನ್ನು ಸಮರ್ಪಣೆ ಮಾಡಿದೆ. ಹೇ ಮಾತೃಭೂಮಿ ನಿನಗಾಗಿ ನಾನು ಇನ್ನಷ್ಟು ನೀಡಲು ಪ್ರಯತ್ನಿಸುತ್ತೇನೆ ಎಂಬುದು ಇದರ ಅರ್ಥ. ಅನಂತಕುಮಾರ್ ಅವರ ಜೀವನದ ಕೊನೆಯ ದಿನಗಳ ಬಗ್ಗೆ ಕೇಳಿದ ನಂತರ ಈ ಹಾಡಿನ ಪಂಕ್ತಿಗಳಿಗೆ ಅವರ ಜೀವನ ಎಷ್ಟು ಸಮೀಪವಾಗಿ ನಡೆಯಿತು ಎಂಬುದನ್ನು ನಾವು ನೋಡಬಹುದು. ದೇವರಲ್ಲಿ ನನ್ನ ಪ್ರಾರ್ಥನೆ ಇಷ್ಟೇ- ಅನಂತ ಯಾತ್ರೆಯಲ್ಲಿ ಹೋದಂತಹ ಅನಂತಾತ್ಮಕ್ಕೆ ಸದ್ಗತಿ ದೊರೆಯಲಿ, ಅನೇಕರು ಹೇಳಿದಂತೆ ಅನಂತ್ ಪುನಃ ಹುಟ್ಟಿಬಂದರೆ ಪುನಃ ನನ್ನ ಸೋದರನಾಗಿ, ನನ್ನ ಸ್ನೇಹಿತನಾಗಿ ಅದೇ ಅನಂತ ಬರಲಿ ಎಂದು ಹೇಳುತ್ತ ಈ ನನ್ನ ನುಡಿನಮನಗಳನ್ನು ಸಲ್ಲಿಸುತ್ತೇನೆ.

ನೆನಪಿನ ಪುಟಗಳಿಂದ

# ಸಂಸ್ಕಾರವಂತ ರಾಷ್ಟ್ರನಾಯಕನಾಗಿ ಬೆಳೆದ ಹುಬ್ಬಳ್ಳಿಯ ಹುಡುಗ

ಮುಕುಂದ ನಾತು

ನಾನು ೧೯೭೬ರಲ್ಲಿ ಹುಬ್ಬಳ್ಳಿಯ ಅರವಿಂದ ನಗರದಲ್ಲಿ ಸ್ವಂತ ಮನೆಯನ್ನು ಕಟ್ಟಿಸಿಕೊಂಡು ಬಂದ ಮೇಲೆ ಮುಂದೆ ಎರಡು ಮೂರು ತಿಂಗಳಿನಲ್ಲಿ ನನ್ನ ಮದುವೆಯಾಯಿತು. ಮುಂದಿನ ವರ್ಷಗಳಲ್ಲಿ ಮಕ್ಕಳಾದ ಮೇಲೆ ಅವರನ್ನು ಶಾಲೆಗೆ ಸೇರಿಸುವಂಥ ಪ್ರಸಂಗ ಬಂದಾಗ ಇಲ್ಲಿ ಸಮೀಪದಲ್ಲಿ ಯಾವುದೇ ಶಾಲೆಗಳು ಇರಲಿಲ್ಲ. ಎಂ.ಟಿ.ಎಸ್. ಕಾಲೊನಿಯಲ್ಲಿ ಅನಂತಕುಮಾರ್ ಅವರ ತಾಯಿ ಗಿರಿಜಾ ಶಾಸ್ತ್ರಿಯವರು ಒಂದು ಬಾಲವಾಡಿ ನಡೆಸುತ್ತ ಇದ್ದರು. ಆ ಬಾಲವಾಡಿಗೆ ನಮ್ಮ ಮಕ್ಕಳನ್ನು ಸೇರಿಸುವ ಮೂಲಕ ನಮ್ಮ ಮೊದಲನೇ ಪರಿಚಯ ಗಿರಿಜಾ ಶಾಸ್ತ್ರಿಯವರ ಜೊತೆ ಆಯಿತು . ಮುಂದೆ ನಾರಾಯಣಶಾಸ್ತ್ರಿಯವರ ಕುಟುಂಬವಲ್ಲದೆ, ಪ್ರಹ್ಲಾದ ಜೋಷಿಯವರ ಮನೆ, ಗಂಭೀರ್ ಅವರ ಕುಟುಂಬ ಮೊದಲಾದವರ ಪರಿಚಯವೂ ಬೆಳೆಯಿತು. ನಮಗೆ ಎಂ.ಟಿ.ಎಸ್. ಕಾಲೋನಿ ಜೊತೆ ಒಂದು ನಿಕಟವಾದಂಥ ಒಂದು ಸಂಪರ್ಕ ಬೆಳೆಯಲಿಕ್ಕೆ ಹತ್ತಿತ್ತು.

ರೈಲ್ವೆ ಇಲಾಖೆಯಲ್ಲಿ ಉದ್ಯೋಗಿಯಾಗಿದ್ದ ನಾರಾಯಣ ಶಾಸ್ತ್ರಿಯವರು ಒಬ್ಬ ಅತ್ಯಂತ ಪ್ರಾಮಾಣಿಕ ವ್ಯಕ್ತಿ. ಅನಂತಕುಮಾರ್ ಅವರ ಮುಂದಿನ ಜೀವನವನ್ನು ರೂಪಿಸುವ ಯಾವುದಾದರೂ ಒಂದು ಗರಡಿ ಮನೆ ಇದ್ದರೆ ಅದು ಎಂ.ಟಿ.ಎಸ್. ಕಾಲೋನಿಯೇ ಆಗಿರಬೇಕು. ಹಳೇ ಹುಬ್ಬಳ್ಳಿಯ ಒಬ್ಬ ಬಾಲಕ ಒಬ್ಬ ರಾಷ್ಟ್ರೀಯ ಮಟ್ಟದ ನಾಯಕನಾಗಿ ಬೆಳೆಯಬೇಕಾಗಿದ್ದರೆ ಅದಕ್ಕೆ ಎಂ.ಟಿ.ಎಸ್. ಕಾಲೋನಿಯಲ್ಲಿ ಅವರಿಗೆ ಸಿಕ್ಕಂಥ ಸಂಸ್ಕಾರ, ಅವರ ಜೊತೆ ಸಂಪರ್ಕದಲ್ಲಿ ಬಂದಂಥ ವ್ಯಕ್ತಿಗಳ ಒಂದು ದೊಡ್ಡ ಪ್ರಭಾವವೇ ಕಾರಣ ಅಂತ ಹೇಳಿದರೆ ತಪ್ಪಾಗಲಿಕ್ಕಿಲ್ಲ.

ನಾವು ಅರವಿಂದನಗರಕ್ಕೆ ಬಂದ ಮೇಲೆ ನಮ್ಮದೇ ಒಳ ಪಂಗಡದ ಮೂರು ಕುಟುಂಬಗಳು ಒಂದೆಡೆ ಸೇರುವಂತಾದುದು ವಿಶೇಷ. ನಮ್ಮ ನಾತು ಕುಟುಂಬದ ಜೊತೆಗೆ ಜೋಷಿ ಕುಟುಂಬ, ಮತ್ತು ಓಕ್ ಅವರ ಕುಟುಂಬ ಹೀಗೆ ನಾವು ಮೂರು ಕುಟುಂಬಗಳು ಬಹಳಷ್ಟು ಆತ್ಮೀಯವಾಗಿ ಬೆರೆತುಕೊಂಡು ಬಂದೆವು. ಅದರಲ್ಲಿ ಓಕ್ ಕುಟುಂಬದ ಪ್ರಭಾಕರ್ ಓಕ್ ಅವರು ತೇಜಸ್ವಿನಿಯವರ ತಂದೆ. ಬಹಳಷ್ಟು ಕೆಲಸ ಕಾರ್ಯಗಳಲ್ಲಿ ಅತ್ಯಂತ ಆತ್ಮೀಯವಾಗಿ ನಮ್ಮ ಜೊತೆಗೂಡಿದ್ದರು, ನಮ್ಮ ಚಿತ್ಪಾವನ ಬ್ರಾಹ್ಮಣ ಸಂಘವನ್ನು ಬೆಳೆಸುವುದು, ಸಮ್ಮೇಳನಗಳನ್ನು ನಡೆಸುವುದು ಧಾರ್ಮಿಕ ಕಾರ್ಯಗಳನ್ನು ಮಾಡುವುದು ಇವೆಲ್ಲ ಕಾರ್ಯಕ್ರಮಗಳ ಮೂಲಕ ಅವರ ಕುಟುಂಬದೊಡನೆ ನಮ್ಮ ಕುಟುಂಬದ ಸದಸ್ಯರು ಅತ್ಯಂತ ಆತ್ಮೀಯರಾಗಿ ಬೆರೆತುಕೊಂಡರು. ನಮ್ಮಲ್ಲಿ ಏನಾದರೂ ಕಾರ್ಯಕ್ರಮವಾದರೆ ಅಥವಾ ಅವರಲ್ಲಿ ಏನಾದರೂ ಸಮಾರಂಭವಾದರೆ ಒಬ್ಬರನ್ನೊಬ್ಬರು ಬಿಟ್ಟು ಸಮಾರಂಭಗಳನ್ನು ಮಾಡುತ್ತ ಇರಲಿಲ್ಲ. ಹೀಗಾಗಿ ನಮ್ಮೆಲ್ಲರ ಒಡನಾಟ ಬಹಳ ಆತ್ಮೀಯವಾಗಿತ್ತು.

ಪ್ರಭಾಕರ್ ಓಕ್ ಅವರಿಗೆ ನಾಲ್ಕು ಮಕ್ಕಳು. ಮೂರು ಹೆಣ್ಣು ಮಕ್ಕಳು, ಒಬ್ಬ ಗಂಡು ಮಗ. ಅವರಲ್ಲಿ ತೇಜಸ್ವಿನಿ ಗರ್ಲ್ಸ್ ಸ್ಕೂಲ್ ನಲ್ಲಿ ಓದುತ್ತ ಇದ್ದಳು. ನಾನು ಗರ್ಲ್ಸ್ ಸ್ಕೂಲ್ನಲ್ಲಿ ಕೆಲವು ಕಾಲ ಸರ್ವಿಸ್ ಮಾಡಿರುವುದರಿಂದ ಅವಳನ್ನು ಗಮನಿಸುತ್ತಿದ್ದೆ. ಒಬ್ಬ ಒಳ್ಳೆಯ ವಿದ್ಯಾರ್ಥಿನಿಯಾಗಿ, ಒಬ್ಬ ಜಾಣ ವಿದ್ಯಾರ್ಥಿನಿಯಾಗಿ ತೇಜಸ್ವಿನಿ ಬೆಳೆದಳು. ಅವಳ ವ್ಯಕ್ತಿತ್ವದ ವಿಶೇಷವೇನೆಂದರೆ, ' ಧಾಡಸಿ ' (ಸಾಹಸಶೀಲ , ಧೈರ್ಯವಂತ) ವ್ಯಕ್ತಿತ್ವ ಅವಳದ್ದು. ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನಂಥ ಸಂಘಟನೆಯಲ್ಲಿ ಅಂತಹ ವ್ಯಕ್ತಿಯೇ ಬೆಳಕಿಗೆ ಬರುವುದು. ತೇಜಸ್ವಿನಿ ಬಹಳ ' ಧಾಡಸಿ 'ಯಾಗಿ ಇದ್ದು, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನಲ್ಲಿ ಉತ್ತಮ ನಾಯಕತ್ವದ ಗುಣಗಳನ್ನು ಅವಳು ಅವಾಗಲೇ ಬೆಳೆಸಿಕೊಂಡಳು. ಅವಳಲ್ಲಿ ಕುಟುಂಬದ ಸಂಸ್ಕಾರ ಬಹಳಷ್ಟು ಇತ್ತು.

ಅನಂತಕುಮಾರ್ ಅವರಲ್ಲೂ ಆ ಸಂಸ್ಕಾರ ಬಂದಿರುವುದರಿಂದ ಅವರೂ ತೇಜಸ್ವಿನಿಯೂ ಎ.ಬಿ.ವಿ.ಪಿ.ಯಲ್ಲಿ ಒಡನಾಡಿಗಳಾದರು. ಮುಂದೆ ಅನಂತಕುಮಾರ್ ತೇಜಸ್ವಿನಿಯನ್ನು ಮದುವೆಯಾಗಲು ಇಷ್ಟಪಟ್ಟು ನಾನು ಇವರನ್ನು ಮದುವೆ ಮಾಡಿಕೊಳ್ಳುತ್ತೇನೆ ಎಂದು ತಾಯಿ ಗಿರಿಜಾ ಶಾಸ್ತ್ರಿಯವರ ಮುಂದೆ ಹೇಳಿಕೊಂಡಾಗ " ಆಯಿತು, ನೀನು ಬಂದು ನನ್ನ ಕೇಳಿದ್ದೀಯಲ್ಲ ಅದೇ ದೊಡ್ಡದು! ಮುಂದೆ ಯಾವಾಗಲೋ ಮದುವೆ ಮಾಡಿಕೊಂಡು ಬಂದು ನನಗೆ ಭೆಟ್ಟಿ ಮಾಡಿಸಲಿಲ್ಲವಲ್ಲ ಅದೇ ನೀನು ತೋರಿಸಿದಂಥ ಸಂಸ್ಕಾರ " ಎಂದು ಹೇಳಿದಂಥ ಮಾತು ನನಗೆ ಇವತ್ತು ನೆನಪಿಗೆ ಬರುತ್ತ ಇದೆ.

ಮತ್ತೆ ಇನ್ನೊಂದು ಮಾತು ಹೇಳಬೇಕು. ಸಾಮಾನ್ಯವಾಗಿ ತಲೆಬುಡ ಇಲ್ಲದ ರಾಜಕಾರಣಿಗಳಿಗೆ ಮಕ್ಕಳನ್ನು ಕೊಡುವುದಕ್ಕೆ ಸಾಮಾನ್ಯವಾಗಿ ಯಾರೂ ಒಪ್ಪುವುದು ಇಲ್ಲ ಮನೆಯಲ್ಲಿ ಸಹಿತ ಏನೂ ಶ್ರೀಮಂತಿಕೆ ತಲೆಬುಡ ಇಲ್ಲ, ಏನೋ ಒಬ್ಬ ಎ.ಬಿ.ವಿ.ಪಿ.ಯಲ್ಲಿ ಕೆಲಸ ಮಾಡಿಕೊಂಡು, ಬಿ.ಜೆ.ಪಿ.ಯಲ್ಲಿ ಯಾವುದೋ ಒಂದು ಪದಾಧಿಕಾರ ಹೊಂದಿಕೊಂಡು ಇದ್ದಂಥ ವ್ಯಕ್ತಿ ಅನಂತಕುಮಾರ.. ಇವರಿಗೆ ಮಗಳನ್ನು ಮದುವೆ ಮಾಡಿಕೊಡುವುದು ಹ್ಯಾಂಗಪ್ಪ ಅನ್ನುವಂಥ ಒಂದು ಸಣ್ಣ ಆತಂಕ ಪ್ರಭಾಕರ್ ಅವರಲ್ಲಿ ಇತ್ತು. ಆಗಿನ ಅವರ ಮಾತಿನ ಶೈಲಿಯಲ್ಲಿ ಅದು ವ್ಯಕ್ತವಾಗುತ್ತಿತ್ತು. ಆದರೆ, ಯಾವುದೇ ವಿರೋಧವನ್ನು ಅವರು ವ್ಯಕ್ತ ಮಾಡಲಿಲ್ಲ .ಪ್ರಭಾಕರ್ ಓಕ್ ಬೇರೆ ಊರಿನಲ್ಲಿ ಕೆಲಸ ಮಾಡುತ್ತ ಇದ್ದರು, ಹೀಗಾಗಿ ಸಂಪೂರ್ಣ ಜವಾಬ್ದಾರಿಯನ್ನು ನಾವು ಅಗದೀ ಅಣ್ಣತಮ್ಮಂದಿರಾಗಿ ಇರುವುದರಿಂದ ಮದುವೆಯ ಊಟದ ವ್ಯವಸ್ಥೆ ಮತ್ತಿತರ ಪೂರ್ಣಜವಾಬ್ದಾರಿಯನ್ನು ನಮಗೆ ವಹಿಸಿಕೊಟ್ಟಿದ್ದರು. ತಮ್ಮ ಆತಂಕವನ್ನು ತೋರುಗೊಡದೆ ಅವರು ಅತ್ಯಂತ ಸಂತೋಷದಿಂದ ಮದುವೆಯನ್ನು ವಿಜೃಂಭಣೆಯಿಂದ ಮಾಡಿದರು. ಒಮ್ಮೆ ಸಂಬಂಧಗಳು ಬೆಳೆದ ಮೇಲೆ ಆತಂಕದ ಭಾವನೆ ತನ್ನಷ್ಟಕ್ಕೆ ತಾನೇ ಕಡಿಮೆಯಾಯಿತು. ಓಕ್ ಅವರಲ್ಲಿ ಗಣಪತ್ ಮಹಾರಾಜರ ಸಂಸ್ಕಾರ ಇರುವುದೊಂದು, ಅನಂತಕುಮಾರ್ ಅವರದು ಒಂದು ಸಂಸ್ಕಾರದ ಮನೆ, ಇವರದ್ದು ಒಂದು ದೊಡ್ಡ ಸಂಸ್ಕಾರದ ಮನೆ ಎರಡು ಕುಟುಂಬಗಳ ಸಂಸ್ಕಾರಗಳು ಸೇರಿ ಇವರ ಬಾಳು ಯಶಸ್ಸು ಕಂಡಿತು. ಅನಂತಕುಮಾರ್ ಜೊತೆ ಯಾವಾಗಲೂ ತೇಜಸ್ವಿನಿಯವರು ಒಬ್ಬ ಬೆಂಗಾವಲಾಗಿ ನಿಂತಿದ್ದು ಮಾತ್ರ ಒಂದು ದೊಡ್ಡ ಸಾಧನೆ ಅಂತ ಹೇಳಿದರೆ ತಪ್ಪಾಗಲಾರದು.



ಎಂ.ಟಿ.ಎಸ್. ಕಾಲೊನಿಯಲ್ಲಿ ಅನಂತಕುಮಾರ್ ಅವರ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರಿರುವಂಥ ಮುಖ್ಯ ನಾಲ್ಕು ಹೆಸರುಗಳನ್ನು ನೆನಪಿಸಿಕೊಳ್ಳುವುದಾದರೆ, ವೆಂಕಟರಾಮ್ , ರಂಗರಾಜನ್, ದಯಾನಿಧಿ ಮಾಮ , ಇನ್ನೊಬ್ಬರು ರಾಮಮೂರ್ತಿ. ಅವರೆಲ್ಲ ರೈಲ್ವೆ ಉದ್ಯೋಗಿಗಳಾಗಿದ್ದರು. ಅನಂತಕುಮಾರ್ ಅವರ ಕಾಲದಲ್ಲಿ ಎಂ.ಟಿ.ಎಸ್.ಕಾಲೋನಿಯಲ್ಲಿ ದೊಡ್ಡ ಪ್ರಮಾಣದಲ್ಲಿ ರಾಮೋತ್ಸವ ಆಗುತ್ತಿತ್ತು. ಈ ಎಲ್ಲಾ ವ್ಯಕ್ತಿಗಳು ಸೇರಿ ನಡೆಸುವಾಗ ಅವರ ಜೊತೆ ಜೊತೆಯಾಗಿ ಅನಂತಕುಮಾರ್ ಯುವಕರನ್ನೆಲ್ಲ ಕಟ್ಟಿಕೊಂಡು ಕೆಲಸವನ್ನು ಮಾಡುತ್ತ ಇದ್ದರು. ಹೀಗಾಗಿ ಬಹಳ ಉತ್ತಮವಾದ ಸಂಸ್ಕಾರ. ಗಗಿರಿಜಾ ಶಾಸ್ತ್ರಿಯವರ ಸಂಸ್ಕಾರವಂತು ಬಹಳಷ್ಟು ಅವರ ಮೇಲೆ ಪ್ರಭಾವ ಬೀರಿದೆ ಅಂತ ಹೇಳಿದರೆ ತಪ್ಪಾಗಲಿಕ್ಕಿಲ್ಲ. ಪ್ರಭಾಕರ್ ಅವರ ಜೊತೆ ಸಂಬಂಧವನ್ನು ಬೆಳೆಸಿದ ಮೇಲೆ ಅವರು ನಮ್ಮ ಹೆಚ್ಚು ಸಂಪರ್ಕಕ್ಕೆ ಬಂದರು. ನಮ್ಮ ಮಗ ದೆಹಲಿಯಲ್ಲಿ ಇರುವುದರಿಂದ ಅವರು ಇನ್ನೂ ಹೆಚ್ಚು ಸಂಪರ್ಕಕ್ಕೆ ಬರಲಿಕ್ಕೆ ಸಾಧ್ಯವಾಯಿತು.

ಅನಂತ್ ಅವರಲ್ಲಿ ನಾನು ಕಂಡು ಕೊಂಡ ವಿಶೇಷಗುಣ ಅಂದರೆ ವಿನಯಶೀಲತೆ. ನನಗೆ ಅನ್ನಿಸುವ ಮಟ್ಟಿಗೆ ರಾಷ್ಟ್ರ ಮಟ್ಟದಲ್ಲಿ ಬೆಳೆದಂಥ ಒಬ್ಬ ವ್ಯಕ್ತಿಯಲ್ಲಿ ಅಂಥ ವಿನಯಶೀಲತೆಯನ್ನು ಕಾಣುವುದು ಅಪರೂಪ. ಆದರೆ ಆ ಮಟ್ಟದಲ್ಲಿ ಬೆಳೆದಾಗ ಎಲ್ಲಿಯೂ ವಿನಯಗುಣಕ್ಕೆ ಧಕ್ಕೆ ಬಾರದಂತೆ, ಹಿರಿಯರಿಗೆ ಅಗೌರವ ತೋರುವಂತೆ ನಡೆದುಕೊಳ್ಳುವಂಥ ಉದಾಹರಣೆಗಳು ಅವರ ಜೀವನದಲ್ಲಿ ಎಲ್ಲಿಯೂ ಇಲ್ಲವೇ ಇಲ್ಲ. ನಾನು ಒಮ್ಮೆ ವಿಮಾನ ನಿಲ್ದಾಣದ ಉದ್ಘಾಟನೆಯ ಸಮಾರಂಭಕ್ಕೆ ಹೋಗಿದ್ದೆ. ಕೇಂದ್ರ ಸಚಿವರಾಗಿದ್ದ ಅನಂತಕುಮಾರ್ ಅವರು ಆ ಉದ್ಘಾಟನೆಗೆ ಬಂದಿದ್ದರು. ಆಗ ನನ್ನ ಕಾಲು ನೋವಿನಿಂದ ನಡೆಯುವುದು ಸ್ವಲ್ಪ ನಿಧಾನವಾಗುತ್ತಿತ್ತು. ಆದರೆ ದೂರದಿಂದಲೇ ನನ್ನನ್ನು ಗುರ್ತಿಸಿ ನಾತು ಸಾರ್ ಎಲ್ಲಿದ್ದೀರಿ ಬನ್ನಿರಿ ಅಂತ ಬಂದು ಅಲ್ಲೇ ಬಗ್ಗಿ ನಮಸ್ಕಾರ ಮಾಡಿ ಮತ್ತೆ ಉದ್ಘಾಟನೆಗೆ ಹೋದರು. ಆ ರೀತಿ ಒಂದು ಸಂಸ್ಕಾರವಂತ ವ್ಯಕ್ತಿತ್ವ,ವುಳ್ಳ ರಾಷ್ಟ್ರಮಟ್ಟದ ನಾಯಕನಾಗುವ ವ್ಯಕ್ತಿ, ಹುಬ್ಬಳ್ಳಿಯಲ್ಲಿ ಮತ್ತಿನ್ನು ಎಷ್ಟು ವರ್ಷಕ್ಕೆ ಹುಟ್ಟಿ ಬರುತ್ತಾರೋ ಗೊತ್ತಿಲ್ಲ.

ಮುಂದಿನ ಭವಿಷ್ಯವನ್ನು ಕಂಡಿಲ್ಲ. ಇಲ್ಲಿಯವರೆಗೆ ಮಾತ್ರ ಆ ರೀತಿ ಒಬ್ಬ ಸಾಧಾರಣ ಬಾಲಕ ನಾಯಕನಾಗಿದ್ದು ಮಾತ್ರ ಬಹಳ ಅಪರೂಪವಾದ ಒಂದು ಘಟನೆ ಅಂತ ಹೇಳಿದರೆ ತಪ್ಪಾಗಲಾರದು. ತುರ್ತುಪರಿಸ್ಥಿತಿಯ ಕಾಲದಲ್ಲಿ ಅವರ ಕಾರ್ಯಶಾಲೆ ಇಲ್ಲೇ ಅರವಿಂದ ನಗರವೇ ಆಗಿತ್ತು . ಅವಾಗ ತಲೆಮರೆಸಿಕೊಂಡು ಓಡಾಡುವಂಥ ಕಾಲ ಇತ್ತು ಅಲ್ಲ. ಎಲ್ಲೆಲ್ಲಿ ಸಂಘದ ವ್ಯಕ್ತಿಗಳು ಇರುತ್ತಾರೆ. ಅಥವಾ ಎಮರ್ಜೆನ್ಸಿಯನ್ನು ವಿರೋಧಿಸುವಂಥ ವ್ಯಕ್ತಿಗಳು ಇರುತ್ತಾರೆ ಅವರನ್ನು ಹಿಡಿದುಹಾಕುವಂಥ ಕೆಲಸಗಳು ನಡೆಯುತ್ತ ಇತ್ತು. ಹೀಗಾಗಿ ಅವರು ಒಂದು ದಿವಸ ಒಬ್ಬರ ಮನೆಯಲ್ಲಿ ಆಮೇಲೆ ಇನ್ನೊಂದು ದಿವಸ ಇನ್ನೊಬ್ಬರ ಮನೆಯಲ್ಲಿ ಇರೋದು, ಗುಪ್ತ ಸಂದೇಶಗಳನ್ನು ಕಳುಹಿಸುವುದು. ಜೈಲಿನಲ್ಲಿ ಇದ್ದವರಿಗೆ ಊಟವನ್ನು ಕಳುಹಿಸುವ ಬಗೆ ಹೇಗೆ ಇದನ್ನೆಲ್ಲ ಭೂಗತವಾಗಿ ಮಾಡಬೇಕಾಗಿ ಆಗುತ್ತಿತ್ತು. ಆ ಸಂದರ್ಭಗಳಲ್ಲಿ ಅರವಿಂದನಗರ ಕೆಲವು ದಿವಸ ಅವರ ಕಾರ್ಯಶಾಲೆಯಾಗಿತ್ತು

ಮುಂದೆಯೂ ಅವರ ಹುಬ್ಬಳ್ಳಿ ಸಂಪರ್ಕ ಹಾಗೇ ಮುಂದುವರೆಯಿತು. ಅವರು ಎಲ್ಲೇ ಇದ್ದರೂ ಸಹಿತ ತಾನು ಹುಟ್ಟಿ ಬೆಳೆದ ಊರನ್ನು ಮಾತ್ರ ಅವರು ಎಂದು ಮರೆಯಲಿಲ್ಲ. ದೇವೇಗೌಡರು ಪ್ರಧಾನ ಮಂತ್ರಿಯಾಗಿದ್ದ ಸಂದರ್ಭದಲ್ಲಿ ಏನೂ ರೈಲ್ವೆ ವಲಯವನ್ನು ಬೆಂಗಳೂರಿಗೆ ಶಿಫ್ಟ್ ಮಾಡಿದ್ದರು. ವಾಜಪೇಯಿ ಸರ್ಕಾರ ಬಂದಾಗ ಅನಂತಕುಮಾರ್ ರೈಲ್ವೆ ವಲಯವನ್ನು ಮತ್ತೆ ಹುಬ್ಬಳ್ಳಿಗೆ ತರುವಂತೆ ವಹಿಸಿದಂಥಾ ಶ್ರಮ, ತೋರಿದಂಥ ನಿಷ್ಠೆ. ಅವರಿಗೆ ಹುಬ್ಬಳ್ಳಿಯ ಬಗೆಗೆ ಇರುವಂಥ ಪ್ರೇಮವನ್ನು ತೋರಿಸಿ ಕೊಡುತ್ತದೆ.

ಮತ್ತೆ ಅವರಿಗೆ ಇದ್ದ ನೆನಪಿನ ಶಕ್ತಿ ಅಗಾಧ. ಯಾರೇ ವ್ಯಕ್ತಿಯಿರಲಿ ೨೦ ವರ್ಷ ಹಿಂದೆ ನೋಡಿದ್ದವರಾದರೂ ಸಹಿತ ಹೆಸರಿನಿಂದ ಕೂಗಿ ಕರೆಯುವಷ್ಟು ಅವರಿಗೆ ಆ ಸ್ಮರಣ ಶಕ್ತಿ ಜಾಗ್ರತವಿರುತ್ತಿತ್ತು. ಮತ್ತು ಅವರ ಅತಿಥಿ ಸತ್ಕಾರವಂತೂ ಅವರ ಮನೆಯ ಒಂದು ಸಂಸ್ಕಾರವೇ ಆಗಿತ್ತು ಅಂತ ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಪುಟ 7 ರಲ್ಲಿ ಮುಂದುವರೆದಿದೆ

ಮತ್ತೆ ನಾನು ಗುರುತಿಸಿದ ಅವರ ಇನ್ನೊಂದು ವಿಶೇಷ ಗುಣ ಅಂದರೆ ಅವರು ಅನೇಕ ರಾಜ್ಯಗಳಲ್ಲಿ ಚುನಾವಣೆ ಉಸ್ತುವಾರಿಯಾಗಿ ಕಾರ್ಯವನ್ನು ನಿಭಾಯಿಸಿದ ಬಗೆ. ಎಲೆಕ್ಷನ್ ಮ್ಯಾನೇಜ್ಮೆಂಟ್ ಅನ್ನುತ್ತಾರಲ್ಲ ಅದನ್ನು ರಾಷ್ಟ್ರ ರಾಜಕಾರಣದಲ್ಲಿ ಕರ್ನಾಟಕದ ಹುಬ್ಬಳ್ಳಿಯ ಒಬ್ಬಹುಡುಗ ನಿರ್ವಹಿಸಿದ ರೀತಿ ಅದ್ಭುತವಾಗಿತ್ತು. ಮುಖ್ಯವಾಗಿ ಅವರಿಗೆ ಪ್ರತಿಯೊಂದು ರಾಜ್ಯದ ಡೆಮೋಗ್ರಫೀ ಗೊತ್ತಿತ್ತು . ದಕ್ಷಿಣ ಭಾರತದಿಂದ ಹಿಡಿದು ಉತ್ತರ ಭಾರತದ ಎಲ್ಲಾ ಈಶಾನ್ಯ ರಾಜ್ಯಗಳವರೆಗೆ, ಯಾವ ರಾಜ್ಯದಲ್ಲಿ ಯಾವ ಜನಾಂಗ ಯಾವ ರೀತಿ ಇದೆ ಅನ್ನುವಂಥ ಒಂದು ಡೆಮೋಗ್ರಫಿಯನ್ನು ಅವರು ಬಲ್ಲವರಾಗಿದ್ದರು. ಯಾವ ರಾಜ್ಯದ ಉಸ್ತುವಾರಿಯೇ ಸಿಗಲಿ, ಮಧ್ಯ ಪ್ರದೇಶವೋ ಅಸ್ಸಾಂ ರಾಜ್ಯವೋ ಅಲ್ಲಿ ಹೋಗಿ ಆ ಡೆಮೋಗ್ರಫಿಯ ಅಧ್ಯಯನ ಮಾಡಿ ಯಾರಿಗೆ ಎಲ್ಲಿ ಟಿಕೇಟ್ ಕೊಟ್ಟರೆ ಗೆಲ್ಲುತ್ತಾರೆ ಅನ್ನುವಂಥ ಒಂದು ಲೆಕ್ಕಾಚಾರವನ್ನು ಸ್ಥಳೀಯವಾಗಿ ಪರಿಶೀಲಿಸುತ್ತಿದ್ದರು. ಪಕ್ಷಕ್ಕೆ ಗೆಲುವು ತರುವಂಥ ರೀತಿಯಲ್ಲಿ ಹೆಚ್ಚಿಗೆ ಸ್ಥಾನಗಳನ್ನುಗಳಿಸಬಹುದಾದ ರೀತಿಯಲ್ಲಿ ಯಾವ ರೀತಿ ಪ್ರಯತ್ನ ಮಾಡಬೇಕು ಅನ್ನುವುದನ್ನು ಪ್ರಾಮಾಣಿಕವಾಗಿ ನ್ಯಾಯ ಒದಗಿಸುವಂಥ ಕೆಲಸವನ್ನು ಅವರು ಮಾಡುತ್ತಿದ್ದರು . ಯಾವುದೇ ಒಂದು ಕೆಲಸ ಕೊಟ್ಟರೆ ಅದನ್ನು ಅತ್ಯಂತ ಆಳ ಮಟ್ಟದಲ್ಲಿ ಹೋಗಿ ಅದನ್ನು ವಿಶ್ಲೇಷಣೆ ಮಾಡಿ ಹ್ಯಾಂಗ ಮಾಡಿದರೆ ಏನೂ ಆಗುತ್ತದೆ ಅನ್ನುವುದನ್ನು ತಿಳಿದುಕೊಂಡು ಕೆಲಸ ಮಾಡುವಂಥ ಪ್ರವೃತ್ತಿ ಅವರಲ್ಲಿ ತೀವ್ರವಾಗಿತ್ತು. ಅನಂತಕುಮಾರ್ ಬಹಳ ಹರಟೆ ಪ್ರಿಯರು, ಸ್ನೇಹ ಜೀವಿ. ಅವರಂಥ ಸ್ನೇಹ ಜೀವಿಯನ್ನು ರಾಜಕಾರಣದಲ್ಲಿ ಸಾಮಾನ್ಯವಾಗಿ ಕಾಣುವುದು ಅಪರೂಪ. ರಾಜಕಾರಣದಲ್ಲಿ ಟೆನ್ಷನ್ ಇದ್ದೆ ಇರುತ್ತದೆ. ಆದರೆ ಅದರ ಹೊರತಾಗಿಯೂ ಒಬ್ಬ ಸ್ನೇಹ ಜೀವಿಯಾಗಿಯೂ ಕುಟುಂಬ ಜೀವಿಯೂಆಗಿದ್ದರು. ಮನೆಗೆ ಬಂದ ಮೇಲೆ ಅವರು ಕುಟುಂಬಸ್ಥರಾಗಿ ವರ್ತಿಸುತ್ತ ಇದ್ದರೇ ವಿನ: ರಾಜಕಾರಣಿಗಳಾಗಿ ಎಂದು ವರ್ತನೆ ಮಾಡುತ್ತಿರಲಿಲ್ಲ. ಇಲ್ಲಿ ಬಂದರೆ ನಾತು ಫ್ಯಾಮಿಲಿಯ ಒಬ್ಬ ಆತ್ಮೀಯನಾಗಿ ವರ್ತನೆ ಮಾಡುವುದು. ಅವರ ಮನೆಗೆ ಹೋದರೆ ಅವರ ಆತ್ಮೀಯನಾಗಿ ವರ್ತನೆ ಮಾಡುವುದು, ತಮ್ಮ ಸ್ವಂತ ಮನೆಯಲ್ಲಿ ಇದ್ದರೆ ಆ ಕುಟುಂಬದ ಹಿರಿಯನಾಗಿ ಕೆಲಸಗಳನ್ನು ನಿರ್ವಹಿಸುವುದು ಇದೆಯಲ್ಲ ಆ ಒಂದು ಕೌಟುಂಬಿಕವಾದಂಥ ಆತ್ಮೀಯ ಗುಣ ಅವರಲ್ಲಿ ಬಹಳ ಇತ್ತು. ಎಲ್ಲ ಕಡೆಯೂ ರಾಜಕಾರಣಿಯ ಪ್ರಯೋಗಗಳನ್ನು ಮಾಡುತ್ತ ಇರಲಿಲ್ಲ. ಇದೊಂದು ಗಮನಾರ್ಹ ಗುಣವೆಂದು ನಾನು ಭಾವಿಸಿದ್ದೇನೆ.

# ಆತ್ಮನಿರ್ಭರ ಭಾರತದೆಡೆಗೆ ಜೈವಿಕ ಇಂಧನ

ಪುಟ 3 ರಿಂದ

ಕಾರ್ಯಕ್ರಮವಿದೆ .ಎಲ್ಲಾ ತ್ಯಾಜ್ಯವಸ್ತುಗಳನ್ನು ಅದರಲ್ಲಿ ಬಳಕೆ ಮಾಡಿಕೊಂಡು ಬಯೋಗ್ಯಾಸ್ ತಯಾರು ಮಾಡಬೇಕು. ಅದರಿಂದ ೧೫ ಮಿಲಿಯನ್ ಮೆಟ್ರಿಕ್ ಟನ್ ಗಳಷ್ಟು ಗ್ಯಾಸ್ ಉತ್ಪಾದನೆ ಆಗಬೇಕು. ೨೦೨೩-೨೪ ರ ವೇಳೆಗೆ ಐದು ಸಾವಿರ ಘಟಕಗಳು ಕಾರ್ಯಾರಂಭ ಮಾಡಿದ ನಂತರ, ಈಗ ಆಮದು ಮಾಡಿಕೊಳ್ಳುತ್ತಿರುವ ನೈಸರ್ಗಿಕ ಅನಿಲದಲ್ಲಿ ಶೇ.75ರಷ್ಟು ಆಮದು ಕಡಿತವಾಗಬಹುದು.

ಎಥೆನಾಲ್, ಬಯೋಡಿಜೆಲ್ ಅಥವಾ ಬಯೋಗ್ಯಾಸ್ ಅಷ್ಟೇ ಅಲ್ಲ ನಾವು ವಿಮಾನಗಳಲ್ಲಿ ಬಳಸುವಂತಹ ಬಯೋಜೆಟ್ ಫ್ಯೂಯಲ್ ಅನ್ನು ತಯಾರಿಸುವ ತಂತ್ರಜ್ಞಾನವನ್ನು ದೇಶದಲ್ಲಿ ರೂಪಿಸಿದ್ದೇವೆ. ಯಾವುದೇ ರೀತಿಯ ಎಣ್ಣೆಯಿಂದ ಈ ಬಯೋಜೆಟ್ ಫ್ಯೂಯಲ್ ಮಾಡುವಂತಹ ತಂತ್ರಜ್ಞಾನವನ್ನು ಡೆಹರಾಡೂನ್ನಲ್ಲಿ ಇಂಡಿಯನ್ ಇನ್ಸ್ ಟಿಟ್ಯೂಟ್ ಆಫ್ ಪೆಟ್ರೋಲಿಯಂ ಸಂಸ್ಥೆಯಲ್ಲಿ ಆವಿಷ್ಕಾರ ಮಾಡಲಾಗಿದೆ.

ಅಂದರೆ ಈ ಕಾರ್ಯಕ್ರಮ ಆತ್ಮನಿರ್ಭರ ಭಾರತದೆಡೆ ನಮ್ಮನ್ನು ಹೇಗೆ ಕರೆದೊಯ್ಯುತ್ತದೆ? ನಮ್ಮ ದೇಶದ ಎಲ್ಲಾ ಕ್ಷೇತ್ರಗಳಲ್ಲಿ ಇರುವಂತಹ ಕೊರತೆಗಳನ್ನು ಗುರುತಿಸಿ ಪರಿಹಾರವನ್ನು ಕಂಡುಕೊಳ್ಳಬೇಕು. ನಮ್ಮ ದೇಶದ ಸಮಸ್ಯೆಗಳಿಗೆ ನಮ್ಮದೇ ಆದಂತಹ ಪರಿಹಾರ ಕಂಡುಕೊಳ್ಳಬೇಕು. ಗ್ರಾಮೀಣ ಪ್ರದೇಶದಲ್ಲಿ ಉದ್ದಿಮೆಗಳಾಗಬೇಕು ಅಲ್ಲಿ ಆರ್ಥಿಕ ವ್ಯವಸ್ಥೆ, ಹೆಚ್ಚು ಹಣ ಅಲ್ಲಿ ತೊಡಗಿಸಬೇಕು ಪರಿಸರಕ್ಕೆ ಮಾರಕವಾಗದೆ ಪರಿಸರಕ್ಕೆ ಪೂರಕವಾಗಿರುವ ರೀತಿಯಲ್ಲಿ ಈ ಕಾರ್ಯಕ್ರಮವನ್ನು ನಾವು ಹೇಗೆ ರೂಪಿಸಬಹುದು - ಇವೆಲ್ಲವೂ ಈ ಆತ್ಮನಿರ್ಭರದ ಭಾಗವಾಗಿದೆ. ಹೀಗಾಗಿ ಇಂದು ಜೈವಿಕ ಇಂಧನ ಕಾರ್ಯಕ್ರಮ ಇದು ಆತ್ಮನಿರ್ಭರತೆ ಎನ್ನುವುದರ ಬಗ್ಗೆ ಮೋದಿಯವರು ಏನು ಹೇಳುತ್ತಿದ್ದಾರೋ ಅದರ ಕಡೆಗೆ ತೆಗೆದುಕೊಂಡಿರುವಂತಹ ಪ್ರಮುಖವಾದ ಹೆಜ್ಜೆ ಎಂದು ನಾನು ಭಾವಿಸುತ್ತೇನೆ.

# ರಾಜಧಾನಿ ದೆಹಲಿಯಲ್ಲಿ ಕನ್ನಡದ ಧ್ವನಿ

ಪುಟ 5 ರಿಂದ

ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಎಲ್ಲರ ಉತ್ಸಾಹ ಹೆಚ್ಚಿಸುತ್ತಿದ್ದರು. ಮತ್ತೆ ಹಾಗೆ ಬಂದಾಗ ತಮ್ಮ ಭಾಷಣದಲ್ಲಿ ಯಾವುದೇ ರಾಜಕೀಯ ವಿಷಯಗಳನ್ನು ಪ್ರಸ್ಥಾವ ಮಾಡದೆ, ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ವಿಚಾರವಾಗಿ ಮಾತ್ರ ಮಾತಾಡುವ ಎಚ್ಚರವನ್ನೂ , ಪ್ರಬುದ್ಧತೆಯನ್ನೂ ತೋರಿಸುತ್ತಿದ್ದರು. ದೆಹಲಿಯ ಅವರ ಮನೆಗೆ ಹೋದರೆ, ಊಟ ಕಾಫಿ, ತಿಂಡಿಗಳ ಜೊತೆಗೆ ಬಾಯ್ತುಂಬಾ ಮಾತಾಡುವ ಸಹೃದಯತೆಯನ್ನು ಅವರು ಕೊನೆತನಕ ಉಳಿಸಿಕೊಂಡಿದ್ದರು.

ಕರ್ನಾಟಕಕ್ಕೆ ಸಂಬಂಧಿಸಿದ ವಿಷಯಗಳು ಬಂದಾಗ ರಾಜಕೀಯೇತರವಾಗಿ ಯೋಚಿಸುವ ಶಕ್ತಿ ಅವರಿಗಿತ್ತು. ಕಾವೇರಿ ನದಿ ನೀರು ಹಂಚಿಕೆಯ ಕುರಿತಾಗಿ ಅವರು ತೆಗೆದುಕೊಳ್ಳುತ್ತಿದ್ದ ನಿರ್ಣಯಗಳೂ ಅತ್ಯಂತ ಮಹತ್ವದ್ದಾಗಿರುತ್ತಿದ್ದುದನ್ನು ನಾಡು ಈಗಾಗಲೇ ಗುರುತಿಸಿದೆ. ಯಾವುದೇ ಮಂತ್ರಾಲಯದಿಂದ ರಾಜ್ಯಕ್ಕೆ ಹಣ ಸರಿಯಾಗಿ ಹಣ ಬಿಡುಗಡೆ ಆಗದಿದ್ದರೆ ಅನಂತ ಕುಮಾರ್ ಆ ಮಂತ್ರಾಲಯಕ್ಕೆ ಧಾವಿಸಿ, ಹಣ ಬಿಡುಗಡೆಯಾಗುವಂತೆ ಮಾಡುತ್ತಿದ್ದರು. ಕನ್ನಡಿಗರಿಗೆ ಸಹಜವಾಗಿರುವ ಹಿಂಜರಿಕೆಯನ್ನು ಅವರು ಮೀರಿದ್ದರು. ಹಿಂದಿ, ಇಂಗ್ಲಿಷುಗಳ ಮೇಲೆ ಒಳ್ಳೆಯ ಹಿಡಿತವಿದ್ದ ಅವರಿಗೆ ಸಂವಹನದ ಸಮಸ್ಯೆಯೇ ಇರಲಿಲ್ಲ. ಹಿಂದಿ ಪ್ರದೇಶದ ಘಟಾನುಘಟಿಗಳಾದ ಯಾವುದೇ ರಾಜಕಾರಣಿಗಳಿಂದ ಅನಂತ ಕುಮಾರ್ ಸದಾ ಮುಂದೆಯೇ ಇರುತ್ತಿದ್ದರು. ಅದು ನನ್ನಂಥವನ ಹೆಮ್ಮೆಗೆ ಕಾರಣವಾಗುತ್ತಿತ್ತು.

ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನ-ಮಾನ ದೊರಕುವಲ್ಲಿ ಅನಂತ ಕುಮಾರ್ ದುಡಿದಿರುವುದು ಬಹಳ ಜನರಿಗೆ ಗೊತ್ತಿಲ್ಲ. ನಾನು ದೆಹಲಿ ಕರ್ನಾಟಕ ಸಂಘದಲ್ಲಿ ಈ ಕುರಿತು ಆಯೋಜಿಸಿದ ರಾಷ್ಟ್ರೀಯ ವಿಚಾರ ಸಂಕಿರಣದ ( ೨೦೦೭) ಶಿಫಾರಸುಗಳನ್ನು ಅವರು ಸ್ವತ: ಸರಕಾರಕ್ಕೆ ತಲುಪಿಸಿದ್ದರು. ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನ-ಮಾನ ಸಿಕ್ಕಿದೆಯಾದರೂ ಅದರಿಂದ ಕನ್ನಡಕ್ಕಾದ ಪ್ರಯೋಜನ ಕಡಿಮೆಯೆಂಬುದನ್ನು ಅನಂತ ಕುಮಾರ್ ಮನಗಂಡಿದ್ದರು. ಶಾಸ್ತ್ರೀಯ ಕನ್ನಡ ಕೇಂದ್ರವನ್ನು ಕೇಂದ್ರ ಸರಕಾರದಿಂದ ಬಿಡಿಸಿ ರಾಜ್ಯ ಸರಕಾರದಡಿಗೆ ತರಬೇಕೆಂದು ಅವರು ಪ್ರಾಮಾಣಿಕವಾಗಿ ಬಯಸಿದ್ದರು. ಕರ್ನಾಟಕದಲ್ಲಿ ಕಾಂಗ್ರೆಸ್ ಸರಕಾರ ಇದ್ದಾಗ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಹನುಮಂತಯ್ಯನವರ ನೇತೃತ್ವದಲ್ಲಿ ಈ ಕುರಿತು ( ೨೦೧೬ರಲ್ಲಿ ಇರಬೇಕು) ನಿಯೋಗವೊಂದು ಬಂದಿತು . ಅದರಲ್ಲಿ ಚಿದಾನಂದ ಮೂರ್ತಿಯವರಂಥ ಹಿರಿಯರೂ ಇದ್ದರು. ಈ ನಿಯೋಗವು ಸಭೆ ಸೇರಿದ್ದು ಅನಂತ ಕುಮಾರ್ ಅವರ ಮನೆಯಲ್ಲಿ. ನಿಯೋಗದ ಎಲ್ಲರನ್ನೂ ಅಭಿನಂದಿಸಲು ಅನಂತ ಕುಮಾರ್ ಅವರು ಕರ್ನಾಟಕದ ೧೨ ಜನ ಎಂಪಿಗಳನ್ನು ಕ್ಷಿಪ್ರವಾಗಿ ಸೇರಿಸಿದರು. ನಿಯೋಗದ ಉದ್ದೇಶವನ್ನು ಅವರಿಗೆ ವಿವರಿಸಿ, ಶಾಸ್ತ್ರೀಯ ಕೇಂದ್ರವು ರಾಜ್ಯ ಸರಕಾರದ ಕೈಕೆಳಗೆ ಬರಲು ಎಲ್ಲರೂ ಒಟ್ಟಾಗಿಯೇ ಕೆಲಸ ಮಾಡಬೇಕೆಂದು ವಿನಂತಿಸಿಕೊಂಡು ಸಾಯಂಕಾಲ ಆರು ಗಂಟೆಯ ಹೊತ್ತಿಗೆ ಆಗ ಮಾನವ ಸಂಪನ್ಮೂಲ ಇಲಾಖೆಯ ಸಚಿವೆಯಾಗಿದ್ದ ಸ್ಮೃತಿ ಇರಾನಿಯವರ ಕೊಠಡಿಗೆ ನಮ್ಮನ್ನು ಕರೆದೊಯ್ದು ಸಚಿವರಿಗೆ ಎಲ್ಲರನ್ನೂ ಪರಿಚಯಿಸಿ, ಬಂದ ಉದ್ದೇಶವನ್ನು ವಿವರಿಸಿದರು. ಶ್ರೀಮತಿ ಇರಾನಿಯವರು ' ಅನಂತ ಜೀ ಹೇಳಿದ ಮೇಲೆ ಆಗೋದಿಲ್ಲ ಎನ್ನಲಾದೀತೇ ? ನೀವು ಆ ಶಾಸ್ತ್ರೀಯ ಕೇಂದ್ರ ನಡೆಸಲು ಬೇಕಾದಷ್ಟು ಸ್ಥಳ ಕೊಡಿ, ಪತ್ರ ಬರೆಯಿರಿ, ಒಂದು ತಿಂಗಳ ಒಳಗಾಗಿ ಅದನ್ನು ರಾಜ್ಯ ಸರಕಾರಕ್ಕೆ ಒಪ್ಪಿಸುತ್ತೇನೆ' ಅಂದರು. ಆದರೆ ಕರ್ನಾಟಕ ರಾಜ್ಯ ಸರಕಾರಕ್ಕೆ ಅಂಥದ್ದೊಂದು ಪತ್ರ ಬರೆಯಲಾಗಲೇ ಇಲ್ಲ, ಯಾಕೆಂದರೆ ಆ ಹೊತ್ತಿಗೆ ಕೇಂದ್ರವು ಬೆಂಗಳೂರಲ್ಲೋ ಮೈಸೂರಲ್ಲೋ ಎಂಬ ಜಗಳ ಸುರು ಆಗಿತ್ತು. ಈ ನಡುವೆ ಒಮ್ಮೆ ಭೇಟಿಯಾಗಿದ್ದ ಅನಂತ ಕುಮಾರ್, -' ನೋಡಿ, ನಾನಿಲ್ಲಿ ನಿಮ್ಮ ಕಣ್ಣೆದುರೇ ಎಲ್ಲ ಕೆಲಸ ಮಾಡಿದ್ದೆ. ಅಲ್ಲಿನವರಿಗೆ ಜಾಗ ತೋರಿಸಿ ಒಂದು ಪತ್ರ ಬರೆಯಲಾಗಲಿಲ್ಲ. ಈಗ ನಾನೇನಾದರೂ ಹೇಳಿದರೆ ತಕ್ಷಣ ಅದಕ್ಕೆ ರಾಜಕೀಯ ಬಣ್ಣ ಬಂದುಬಿಡುತ್ತದೆ' ಎಂದು ಬೇಸರಿಸಿಕೊಂಡರು. ಮುಂದೆ ಸ್ಮೃತಿ ಇರಾನಿಯವರ ಖಾತೆ ಬದಲಾಯಿತು. ಅನಂತ ಕುಮಾರ್ ತೀರಿಕೊಂಡರು. ಸಮಸ್ಯೆ ಇನ್ನೂ ಬಗೆಹರಿಯದೆ ಉಳಿದಿದೆ.

ದೆಹಲಿಯಲ್ಲಿ ಕರ್ನಾಟಕದ ಪ್ರತಿನಿಧೀಕರಣವನ್ನು ಸಬಲಗೊಳಿಸಬೇಕೆಂಬ ಬಲವಾದ ಇರಾದೆ ಅವರಿಗಿತ್ತು. ಜೆ ಎನ್ ಯುವಿನಲ್ಲಿ ಕನ್ನಡ ಪೀಠ ಆರಂಭವಾದಾಗ ( ೨೦೧೫) ಫೋನ್ ಮಾಡಿ ಅಭಿನಂದಿಸಿದರಲ್ಲದೆ ಪತ್ರವನ್ನೂ ಬರೆದಿದ್ದರು. ಬೇರೆ ರಾಜ್ಯದವರಿಗೆ ರಾಜಧಾನಿಯಲ್ಲಿ ಐ.ಎ.ಎಸ್ ಗಳ ಬಹು ದೊಡ್ಡ ಲಾಬಿ ಇದ್ದ ಹಾಗೇ ಕರ್ನಾಟಕಕ್ಕೂ ಬೇಕೆಂದು ಅವರು ಭಾವಿಸಿದ್ದರು. ಕರ್ನಾಟಕದ ಎಲ್ಲ ಪತ್ರಕರ್ತರನ್ನೂ ಅವರು ಬಹಳ ಗೌರವದಿಂದ ಕಾಣುತ್ತಿದ್ದರು. ರಾಜ್ಯದ ಸಮಸ್ಯೆಗಳನ್ನು ಲೋಕಸಭೆಯಲ್ಲಿ ಸಮರ್ಥವಾಗಿ ಮಂಡಿಸುತ್ತಿದ್ದರು. ಕೇಂದ್ರ ಸರಕಾರವನ್ನು ಹೇಗೋ ಹಾಗೆ, ಇತರ ಭಾಷಿಕ ಸಂಸದರನ್ನು ತನ್ನೆಡೆಗೆ ಆಕರ್ಷಿಸುವಂತಹ ಪ್ರತಿಭಾವಂತ ರಾಜಕಾರಣಿ ಅವರಾಗಿದ್ದರು. ರಾಜ್ಯ, ರಾಷ್ಟ್ರ, ಭಾಷೆ, ಅಭಿವೃದ್ಧಿ, ಆಧುನಿಕ ತಂತ್ರಜ್ಞಾನ ಮತ್ತಿತರ ವಿಷಯಗಳ ಬಗೆಗೆ ಅವರಿಗೆ ಆಳವಾದ ತಿಳುವಳಿಕೆ ಇತ್ತು . ಎಲ್ಲದಕ್ಕಿಂತ ಮಿಗಿಲಾಗಿ, ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ, ಕರಾವಳಿ ಕರ್ನಾಟಕ, ಲಿಂಗಾಯತ, ಒಕ್ಕಲಿಗೆ, ಬ್ರಾಹ್ಮಣ, ಬಿ ಜೆ ಪಿ, ಕಾಂಗ್ರೆಸ್, ಜೆ ಡಿ ಎಸ್ ಎಂದು ಒಡೆದು ಹೋದಂಥ ಕರ್ನಾಟಕವನ್ನು ಒಂದು ಘಟಕವಾಗಿ ಗ್ರಹಿಸುವ ಅಪೂರ್ವ ಬುದ್ಧಿಮತ್ತೆ ಅವರಿಗಿತ್ತು . ಅವರ ಅಕಾಲಿಕ ನಿಧನದಿಂದ ನಾವೆಲ್ಲರೂ ಬಡವರಾದೆವು.



**ಡಾ. ಪುರುಷೋತ್ತಮ ಬಿಳಿಮಲೆ**

# ಗಿರಿನಗರದ ರೈಟ್ ಸಹೋದರರು

ಅನುಭವಕಥನ: ಎಲ್.ಕೆ.ಶ್ರೀನಿವಾಸ್, ಎಲ್.ಕೆ.ಜನಾರ್ದನ್
ಬಿಜೆಪಿ (ಓ.ಬಿ.ಸಿ) ಕಾರ್ಯಕರ್ತರು,ಬಸವನಗುಡಿ, ಬೆಂಗಳೂರು

೧೯೯೪. ಕರ್ನಾಟಕ ವಿಧಾನಸಭಾ ಚುನಾವಣೆಯ ಪ್ರಚಾರಕಾರ್ಯ ಭರದಿಂದ ಸಾಗಿದ್ದ ದಿನಗಳು. ಭಾರತೀಯ ಜನತಾ ಪಕ್ಷ ಕರ್ನಾಟಕದಲ್ಲಿ ಆಗಿನ್ನೂ ಒಂದಿಷ್ಟು ನೆಲೆ ಹುಡುಕಿಕೊಳ್ಳುವ ಪ್ರಯತ್ನದಲ್ಲಿತ್ತು.

ಅಪರಾಹ್ನದ ಇಳಿ ಬಿಸಿಲು. ಇಬ್ಬರು ಯುವಕರು ಉತ್ತರಹಳ್ಳಿಯ ರಸ್ತೆಯೊಂದರಲ್ಲಿ ನಡೆಯುತ್ತ ಸಾಗಿದ್ದರು. ದೊಡ್ಡವನ ಕೈಯಲ್ಲಿ ಒಂದಿಷ್ಟು ಕರಪತ್ರಗಳು. ಚಿಕ್ಕವನು ತಾನು ಹಿಡಿದುಕೊಂಡಿದ್ದ ಬಿ.ಜೆ.ಪಿ. ಬಾವುಟವೊಂದನ್ನು ಬೀಸುತ್ತ ನಡೆದಿದ್ದ. ಬಾಗಿಲಿನಿಂದ ಬಾಗಿಲಿಗೆ ಸಾಗಿದ್ದ ಯುವಕ ತನಗೆದುರಾದ ನಿವಾಸಿಗಳ ಕೈಗೆ ಕರಪತ್ರವೊಂದನ್ನು ಕೊಟ್ಟು, ಬಿ.ಜೆ.ಪಿ.ಗೆ ಮತಹಾಕುವಂತೆ ವಿನಯದಿಂದ ಕೇಳಿಕೊಳ್ಳುತ್ತ ನಡೆದಿದ್ದ. ಅದೇ ದಾರಿಗೆದುರಾಗಿ ವಾಹನವೊಂದು ಬಂದು ಯುವಕರೆದುರಿನಲ್ಲೇ ನಿಂತಿತು. ಕಾರಿನಿಂದ ಇಳಿದವರು ಬಿಜೆಪಿಯ ರಾಷ್ಟ್ರೀಯ ಮುಖಂಡ ಅನಂತಕುಮಾರ್.

ಅನಂತಕುಮಾರ್, ಆ ಕ್ಷೇತ್ರದಲ್ಲಿ ಬಿಜೆಪಿ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಎಂ.ಶ್ರೀನಿವಾಸರ ಪರವಾಗಿ ಪ್ರಚಾರಕ್ಕಾಗಿ ಬಂದಿದ್ದವರು, ಈ ಉತ್ಸಾಹಿ ಕಾರ್ಯಕರ್ತರನ್ನು ಕಂಡು ವಾಹನ ನಿಲ್ಲಿಸಿ ಮಾತನಾಡಿಸಿದರು. ಏನ್ರಯ್ಯ ಇಬ್ಬರೇ ಸುತ್ತಾಡ್ತಾ ಇದ್ದೀರಿ ಎನ್ನುತ್ತ ಅವರ ಪರಿಚಯವನ್ನು ವಿಚಾರಿಸಿದರು. ಯುವಕರಲ್ಲಿ ಹಿರಿಯನು ತನ್ನನ್ನು ಶ್ರೀನಿವಾಸನೆಂದೂ ಮತ್ತೊಬ್ಬ ತನ್ನ ತಮ್ಮ ಜನಾರ್ದನನೆಂದೂ ಪರಿಚಯಿಸಿಕೊಂಡ. ತಾವು ಗಿರಿನಗರದ ನಿವಾಸಿಗಳೆಂದೂ ಬಿಜೆಪಿ ಪಕ್ಷದ ಕಾರ್ಯಕರ್ತರೆಂದೂ ಹೇಳಿಕೊಂಡರು. ನೀವು ಇಬ್ಬರೇ ಓಡಾಡ್ತಾ ಇದ್ದೀರೋ , ಇನ್ನೂ ಬೇರೆಯವರು ಜೊತೆಗಿದ್ದಾರೋ ಎಂಬ ಪ್ರಶ್ನೆಗೆ ತಾವಿಬ್ಬರೇ ಓಡಾಡುತ್ತಿರುವುದಾಗಿ ಉತ್ತರ ಬಂದಿತು. ಸರಿ, ಜನ ಏನು ಹೇಳ್ತಾರಪ್ಪ? ಎಂದು ಅನಂತಕುಮಾರ್ ಕುತೂಹಲದಿಂದ ಕೇಳಿದರು. ನೀನು ಕರಪತ್ರ ಹಂಚಿಕೊಂಡು ಇನ್ನೊಬ್ಬ ಬಾವುಟ ಹಿಡ್ಕೊಂಡ್ ತಿರುಗಿದಾಕ್ಷಣ ನಿಮ್ ಬಿಜೆಪಿ ಅಧಿಕಾರಕ್ಕೆ ಬಂದುಬಿಡತ್ತೆ ಅಂದ್ಕೊಂಡಿದೀರಾ ಅಂತ ಹಾಸ್ಯಮಾಡ್ತಾರೆ. ಆದ್ರೆ, ನಮ್ ಕೆಲ್ಸ ನಾವು ಮಾಡ್ತೀವಿ. ಇವತ್ತಲ್ಲ ನಾಳೆ ಬಿಜೆಪಿ ಚುನಾವಣೇಲಿ ಗೆಲ್ಲತ್ತೆ ಅಂತ ನಮ್ಮಾಸೆ. ಅದನ್ನೇ ಅವ್ರಿಗೂ ಹೇಳ್ತೀವಿ ಎಂದು ಯುವಕ ಹೇಳಿದ.

ಯುವಕನ ಮಾತುಗಳನ್ನು ಕೇಳಿ ಅನಂತಕುಮಾರರಿಗೆ ಬಹಳ ಸಂತೋಷವಾಯಿತು. ಮುಂದೆ ಬಂದು ಅವರಿಬ್ಬರನ್ನೂ ಅಪ್ಪಿಕೊಂಡರು. " ನೀವು ಇಬ್ಬರೇ ಇದ್ದರೇನಂತೆ? ಆ ರೈಟ್ ಸಹೋದರರು ಗೊತ್ತಲ್ಲ, ವಿಮಾನ ಹಾರಿಸೋದರಲ್ಲಿ ಯಶಸ್ವಿಯಾದರಲ್ಲ ಅವರು. ಹಾಗೆ ನೀವು ಬಿಜೆಪಿಗೆ ರೈಟ್ ಸಹೋದರರು. ಬಿಜೆಪಿಯನ್ನು ಎತ್ತರಕ್ಕೆ ಮುನ್ನಡೆಸೋದಕ್ಕೆ , ಬಿಜೆಪಿ ಭವಿಷ್ಯಕ್ಕೆ ನೀವು ಬ್ರೈಟ್ ಬ್ರದರ್ಸ್ " ಎಂದು ಅಭಿನಂದಿಸಿದರು.

ಮುಂದೆಲ್ಲ ಈ ಯುವಕರು ಎಲ್ಲಿ ಕಾಣಸಿಕ್ಕರೂ ಅನಂತಕುಮಾರ್ ಅವರನ್ನು ರೈಟ್ ಸಹೋದರರು, ಬ್ರೈಟ್ ಸೋದರರು ಎಂತಲೇ ಗುರುತಿಸುತ್ತಿದ್ದರು. ಅಣ್ಣ ಶ್ರೀನಿವಾಸ ಕಂಡಾಗ ರೀ ರೈಟ್ ಸೋದರರೇ, ನಿಮ್ ತಮ್ಮ ಎಲ್ಲಿ? ಎಂದು ಕೇಳುತ್ತಿದ್ದರು. ತಮ್ಮ ಜನಾರ್ದನ ಕಾಣಸಿಕ್ಕಾಗ ಅಣ್ಣನ ಯೋಗಕ್ಷೇಮ ವಿಚಾರಿಸುತ್ತಿದ್ದರು.

* * * *

ಈ ಬ್ರೈಟ್ ಸೋದರರಿಗೆ ಅನಂತಕುಮಾರರ ಬಗೆಗೆ ಹೇಗೋ ಕನ್ನಡದ ವರನಟ ರಾಜಕುಮಾರ್ ಬಗೆಗೂ ಅಷ್ಟೇ ಅಭಿಮಾನ. ತಮ್ಮ ಬಡಾವಣೆ ಗಿರಿನಗರದ ವಿವೇಕಾನಂದ ಪಾರ್ಕಿನಲ್ಲಿ ರಾಜಕುಮಾರರ ಪ್ರತಿಮೆಯೊಂದನ್ನು ನಿಲ್ಲಿಸಬೇಕೆಂಬ ಆಲೋಚನೆ ಶ್ರೀನಿವಾಸನಲ್ಲಿ ಮೂಡಿತು. ಅವರು ತಮ್ಮ ಸೋದರ ಜನಾರ್ದನ ಹಾಗೂ ಒಂದಿಬ್ಬರು ಸ್ನೇಹಿತರೊಡನೆ ಚರ್ಚಿಸಿ ಪುತ್ಥಳಿಯನ್ನು ಮಾಡಿಸುವ ಕೆಲಸಕ್ಕೆ ತೊಡಗಿದ್ದಾಯಿತು. ಆದರೆ, ಸಾರ್ವಜನಿಕ ಉದ್ಯಾನದಲ್ಲಿ ಹೀಗೆ ಖಾಸಗಿಯಾಗಿ ಯಾರೋ ಮುಂದೆ ಬಂದು ತಮ್ಮ ಇಷ್ಟದಂತೆ ಪ್ರತಿಮೆಯೊಂದನ್ನು ಸ್ಥಾಪಿಸುವುದೆಂದರೆ ಅನುಮತಿ ಅಷ್ಟು ಸುಲಭಕ್ಕೆ ಸಿಗುತ್ತದೆಯೇ? ಹಾಗಾಗಿ ಏನೇನೋ ಅಡಚಣೆಗಳು ಎದುರಾಗತೊಡಗಿದವು. ಇನ್ನು ಅನಂತಕುಮಾರರೊಡನೆ ಮಾತನಾಡಿ ತಮ್ಮ ಕಷ್ಟವನ್ನು ಬಗೆಹರಿಸಿಕೊಳ್ಳುವುದೆಂದು ಯೋಚಿಸಿದ ಸಹೋದರರು ಅವರನ್ನು ಭೇಟಿಯಾಗಲು ಹೋದರು.

ಸೋದರರನ್ನು ಕಂಡತಕ್ಷಣ ಅನಂತಕುಮಾರ್ ಓ ಬನ್ರೀ ಬ್ರೈಟ್ ಸೋದರರೇ ಏನು ಸಮಾಚಾರ ಎಂದು ಎಂದಿನ ಹಸನ್ಮುಖದಿಂದ ವಿಚಾರಿಸಿಕೊಂಡರು. ಶ್ರೀನಿವಾಸ ರಾಜಕುಮಾರ್ ಪ್ರತಿಮೆಯ ಸ್ಥಾಪನೆಗೆ ಒದಗಿರುವ ಅಡಚಣೆಯ ಬಗೆಗೆ ಹೇಳಿಕೊಂಡರು. ರಾಜಕುಮಾರ್ ಅವರು ಆಗಿಂದಾಗ್ಗೆ ಓಡಾಡಿರುವ ಭೇಟಿಕೊಟ್ಟಿರುವ ಜಾಗ ಅದು. ಅದೇ ಅಭಿಮಾನದಿಂದ ಪಾರ್ಕಿನ ಅದೇ ಜಾಗದಲ್ಲಿ ಪ್ರತಿಮೆ ಸ್ಥಾಪಿಸೋದು ನಮ್ಮ ಆಸೆ ಎಂದೂ ಶ್ರೀನಿವಾಸ ಹೇಳಿಕೊಂಡರು.



ಅನಂತಕುಮಾರರು ನೋಡ್ರೀ, ಇಂಥಾ ವಿಷಯದಲ್ಲಿ ರಾಜಕಾರಣದಲ್ಲಿರುವವರು ಬೆಂಬಲಿಸುವುದೂ ಕಷ್ಟ, ವಿರೋಧಿಸುವುದೂ ಆಗದ ಮಾತು. ಈಗ ನೀವು ಏನಾದರೂ ಧನಸಹಾಯ ನಿರೀಕ್ಷೆಯಲ್ಲಿಟ್ಟುಕೊಂಡು ಬಂದಿದೀರೋ ಹೇಗೆ? ಎಂದು ಕೇಳಿದರು. ಇಲ್ಲ ಸರ್, ನಾವೇ ದುಡ್ಡು ಹಾಕಿ ಪುತ್ಥಳಿ ಮಾಡಿಸ್ತಾ ಇದ್ದೀವಿ. ಆದ್ರೂ, ಏನೇನೋ ಅಡ್ಡಿಮಾಡ್ತಾ ಇದ್ದಾರೆ. ಇದನ್ನ ತಡೆದು ನಮಗೆ ಪುತ್ಥಳಿ ಸ್ಥಾಪನೆಗೆ ಅವಕಾಶಮಾಡಿಕೊಡಿ ಎಂದರು ಶ್ರೀನಿವಾಸ್. ನೀವೇ ಅಷ್ಟೊಂದು ದುಡ್ಡು ಖರ್ಚುಮಾಡಿ ಪ್ರತಿಮೆ ಮಾಡಿಸಿದ್ದೀರಾ? ಎಂದು ಅನಂತಕುಮಾರ್ ಅಚ್ಚರಿವ್ಯಕ್ತಪಡಿಸಿದರು. ಇಷ್ಟೊಂದು ಆಸಕ್ತಿಯಿಂದ ಕೆಲಸಕ್ಕೆ ಹೊರಟಿರುವಾಗ ನಿಮಗೆ ಬೆಂಬಲ ಕೊಡದಿದ್ರೆ ಹೇಗೆ? ನೀವು ಕೆಲಸ ಮುಂದುವರಿಸಿ. ನಿಮಗೇನೂ ತೊಂದರೆ ಆಗದ ಹಾಗೆ ನಾನು ನೋಡ್ಕೊಳ್ತೇನೆ ಎಂದರು.

ಪ್ರತಿಮೆ ಸಿದ್ಧವಾಯಿತು. ಶ್ರೀನಿವಾಸ ಮತ್ತವರ ಗೆಳೆಯರು ಆಶಿಸಿದ್ದಂತೆಯೇ ವಿವೇಕಾನಂದ ಉದ್ಯಾನದ ನಿರ್ದಿಷ್ಟ ಸ್ಥಳದಲ್ಲಿ ರಾಜಕುಮಾರ್ ಪ್ರತಿಮೆಯ ಅನಾವರಣವಾಯಿತು. ಪುನೀತ್ ರಾಜಕುಮಾರ್, ಕೃಷ್ಣ ಭಟ್ ಮತ್ತಿತರರು ಭಾಗವಹಿಸಿದ್ದ ಆ ಕಾರ್ಯಕ್ರಮದಲ್ಲಿ ಅನಂತಕುಮಾರರೇ ಮುಖ್ಯ ಅತಿಥಿಗಳಾಗಿ ಆಗಮಿಸಿ ಪುತ್ಥಳಿಯನ್ನು ಅನಾವರಣಮಾಡಿದರಲ್ಲದೆ, 'ಬ್ರೈಟ್ ಸೋದರರ' ಆಸಕ್ತಿ, ಪ್ರಯತ್ನಗಳನ್ನು ಶ್ಲಾಘಿಸಿದರು.

ಶ್ರೀನಿವಾಸ ಮತ್ತವರ ಗೆಳೆಯರ ನಿಸ್ವಾರ್ಥ ಮನೋಭಾವ, ಸಾಮಾಜಿಕ ಕಾಳಜಿ ಅನಂತಕುಮಾರರಿಗೆ ಬಹು ಇಷ್ಟವಾಗಿತ್ತು. ಒಮ್ಮೆ ಅನಂತಕುಮಾರ ಕರ್ನಾಟಕ ರಕ್ಷಣಾ ವೇದಿಕೆಯ ನಾರಾಯಣಗೌಡರೊಂದಿಗೆ ಮಾತನಾಡುತ್ತ ಕುಳಿತಿರುವಾಗ ಶ್ರೀನಿವಾಸ ಅಲ್ಲಿಗೆ ಬಂದರು. ಅವರನ್ನು ಕರೆದು ಪರಿಚಯಮಾಡಿಕೊಡುತ್ತ ಅನಂತಕುಮಾರ್ ನಾರಾಯಣಗೌಡರನ್ನು ಉದ್ದೇಶಿಸಿ, ನೀವು ಕನ್ನಡದ ಕೆಲಸ ಏನು ಮಾಡ್ತಾ ಇದ್ದೀರೋ ಅದಕ್ಕಿಂತ ದೊಡ್ಡ ಕೆಲಸ ಇವರು ಮಾಡ್ತಾ ಇದ್ದಾರೆ ನೋಡ್ರೀ ಎಂದು ಅಭಿಮಾನದಿಂದ ಹೇಳಿದರು.

ಶ್ರೀನಿವಾಸರ ಬಳಗ ಗಿರಿನಗರದಲ್ಲಿ ರಾಜಕುಮಾರ್ ಪ್ರತಿಮೆ ಸ್ಥಾಪಿಸಿ ಹಲವಾರು ತಿಂಗಳು ಕಳೆದಿದ್ದವು. ಬಳೇಪೇಟೆಯ ಚೌಕದಲ್ಲಿ ಅದೇ ರೀತಿ ರಾಜಕುಮಾರ್ ಪುತ್ಥಳಿಯೊಂದನ್ನು ಸ್ಥಾಪಿಸುವ ಕಾರ್ಯಕ್ರಮ ಏರ್ಪಾಡಾಯಿತು. ಇಲ್ಲೂ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಅನಂತಕುಮಾರರೇ ಬರುವವರಿದ್ದರು. ಬಳೇಪೇಟೆಯ ಸಂಘದ ಆಹ್ವಾನದ ಮೇರೆಗೆ ಶ್ರೀನಿವಾಸ , ಜನಾರ್ದನರೂ ಅಲ್ಲಿಗೆ ಹೋಗಿ ಕುಳಿತಿದ್ದರು. ಸರಿಯಾದ ಸಮಯಕ್ಕೆ ಆಗಮಿಸಿದ ಅನಂತಕುಮಾರರು ವೇದಿಕೆಯತ್ತ ಹೋಗುವಾಗ ಎದ್ದುನಿಂತ ಸಭಿಕರ ಸಾಲಿನಲ್ಲಿ ಈ ಸೋದರರನ್ನು ಗಮನಿಸಿದರು. ಏನ್ರೀ ರೈಟ್ ಸೋದರರೇ, ಇಲ್ಲೂ ಇದ್ದೀರಾ ಎಂದು ಪರಿಚಯದ ನಗೆ ಬೀರಿ ಮುಂದೆ ಸಾಗಿದರು.

ಪುತ್ಥಳಿಯ ಅನಾವರಣವಾಯಿತು. ಇನ್ನು ಮುಖ್ಯ ಅತಿಥಿಗಳ ಭಾಷಣ. ಸಾರ್ವಜನಿಕ ಸ್ಥಳಗಳಲ್ಲಿ ಗಣ್ಯವ್ಯಕ್ತಿಗಳ ಪ್ರತಿಮೆ ಸ್ಥಾಪನೆ ಮಾಡುವುದರ ಬಗ್ಗೆ ಅನಂತಕುಮಾರ್ ತಮ್ಮ ಅಭಿಪ್ರಾಯ ಹಂಚಿಕೊಂಡರು. ಇವತ್ತು ಇಲ್ಲಿ ಸ್ಥಾಪಿಸಿರುವ ಹಾಗೆ ಅನೇಕ ಕಡೆ ಗಣ್ಯರ ಪ್ರತಿಮೆಗಳನ್ನು ಸ್ಥಾಪನೆ ಮಾಡುವುದನ್ನು

ಒಂದು ರೂಢಿ ಎನ್ನುವಷ್ಟರ ಮಟ್ಟಿಗೆ ಸಾಮಾನ್ಯವಾಗಿ ನೋಡುತ್ತಿದ್ದೇವೆ. ಪ್ರತಿಮೆ ಸ್ಥಾಪನೆಯಾಗಿ, ಬಾವುಟ ಹಾರಿಸಿ ಹಾರ ಹಾಕಿ ಗೌರವ ಸಲ್ಲಿಸಿದ ಮೇಲೆ ಮುಗಿಯಿತು. ಮತ್ತೆ ಅತ್ತ ತಿರುಗಿಯೂ ನೋಡದವರಿರುತ್ತಾರೆ, ಎಲ್ಲೋ ರಸ್ತೆ ಬದಿಯಲ್ಲಿ ಆ ಪುತ್ಥಳಿ ದೂಳು ತಿಂದುಕೊಂಡು ಬಿದ್ದಿರುವುದನ್ನು ಕಾಣುವಾಗ ಮನಸ್ಸಿಗೆ ನೋವಾಗುತ್ತದೆ. ಇಂಥ ಪ್ರತಿಮೆಗಳ ಸ್ಥಾಪನೆ ತಪ್ಪೆಂದು ನಾನು ಹೇಳುತ್ತಿಲ್ಲ. ಎಲ್ಲಿ ಆ ಪ್ರತಿಮೆಯನ್ನು ಸ್ಥಾಪಿಸಲಾಗುತ್ತದೆ, ದಿನನಿತ್ಯ ಎಷ್ಟು ಜನರ ಗಮನ ಸೆಳೆಯುವ ಹಾಗಿರುತ್ತದೆ, ಎಷ್ಟರಮಟ್ಟಿಗೆ ಆ ಪ್ರತಿಮೆಯನ್ನು ಜನ ಲಕ್ಷಿಸುತ್ತಾರೆ, ಎಲ್ಲವೂ ಮುಖ್ಯವಾಗುತ್ತದೆ. ಈ ಎಲ್ಲ ದೃಷ್ಟಿಯಿಂದ ಆದರ್ಶಪ್ರಾಯವಾದ ಒಂದು ನಿದರ್ಶನವನ್ನು ನಾನು ನಿಮಗೆ ಹೇಳಬೇಕು. ಇಂದು ಇಲ್ಲಿ ಸ್ಥಾಪನೆಯಾಗಿರುವಂತಹುದೇ ರಾಜಕುಮಾರರ ಪ್ರತಿಮೆಯೊಂದನ್ನು ಗಿರಿನಗರದ ವಿವೇಕಾನಂದ ಪಾರ್ಕಿನಲ್ಲಿ ಸ್ಥಾಪಿಸಲಾಗಿದೆ. ಎಷ್ಟು ಪ್ರಶಸ್ತವಾದ ಸ್ಥಳದಲ್ಲಿ ಅದನ್ನು ಸ್ಥಾಪಿಸಲಾಗಿದೆ, ಪುತ್ಥಳಿಯೋ ಜೀವಂತವಾಗಿ ಎದ್ದು ಬರುವ ಹಾಗಿದೆ, ಅದನ್ನು ನಿರ್ಮಿಸಿದವರು ಯಾವುದೇ ಸಂಘಸಂಸ್ಥೆಯಿಂದ ಹಣ ಸಹಾಯ ಪಡೆಯದೆ ತಾವೇ ನಾಲ್ಕಾರು ಸ್ನೇಹಿತರು ಉತ್ಸಾಹದಿಂದ ದುಡ್ಡು ಹಾಕಿ ಪ್ರೀತಿಯಿಂದ ಮಾಡಿಸಿದ್ದಾರೆ, ಶಾಶ್ವತವಾಗಿ ನೆನಪಿನಲ್ಲಿ ಉಳಿಯುವ ಕೆಲಸ ಎಂದರೆ ಇಂತಹುದೇ. ಅದನ್ನು ಮಾಡಿದವರು ಇಲ್ಲೇ ಬಂದಿದ್ದಾರೆ, ಅವರಿಗೆ ನಿಮ್ಮೆಲ್ಲರ ಒಂದು ಚಪ್ಪಾಳೆ ಬರಬೇಕು, ರೀ ರೈಟ್ ಸಹೋದರರೇ ಎಲ್ಲಿದ್ದೀರಿ ನಿಂತ್ಕೊಳ್ರೀ ಎಂದರು.

ಈ ಅನಿರೀಕ್ಷಿತ ಮನ್ನಣೆಗೆ ಬೆರಗು, ಸಂಕೋಚಗಳೊಡನೆ ಶ್ರೀನಿವಾಸ ಜನಾರ್ದನರು ಎದ್ದು ನಿಂತರು. ಅನಂತಕುಮಾರರೂ ಸೇರಿದಂತೆ ಇಡೀ ಸಭೆ ಕರತಾಡನಪೂರ್ವಕ ಅವರನ್ನು ಅಭಿನಂದಿಸಿತು.

ಪಕ್ಷದ ಕಾರ್ಯಕರ್ತರ ಬಗೆಗೆ ಅನಂತಕುಮಾರರಿಗೂ ತಮ್ಮ ಸಾಹೇಬರ ಬಗೆಗೆ ಕಾರ್ಯಕರ್ತರಿಗೂ ಇದ್ದ ಅವರ್ಣನೀಯ ಬಾಂಧವ್ಯಕ್ಕೆ ಒಂದೇ ನಿದರ್ಶನ ಹೇಳಿ ಮುಗಿಸಬಹುದು: ಶ್ರೀನಿವಾಸರ ತಮ್ಮ ಜನಾರ್ದನ ತನ್ನ ಮಗನಿಗೆ ನಾಮಕರಣ ಮಾಡುವಾಗ ಹೊಳೆದ ಒಂದೇ ಹೆಸರು ಅನಂತಕುಮಾರ!

## ನಿಮ್ಮ ಪತ್ರಗಳು

ಮಾನ್ಯರೇ, ಅನಂತಕುಮಾರರ ಬಹುಮುಖ ಪ್ರತಿಭೆಯನ್ನು ಜನಸಾಮಾನ್ಯರಿಗೂ ತಿಳಿಯುವ ರೀತಿಯಲ್ಲಿ ಅನಂತಕುಮಾರ್ ಪ್ರತಿಷ್ಠಾನವು ಪ್ರಕಾಶನ ಮಾಧ್ಯಮದ ಮೂಲಕ ನಡೆಸುತ್ತಿರುವುದು ಶ್ಲಾಘನೀಯ.

ತಮ್ಮ ತಾಯಿ ಗಿರಿಜಾ ಶಾಸ್ತ್ರಿಯವರ ಕಾರ್ಯತತ್ಪರತೆ, ಸಾಮಾಜಿಕ ಕಳಕಳಿ, ತಾನು ಬದುಕಿ ಮತ್ತೊಬ್ಬರಿಗೂ ಕೈಹಿಡಿದು ಮುನ್ನಡೆಯಲು ಸಹಕರಿಸುತ್ತಿದ್ದ ಕಾರ್ಯವೈಖರಿಯನ್ನು ಅನಂತಕುಮಾರ್ ಅವರು ಪಾಲಿಸಿಕೊಂಡು ತಮ್ಮ ಜೀವನಪರ್ಯಂತ ಕಾರ್ಯನಿರತರಾಗಿದ್ದು ವಿಶೇಷವೇ ಸರಿ.

ಅವರು ಚಿಕ್ಕ ವಯಸ್ಸಿನಿಂದಲೂ ಒಳ್ಳೆಯ ನಾಯಕತ್ವವನ್ನು ಬೆಳೆಸಿಕೊಂಡು ಸಾಮಾನ್ಯರಿಗೆ ಸಾಧ್ಯವಾಗದ ಮಟ್ಟಕ್ಕೆ ರಾಜಕೀಯದಲ್ಲಿ ಏರಲು ಅನುವು ಮಾಡಿದ್ದು ಅವರ ನಿರಂತರ ಅಧ್ಯಯನ ಹಾಗೂ ಸೂಕ್ಷ್ಮಗ್ರಾಹಿತ್ವ. ಅವರಿಗಿದ್ದ ವರವಾದ ಸಂವೇದನಾಶೀಲತೆಯೊಂದಿಗೆ ಪ್ರತಿ ವಿಷಯವನ್ನೂ ಕೂಲಂಕುಶವಾಗಿ ಅಧ್ಯಯನ ಮಾಡುತ್ತಿದ್ದರು. ಇದರಿಂದ ಅವರು ರಾಜಕೀಯದಲ್ಲಿ ಎಷ್ಟು ಮಟ್ಟಕ್ಕೆ ಏರಿದರೂ ತಮ್ಮ ಸಹಚರ, ಪ್ರಜೆಗಳೊಡನೆ ಸಮರ್ಪಕವಾಗಿ ನಡೆದುಕೊಂಡ ರೀತಿಯಿಂದ ಅವರಿಗೆ ಶ್ರೇಯಸ್ಸು ಲಭಿಸಿತು.

ಅವರು ಸ್ಥಿತಪ್ರಜ್ಞತೆ ಮತ್ತು ಕ್ರಿಯಾಶೀಲತೆಗೆ ಭಗವದ್ಗೀತೆಯಿಂದ ಪ್ರತಿದಿನ 10 ಶ್ಲೋಕಗಳಷ್ಟಾದರೂ ಪಾರಾಯಣ ಮಾಡುತ್ತಿದ್ದುದು ಅವರ ತಾಯಿಯವರ ಆಜ್ಞೆಗೆ ಅವರು ಕೊಟ್ಟ ಮನ್ನಣೆ.

'ಅನಂತ ಪಥ'ದ ಮೂಲಕ ಅನಂತಕುಮಾರ್ ಅವರು ನಡೆದು ಬಂದ ದಾರಿಯ ಮೇಲೆ ನಮಗಾಗಿ ಈ ಎಲ್ಲ ಬರಹಗಾರರು ಬೆಳಕು ಚೆಲ್ಲಿದ್ದಾರೆ. ಆ ಪಥದಲ್ಲಿ ನಾವು ನಡೆದರೆ ಸ್ವಂತಕ್ಕೂ, ದೇಶಕ್ಕೂ ಹಿತ ಎನ್ನುವುದರಲ್ಲಿ ಸಂದೇಹವಿಲ್ಲ. ಈ ಪತ್ರಿಕೆಯು ಯುವ ಪೀಳಿಗೆಗೆ, ಎಲ್ಲಾ ವಯಸ್ಸಿನ ಕರ್ಮಯೋಗಿಗಳಿಗೆ ಬಹಳ ಉಪಯುಕ್ತ ಎನ್ನುವುದು ಶತಃಸಿದ್ಧ.

ಇಂತಹ ಮಹಾನುಭಾವರ ಹೆಸರಿನಲ್ಲಿ ಅದಮ್ಯ ಚೇತನದಿಂದ ಅನ್ನಾಕಾಂಕ್ಷಿಗಳಿಗೆ ಡಾ.ತೇಜಸ್ವಿನಿ ಅವರ ನೇತೃತ್ವದಲ್ಲಿ ಅನ್ನದಾನ ನಡೆಯುತ್ತಿರುವುದು ಶ್ಲಾಘನೀಯ, ಹಾಗೂ ಅಗಲಿದ ಚೇತನಕ್ಕೆ ಇದರಿಂದ ತೃಪ್ತಿಯೂ, ನಮ್ಮೆಲ್ಲರಿಗೂ ಇದರಿಂದ ಕೃತಕೃತ್ಯತೆಯೂ ಸಿಕ್ಕಿದಂತಾಗುತ್ತದೆ.

**ಎಂ.ಆರ್. ಅರುಣಕುಮಾರ್**
ಜಯನಗರ ೬ನೇ ಬ್ಲಾಕ್, ಬೆಂಗಳೂರು

ಮಾನ್ಯರೇ, ಅನಂತಪಥದ ಕಳೆದ ಸಂಚಿಕೆಯಲ್ಲಿ ಶ್ರೀಯುತ ನರಹರಿ ಫಡಕೆಯವರ ಸೆರೆಮನೆಯ ಸಹವಾಸ, ಶ್ರೀ ಟಿ.ಎಸ್. ಗೋಪಾಲ್ ರ ನಿರೂಪಣೆಯಲ್ಲಿ ವಾಸ್ತವತೆಯ ಪ್ರತೀಕವಾಗಿ ಮೂಡಿಬಂದಿದೆ. ತುರ್ತು ಪರಿಸ್ಥಿತಿಯ ಸಮಯದಲ್ಲಿ ಬಹುತೇಕ ಕಾರ್ಯ ಕರ್ತರಲ್ಲಿ ಅದರಲ್ಲೂ ಯುವಕರಲ್ಲಿ ಆ ದಿನಗಳ ಭಯದ ವಾತಾವರಣ ಸಹಜವಂತೂ ಸರಿಯೇ. ಫಡಕೆಯವರು ಸಹವರ್ತಿಗಳೊಂದಿಗೆ ಅನುಭವಿಸಿದ ಪಾಡು, ಸೆರೆಮನೆಗೆ ಸೇರಲು ತುರ್ತು ಪರಿಸ್ಥಿತಿಯ ವಿರುದ್ಧದ ಘೋಷಣೆ ಕೂಗಿ ಸಾಗಿದ ಅನುಭವ ಕಣ್ಣಿಗೆ ಕಟ್ಟುವಂತೆ ಬಿಂಬಿತವಾಗಿದೆ. ಜೈಲಿನಲ್ಲಿ ಸ್ನಾನ ಮಾಡಿದ ವೈಖರಿ, ದೇಶಭಕ್ತಿ ಗೀತಗಾಯನ, ಇವುಗಳು ರೋಚಕ. ಇನ್ನು ದಿ.ಅನಂತ್ ಕುಮಾರ್ ರವರಿಂದ ನ್ಯಾಯಾಲಯದಲ್ಲಿ ಸರ್ಕಾರದ ವಿರುದ್ಧ ಮೊದಲ ಘೋಷಣೆ ತದನಂತರದ ಆಗುಹೋಗುಗಳು ಮೈನವಿರೇಳಿಸುವುದು. ಅಂದಿನ ದಿನಗಳಲ್ಲಿ, ನ್ಯಾಯಮೂರ್ತಿಗಳ ಸಮ್ಮುಖದಲ್ಲಿ ಆ ವಕೀಲರುಗಳ ವಾದಮಂಡನೆ ಎಲ್ಲವೂ ಅಂದಿನ ಕಾರ್ಯ ವೈಖರಿಯ ನೈಜ ಚಿತ್ರಣದ ದ್ಯೋತಕವಾಗಿದೆ.

**ನೆ.ಲ.ರಾಮಮೂರ್ತಿ**
ವಿಜಯನಗರ, ಬೆಂಗಳೂರು

ಮಾನ್ಯರೆ, ಅನಂತಪಥ ಪತ್ರಿಕೆಯಲ್ಲಿ ನಮ್ಮೆಲ್ಲರ ಅಚ್ಚುಮೆಚ್ಚಿನ ನಾಯಕರಾಗಿದ್ದ ಅನಂತ ಕುಮಾರ್ ಸರ್ ಅವರ ದ್ವಿತೀಯ ಪುಣ್ಯ ಸ್ಮರಣೆ ಆಚರಣೆ ಕುರಿತ ವರದಿ ಬಹಳ ಚೆನ್ನಾಗಿ ಮೂಡಿ ಬಂದಿದೆ. ಶ್ರೀಯುತ ಹೆಚ್.ಎಸ್. ವೆಂಕಟೇಶ ಮೂರ್ತಿ ಅವರು ಅನಂತ ಪಥ ಪತ್ರಿಕೆ ಬಿಡುಗಡೆ ಸಂದರ್ಭದಲ್ಲಿ ಹೇಳಿದಂತೆ ಅನಂತ ಕುಮಾರ್ ಪ್ರತಿಷ್ಠಾನ ದ ಗರಡಿ ಮನೆ ಯಲ್ಲಿ ಅನಂತ್ ಕುಮಾರ್ ಅವರಂತೆ ಆದರ್ಶ ನಾಯಕರ ತಯಾರಿ ಆಗಬೇಕು ಎಂಬ ಮಾತು ಅತ್ಯಂತ ಸಮಂಜಸ ಎನಿಸುತ್ತದೆ. ಅವರು ರಾಷ್ಟ್ರೀಯ ಮಟ್ಟದಲ್ಲಿ ನಮ್ಮ ನಾಡಿಗೆ ಹೆಮ್ಮೆ ತಂದುಕೊಟ್ಟ ಮಹನೀಯರು. ಈ ಮಟ್ಟದಲ್ಲಿ ನಮ್ಮ ನಾಡನ್ನು, ದೇಶವನ್ನು ಎಲ್ಲಾ ಕ್ಷೇತ್ರಗಳಲ್ಲಿ ಮುಂದೆ ತೆಗೆದುಕೊಂಡು ಹೋಗುವ ಸಮರ್ಥ ನಾಯಕರನ್ನು ರೂಪಿಸುವುದು ಪ್ರತಿಷ್ಠಾನದ ಮುಖ್ಯ ಉದ್ದೇಶ ಆಗಬೇಕು. ಎಲ್ಲರ ಆಶಯವೂ ಪ್ರತಿಷ್ಠಾನದ ಹಿರಿಯರಿಂದ ಕಾರ್ಯಸಾಧ್ಯವಾಗುವ ನಂಬಿಕೆಯೂ ನಮ್ಮಲ್ಲಿ ಇದೆ. ಭಗವದ್ಗೀತೆ ನಿಜಾರ್ಥದಲ್ಲಿ ತಿಳಿದು ಜೀವಿಸಿದ ಅನಂತ ಕುಮಾರ ಅವರ ಮೆಚ್ಚಿನ ಗೀತೆಯನ್ನು ಹೇಳುವ ಅಭ್ಯಾಸ ನಾವೂ ಮಾಡಿಕೊಳ್ಳೋಣ.
ಆದರ್ಶ ವ್ಯಕ್ತಿ ಅನಂತ ಕುಮಾರ್ ಅವರ ನೆಚ್ಚಿನ ಸಹೋದರ ಶ್ರೀ ನಂದಕುಮಾರ್ ಅವರು ತಮ್ಮ ತಾಯಿಯ ಬಗೆಗೆ ಹೇಳಿರುವ ಹೆಮ್ಮೆಯ ಮಾತುಗಳು ತುಂಬಾ ಇಷ್ಟ ಆಯಿತು. ಅನಂತ ಕುಮಾರ್ ಅವರ ಸವಿ ನೆನಪಿನಲ್ಲಿ ಪ್ರಾರಂಭಿಸಿರುವ ನಿತ್ಯ ಅನ್ನದಾನ ಸೇವೆ ಅಮೋಘವಾದ ಒಂದು ಸೇವೆ. ಅದಮ್ಯ ಚೇತನ ಸಂಸ್ಥೆ ಕಿರೀಟದಲ್ಲಿ ಮತ್ತೊಂದು ರತ್ನದ ಸೇರ್ಪಡೆ. ಹಾಗೆಯೇ , ಅನಂತ ಸ್ಮೃತಿ ನಡಿಗೆ ಅದ್ಭುತವಾದ ಕಾರ್ಯಕ್ರಮ. ಅನಂತ ಕುಮಾರ್ ಅವರ ಅನೇಕ ಅಭಿಮಾನಿಗಳು ವಿಶಿಷ್ಟ ಪಂಜಿನ ಮೆರವಣಿಗೆ ಯಲ್ಲಿ ಭಾಗವಹಿಸಿ ಅಗಲಿದ ತಮ್ಮ ನಾಯಕನಿಗೆ ಶ್ರದ್ಧಾಂಜಲಿ ಸಲ್ಲಿಸಿದ್ದು ವಿಶೇಷ ಅನುಭವ. ಇಂತಹ ಕಾರ್ಯಕ್ರಮಗಳನ್ನು ಕೈಗೊಂಡು ತಮ್ಮ ಪತಿಯ ಪಥದಲ್ಲಿ ಸಾಗುತ್ತಿರುವ ನಮ್ಮ ನೆಚ್ಚಿನ ನಾಯಕಿ ಡಾ. ತೇಜಸ್ವಿನಿ ಅನಂತಕುಮಾರ್ ಅವರಿಗೆ ನಮ್ಮ ನಮನಗಳು. ನಿಮ್ಮ ಎಲ್ಲಾ ಕೆಲಸಗಳಲ್ಲಿ ನಿಮ್ಮೊಂದಿಗೆ ಸದಾ ನಾವು ಇದ್ದೇವೆ ಎಂದು ಹೇಳಲು ಹೆಮ್ಮೆ ಎನಿಸುತ್ತದೆ.

**ಶ್ರೀಮತಿ ಗೀತಾ ಗಣೇಶ್**
ಬಸವನ ಗುಡಿ, ಬೆಂಗಳೂರು

ಮಾನ್ಯರೆ, ಅನಂತಪಥ ಮಾಸಪತ್ರಿಕೆಯು ಬಹಳ ಸುಂದರವಾಗಿ ಮೂಡಿ ಬರುತ್ತಿದೆ. ಪತ್ರಿಕೆಯಲ್ಲಿ ಶ್ರೀಯುತ ಅನಂತಕುಮಾರ್ ಅವರ ಬಗ್ಗೆ ಹಲವಾರು ವಿಷಯಗಳನ್ನು-ಅವರ ಬಾಲ್ಯ, ವಿದ್ಯಾರ್ಥಿಯಾಗಿ, ದೇಶಪ್ರೇಮಿಯಾಗಿ, ಸೋದರನಾಗಿ ಅವರ ವ್ಯಕ್ತಿತ್ವವನ್ನು ಆಳವಾಗಿ ತಿಳಿಯದವರಿಗೆ ಪರಿಚಯಿಸುವ ಕಾರ್ಯ ಹಲವಾರು ಮಹನೀಯರ ಮೂಲಕ ನಡೆಯುತ್ತಿದೆ. ಉಪರಾಷ್ಟ್ರಪತಿ ಶ್ರೀ ವೆಂಕಯ್ಯನಾಯ್ಡುರವರು ನೆನಪಿಸಿಕೊಂಡಿರುವಂತೆ, 'ಅವರೊಬ್ಬ ಚಟುವಟಿಕೆಯ ವ್ಯಕ್ತಿ, ಅಸಾಧಾರಣ ಬುದ್ಧಿವಂತ, ಅತ್ಯಂತ ಶ್ರಮಜೀವಿ ಮಾತ್ರವಲ್ಲದೆ, ತಾವು ನಂಬಿದ ಧ್ಯೇಯ ಮತ್ತು ಉದ್ದೇಶಗಳಿಗೆ ಯಾವಾಗಲೂ ಸಮರ್ಪಿಸಿಕೊಂಡಂತಹ ವ್ಯಕ್ತಿ. ಎಲ್ಲದಕ್ಕಿಂತ ಮಿಗಿಲಾಗಿ ಅವರೊಬ್ಬ ಮಹಾನ್ ಮಾನವಜೀವಿ, ಮಾನವತಾವಾದಿಯೂ ಆಗಿದ್ದರು ಎಂಬುದು ನಿರ್ವಿವಾದ'. ಇದೇರೀತಿ ರಾಷ್ಟದ ಹಲವಾರು ಗಣ್ಯವ್ಯಕ್ತಿಗಳು ಅವರ ಬಗ್ಗೆ ಸಾಕಷ್ಟು ಹೇಳಿದ್ದಾರೆ. ಡಾ.ತೇಜಸ್ವಿನಿ ಅನಂತಕುಮಾರ್ ಅವರು, ಅನಂತಕುಮಾರ್ ಹಾಕಿಕೊಟ್ಟ ಪಥದಲ್ಲಿ ಅದಮ್ಯಚೇತನದ ಮೂಲಕ ಸಮಾಜಮುಖಿ ಕಾರ್ಯಕ್ರಮಗಳನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ನಾವೆಲ್ಲರೂ ಶ್ರೀಮತಿ ತೇಜಸ್ವಿನಿ ಅವರೊಂದಿಗೆ ಕೈ ಜೋಡಿಸೋಣ. ಅನಂತಕುಮಾರ್ ಪ್ರತಿಷ್ಠಾನದಿಂದ ಅನಂತ್ಕುಮಾರ್ ಅವರ ಉದ್ದೇಶಗಳನ್ನು ನೆರವೇರಿಸುವ ಜವಾಬ್ದಾರಿಯುತ ಯುವಜನತೆ ಮುಂದಾಗಿ ಬರಲಿ ಎಂದು ಆಶಿಸೋಣ. ಪತ್ರಿಕೆ ನಿರಂತರವಾಗಿ ಮೂಡಿಬರಲಿ ಎಂದು ಹಾರೈಸುತ್ತೇವೆ.

**ಎಂ.ಬಸವರಾಜು**
ಇಸ್ರೋಬಡಾವಣೆ, ಬೆಂಗಳೂರು

ಮಾನ್ಯರೇ, , ಅನೇಕ ಮಹಾನ್ ಚೇತನಗಳಲ್ಲಿ, ಅನಂತ-ತೇಜಸ್ವಿ ಚೇತನವೆನಿಸಿ, ರಾಜಕೀಯ-ಕೇಸರಿನ ಮಧ್ಯೆ ಅಚ್ಚ ಹಸಿರಿನ ಪ್ರಕೃತಿಯ ಮಡಿಲಿನ ಕನಸು ಕಂಡ ಹಸಿರು ಸತ್ಯಾಗ್ರಹದ ರೂವಾರಿ ಶ್ರೀ ಅನಂತಕುಮಾರರ ಬಗ್ಗೆ ಬರೆಯುವುದಕ್ಕೆ ನನಗೆ ತುಂಬ ಸಂತೋಷವೆನಿಸುತ್ತದೆ. ಖಂಡಿತವಾಗಿ ಅವರು ನಮ್ಮ ಚಟುವಟಿಕೆಗಳಿಗೆ, ಚೈತನ್ಯ ತುಂಬಿ, ಶಕ್ತಿ-ಸಾಮರ್ಥ್ಯಗಳಿಗೆ ಪ್ರೋತ್ಸಾಹ ಇಹ-ಪರಗಳಲ್ಲಿ ತುಂಬುವಂತಹ ಹಿರಿಯ ಚೇತನ !!!

ತಂತ್ರಜ್ಞಾನ(ಟೆಕ್ನಾಲಜಿ) ಸಹಾಯದಿಂದ, ಶ್ರೀ. ನರೇಂದ್ರಮೋದಿಯವರ ಸ್ಟಾರ್ಟಪ್-ಇಂಡಿಯಾ ದಿಂದ ಪ್ರೇರೇಪಿತಗೊಂಡು "ಸ್ಟಾರ್ಟಪ್-ಸನಾತನ" ಮೂಲಕ ಸನಾತನ ಸಂಸ್ಕೃತಿಯನ್ನು ಲಕ್ಷಾಂತರ ಮಂದಿ ಹಾಗೂ ಮನೆಗಳಿಗೆ ಅವರವರು ಕೇಳಿದ್ದನ್ನು ತಲುಪಿಸಲು ಹಂಬಲಿಸುತ್ತಿರುವ ನಮಗೆ, ಸಕಾರಣಿಕ ಬಯಕೆ.

ಅನ್ಯ ರಾಜಕೀಯ ವ್ಯಕ್ತಿಗಳಿಗಿಂತ ಭಿನ್ನವಾಗಿ, ಪ್ರತಿಭೆ, ಸರಳತೆ, ಸ್ನೇಹಪರತೆಗೆ ಹೆಸರಾಗಿದ್ದ, ಕನ್ನಡ, (ಮುಲಕನಾಡು-ತೆಲುಗು), ಸಾಹಿತ್ಯ, ಕಲೆ, ಸಂಗೀತ, ಸಂಸ್ಕೃತಿಗಳಿಗೆ ತಮ್ಮದೇ ಆದ ರೀತಿಯಲ್ಲಿ ಪೋಷಕರು ಆಗಿದ್ದ ಶ್ರೀ ಅನಂತಕುಮಾರರ ಬಗ್ಗೆ ಹಾಗೂ ಅನಂತಪಥದ ಬಗ್ಗೆ ಬರೆಯುವುದೇ ಒಂದು (ಸ್ವಾ)ಅನುಭವ.

ಕಾಡುಮಲ್ಲೇಶ್ವರ ದೇವಸ್ಥಾನದ ಆಸುಪಾಸಿನಲ್ಲಿ ಹುಟ್ಟಿ-ಬೆಳದು, ಈಗಿನ ಕರ್ನಾಟಕ ಬಿಜೆಪಿ ಪಕ್ಷದ ಕಚೇರಿ (ಜಗನ್ನಾಥ ಭವನ) ಹತ್ತಿರವೇ ನಡೆಯುತ್ತಿದ್ದ ಸಂಘದ "ಮಹದೇವ ಶಾಖಾ" ಸ್ವಯಂಸೇವಕನಾದ ನನಗೆ ಪ್ರಚಾರದವೇಳೆ, ಮನೆ-ಮನೆ ಸಂಪರ್ಕ....ಇನ್ನೂ ಹಲವು ಸಮುದಾಯದ ಸಮಾರಂಭ/ಕಾರ್ಯಕ್ರಮ ಸಂದರ್ಭಗಳಲ್ಲಿ ಅನಂತಕುಮಾರರೊಡನೆ ಆದ ಒಡನಾಟ ಅನನ್ಯ. ಇತ್ತೀಚಿನ ದಿನಗಳಲ್ಲಿ, ಅದಮ್ಯಚೇತನ ಸ್ವಯಂಸೇವಕನಾಗಿ ಅದರಲ್ಲೂ "ಸ್ಟಾರ್ಟಪ್-ಸನಾತನ"ವನ್ನು ಪ್ರಾರಂಭಿಸಿದಮೇಲೆ ಆದ ಅನುಭವಗಳು ಇನ್ನೂ ವಿಶೇಷ. ಕೆಲವು ಹಸಿರು-ಭಾನುವಾರ ಮತ್ತು ಅನೇಕ ಅದಮ್ಯಚೇತನದ ಕಾರ್ಯಕ್ರಮಗಳಲ್ಲಿ ( ಒಮ್ಮೆ ಸವಿಸ್ತಾರವಾದ ಪರಿಚಯಮಾಡಲು ಮೊದಲುಮಾಡಿದಾಗ, ನಿಮ್ಮನ್ನು ನಲವತ್ತು ಕಡೆ ನೋಡಿದ್ದೇನೆ ಅಂದರು) ಹತ್ತಿರದ ನಿಕಟ ಪರಿಚಯ. ಒಂದು ಹಸಿರು-ಭಾನುವಾರದ ಕಾರ್ಯಕ್ರಮದಲ್ಲಿ ಒಂದು ಚಿಕ್ಕ ಸಂಸ್ಕೃತ ಶ್ಲೋಕವನ್ನು ಉಚ್ಚಕಂಠದಲ್ಲಿ ಹೇಳಿದರೆ, ಈ ಶ್ಲೋಕವನ್ನು ಕನ್ನಡಕ್ಕೆ ತರ್ಜುಮೆ ಮಾಡಿ ನನಗೆ ತೋರಿಸಿ ಎಂದು ಗುರುತರವಾಗಿ ಹೇಳಿದರು. ಅದರ ಬಗ್ಗೆ ಕಾರ್ಯೋನ್ಮುಖನಾಗಿ ಪೂರ್ಣಮಾಡುವುದರಲ್ಲಿ ಆ ಚೇತನವೇ ಕಾಲನ ಮುಂದೆ ಇಲ್ಲದಾಯಿತು... :-(

ನನ್ನ ಕಟ್ಟಕಡೆಯ ವಿಶಿಷ್ಟ ಅನುಭವ ಅಂದರೆ, ಬಸವನಗುಡಿಯ "ಸುಮೇರು" ಮನೆಯಲ್ಲಿ ರಾಖಿ-ಕಟ್ಟುವ ಸಂದರ್ಭದಲ್ಲಿ ಹಣ್ಣು-ಹಂಪಲುಗಳ ಜೊತೆಗೆ ಕೆಲವು ಸಂಸ್ಕೃತದ ಪುಸ್ತಕಗಳನ್ನು ಕೊಡುವ ಸಂದರ್ಭದಲ್ಲಿ; "ಹೇಗಿದ್ದೀರಾ "ಸ್ಟಾರ್ಟಪ್-ಸನಾತನ" ಎಂದೇ ಸಂಬೋಧಿಸಿದರು. ಅದೇ ಸಮಯದಲ್ಲಿ ಅವರ ಒಂದು ಮನೋಗತವನ್ನೂ ಎಲ್ಲರೆದುರಿಗೆ ನನ್ನಬಳಿ ತೋಡಿಕೊಂಡರು. ಆ ಸಂದರ್ಭದ ಛಾಯಾಚಿತ್ರವೇ ನಮಗೆ ನೆನಪಿನ ಕುರುಹಾಗಿ ಉಳಿದಿದೆ...

ವ್ಯಕ್ತಿಗಿಂತ "ವ್ಯಕ್ತಿತ್ವ" ದೊಡ್ಡದು ಎಂಬ ಉಕ್ತಿಯಂತೆ; ವ್ಯಕ್ತಿತ್ವದ ಬಗೆಗಿನ "ಅನಂತಪಥ" ಇಂದಿನವರೆಗೂ ಬಂದಿರು ಎಲ್ಲಾ ಸಂಚಿಕೆಗಳು ಒಂದಕ್ಕಿಂತಾ-ಒಂದು ಸಂಚಿಕೆ, ವಿಭಿನ್ನವಾಗಿ ಮೂಡಿಬಂದಿದೆ. ಒಂದೆರಡು ವಾರಗಳ ಹಿಂದಿನ "ಶ್ರೀಚೇತನ" ಸಭೆಯಲ್ಲಿ ಹಲವು ಪುಟಗಳನ್ನು ಓದುವ ಸರದಿಯ ಅವಕಾಶವೂ ಸಿಕ್ಕಿತ್ತು. ಸ್ಟಾರ್ಟಪ್ ಸನಾತನ (ಸಮ್ಯಕ್-ದರ್ಶನ ಟೆಕ್ನಾಲೊಜೀಸ್) ವತಿಯಿಂದ ಅನಂತಪಥ ಕನ್ನಡ ಪತ್ರಿಕೆಯ ಪೋಷಕ ಚಂದಾದಾರರಾಗಿರುವುದೂ ಒಂದು ಹೆಮ್ಮೆಯ ಸಂಗತಿ.

ನಮ್ಮ ಸನಾತನ ಸಂಸ್ಕೃತಿ,ಸಂಪ್ರದಾಯ, ಪರಂಪರೆಗಳ ಅಳಿವು-ಉಳಿವಿನ ಸಂರಕ್ಷಣೆ ಮತ್ತು ಪ್ರಚಾರ ಮಾಡುವ ಹಂಬಲವಿರುವ ನಮಗೆ ಅನಂತಕುಮಾರರ ಪರೋಕ್ಷ ಬೆಂಬಲದೊಡನೆ ಅನಂತಕುಮಾರ್-ಪ್ರತಿಷ್ಠಾನದಿಂದ ಪ್ರತ್ಯಕ್ಷವಾಗಿ ಪ್ರತಿಯೊಂದು ಹಂತದಲ್ಲಿಯೂ ಮಾರ್ಗದರ್ಶಿಯಾಗಿ, ಬೆಂಬಲ ಮತ್ತು ಸಹಾಯವಾಗಿರಲಿ ಎಂದು ಆಶಿಸುತ್ತೇವೆ.

**ವೆಂಕಟ್ ಕೆ ಎಲ್**
ಬೆಂಗಳೂರು
Venkat KL <venkat.kl@startupsanatana.com>

ಮಾನ್ಯರೆ,, ಪ್ರತಿಸಲದಂತೆಯೇ ಈ ಬಾರಿಯೂ ಅನಂತಪಥ ಪತ್ರಿಕೆಯ ಲೇಖನಗಳು ಆಪ್ತವಾಗಿವೆ. ಸುಷ್ಮಾಸ್ವರಾಜ್, ನರಹರಿ ಫಡಕೆ ಅವರ ಲೇಖನಗಳು ತುಂಬಾ ಆತ್ಮೀಯವಾಗಿದ್ದು ಹೃದಯಕ್ಕೆ ಹತ್ತಿರವಾಗುವಂತೆ ಇವೆ. ಕೊನೆಯಲ್ಲಿ ಪದ್ಮಾ ಸುಬ್ರಮಣ್ಯಂ ಬರೆದಿರುವ ಕವಿತೆ ಆಸಕ್ತಿ ಮೂಡಿಸುವಂತಿದೆ. ಪತ್ರಿಕೆಯ ಪ್ರಿಂಟ್-ಲೇಔಟ್ ತುಂಬಾ ಚೆನ್ನಾಗಿದೆ; ಓದುಗರಿಗೆ ಬಹಳ ಇಷ್ಟವಾಗುವಂತೆ ಅನಂತಪಥ ಸಿದ್ಧವಾಗುತ್ತಿದೆ. ಸಂಪಾದಕವರ್ಗದ ಎಲ್ಲರಿಗೂ ಅಭಿನಂದನೆಗಳು.

**ಜಯಶ್ರೀ ಪ್ರಸಾದ್**
ಮಲ್ಲೇಶ್ವರಂ, ಬೆಂಗಳೂರು

ಮಾನ್ಯರೆ, ಎಲ್ಲ ಲೇಖನಗಳನ್ನೂ ನಿಧಾನವಾಗಿ ಓದಿದೆ. ಅನ್ನದಾನದ ಯೋಜನೆಗೆ ನಮನಗಳು. ಹಸಿದ ಹೊಟ್ಟೆ ತುಂಬಿದರೆ ಒಳಗಿರುವ ಚೈತನ್ಯ ಹಲವು ರೂಪಗಳಲ್ಲಿ ಹೊರಹೊಮ್ಮುತ್ತದೆ. ಹೆಚ್.ಎಸ್.ವಿ.ಯವರ ಮಾತಿನಂತೆ ಅದರ್ಶ ಯೋಜನೆಗಳನ್ನು ಪ್ರತಿಷ್ಠಾನ ಹಮ್ಮಿಕೊಳ್ಳುತ್ತಿರುವುದು ಈ ಪತ್ರಿಕೆಯ ಮೂಲಕ ತಿಳಿಯುತ್ತಿದೆ. ಅನಂತಕುಮಾರರ ಬಗ್ಗೆ ಸುಷ್ಮಾರವರ ನೆನಪು ಕಣ್ಣಲ್ಲಿ ನೀರು ತರಿಸಿತು. ನಿದ್ರೆಗೆ ಜಾರುವುದು...ಎಂತಹ ಶಕ್ತಿಶಾಲಿ ರೂಪಕ! ಉಳಿದಂತೆ ಪರಿಸರ ಕಾಳಜಿ, ಮನೋವಿಕಾಸ, ಕವನ, ನರಹರಿ ಫಡಕೆಯವರ ಲೇಖನ, ಹೀಗೆ ವಿಶೇಷವಾಗಿ ಮಾಹಿತಿ ನೀಡುವ ಮೂಲಕ ಪತ್ರಿಕೆ ಅನಂತಪಥ...ಸಾರ್ಥಕ ವಾಗಿದೆ. ಧನ್ಯವಾದಗಳು. ನಮನಗಳು.

**ಹೆಚ್. ಕೆ. ಸುಬ್ಬಲಕ್ಷ್ಮಿ**
ಕೋಲಾರ

## ಅದಮ್ಯ ಚೇತನ
### "ನಿತ್ಯ ಅನ್ನದಾನ" ಯೋಜನೆ


ಆತ್ಮೀಯರೇ , ಅದಮ್ಯ ಚೇತನದ ಅನ್ನ-ಅಕ್ಷರ- ಆರೋಗ್ಯ- ಘೋಷವಾಕ್ಯಕ್ಕೆ ಅನುಗುಣವಾಗಿ , ಸಂಸ್ಥೆಯ ಪ್ರಧಾನ ಪೋಷಕರಾದ ಶ್ರೀಯುತ ಅನಂತ್ ಕುಮಾರ್ ಅವರ ನೆನಪಿನಲ್ಲಿ ಇದೀಗ ಪ್ರತಿ ದಿನ ಮಧ್ಯಾಹ್ನ " ನಿತ್ಯ ಅನ್ನದಾನ " ಕಾರ್ಯಕ್ರಮವನ್ನು ಪ್ರಾರಂಭಿಸಿದ್ದೇವೆ.
ನಿಮಗೆ ಗೊತ್ತಿರುವ ಜನರಲ್ಲಿ ಊಟದ ಅವಶ್ಯಕತೆ ಇರುವವರಿಗೆ ಈ ವಿಷಯವನ್ನು ತಿಳಿಸುವುದರ ಮೂಲಕ ಈ ಉದಾರಯೋಜನೆಗೆ ಪ್ರಚಾರ ನೀಡಬೇಕಾಗಿ ವಿನಂತಿ. ಅಲ್ಲದೆ ಸ್ವಯಂಸೇವಕರಾಗಿಯೂ ನಮ್ಮೊಡನೆ ಸಹಭಾಗಿಗಳಾಗಬಹುದು.
ಪ್ರತಿ ದಿನ 100 ಕ್ಕಿಂತಲೂ ಹೆಚ್ಚು ಜನರು ಈ ಸೌಲಭ್ಯವನ್ನು ಬಳಸಿಕೊಂಡು ಊಟಮಾಡುತ್ತಿದ್ದು, ತಾವು ಈ ಮಹತ್ತರ ಯೋಜನೆಗೆ ಪ್ರಾಯೋಜಕರಾಗುವ ಮೂಲಕವೂ ನಮ್ಮೊಂದಿಗೆ ಕೈಜೋಡಿಸಬೇಕಾಗಿ ವಿನಂತಿ. ಪ್ರತಿ ಒಂದು ದಿನದ ಊಟದ ಖರ್ಚು - 2500 ರೂ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 9590469830
Phone pay Upi I'd- 7892098948@ybl
https://www.adamyachetana.org/donation/

ಅನಂತಪಥ
Editor: Gopal T.S | Layout: Abhishek Gubbi Creatives
Sketches: Raghupathi Sringeri | Inputs: Poornaprajna | Purushothama Bilimale | Prasanth Natu | Lakshman Oak | Sreelakshmi Vishwanath | Y B Ramakrishna
Photographs: Ananth Kumar Pratishtana & other sources | Printed at: Rashtrothana Mudranalaya, Chamrajpet, Bengaluru-
Published by: Dr. Tejaswini AnanthKumar
For – AnanthKumar Pratishthana # 12, Sumeru,M N Krishna Rao Road, Basavanagudi, Bangalore – 04
Ph: 080 26568484 | Email: ananth.path@akp.org.in
**ಸ್ಪಷ್ಟನೆ:** ಅನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು;
ಈ ಪಠ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.
**ಸೂಚನೆ:** ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು. ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ.
To get a e-version of this periodical SMS your name and place to 8884182415

# ಅಟಲ್ ಜೀ ಮತ್ತು ಅನಂತಕುಮಾರ್ : ಕೆಲವು ನೆನಪುಗಳು

ತೇಜಸ್ವಿನಿ ಅನಂತಕುಮಾರ್



ಪುಟ 1 ರಿಂದ

ದಿನಗಳ ಕಾಲ ಹಗಲಿರುಳೂ ಶ್ರಮಪಟ್ಟರು. ಅದೇ ಮೊದಲ ಬಾರಿ ಎಮ್.ಪಿ.ಯಾಗಿದ್ದರೂ ಅನಂತಕುಮಾರ್ ಅವರು ಪ್ರಮೋದ್ ಮಹಾಜನ್ ರವರ ಮಾರ್ಗದರ್ಶನದಲ್ಲಿ ಕಾರ್ಯಶೀಲರಾಗಿ ಇತರ ಎಲ್ಲ ಪಕ್ಷಗಳ ಜೊತೆಗೆ ಚರ್ಚೆ ನಡೆಸಿ, ಎಲ್ಲ ಎಮ್.ಪಿ.ಗಳ ಜೊತೆ ಮಾತಾಡಿ ಸರ್ಕಾರ ಉಳಿಸಲಿಕ್ಕೆ ಬಹಳಷ್ಟು ಪ್ರಯತ್ನ ಮಾಡಿದರು. ಆದರೆ ಸರ್ಕಾರ ಉಳಿಯಲಿಲ್ಲ. ಮುಂದೆ ಅಟಲ್ ಜೀ ವಿರೋಧ ಪಕ್ಷದ ನಾಯಕರಾದರು. ಆಗ ಅನಂತಕುಮಾರ್ ಅವರು ಲೋಕಸಭೆಯಲ್ಲಿ ಕರ್ನಾಟಕವನ್ನು ಪ್ರತಿನಿಧಿಸುವ ಒಬ್ಬ ಪ್ರಮುಖ ನಾಯಕರಾಗಿದ್ದರು. ನಂತರ ಮತ್ತೆ ೧೯೯೮ರಲ್ಲಿ ಚುನಾವಣೆ ಬಂತು. ಆಗಲೂ ಅನಂತಕುಮಾರ್ ಅವರು ಕರ್ನಾಟಕದ ನಿರಂತರ ಪ್ರವಾಸ ಕೈಗೊಂಡರಲ್ಲದೆ ದಕ್ಷಿಣ ಭಾರತದ ಕೆಲವು ರಾಜ್ಯಗಳಲ್ಲಿ ಪಕ್ಷದ ಪರವಾಗಿ ಪ್ರವಾಸವನ್ನು ಕೈಗೊಂಡಿದ್ದರು. ಈ ಸಲ ಬಿಜೆಪಿ ಜಯ ಗಳಿಸಿ, ನಂತರ ಅಟಲ್ ಬಿಹಾರಿ ವಾಜಪೇಯಿಯವರು ಪ್ರಧಾನ ಮಂತ್ರಿಯಾದರು. ಆಗ ರಚಿತವಾದ ಮಂತ್ರಿಮಂಡಲದಲ್ಲಿ ಅನಂತಕುಮಾರ್ ಅವರಿಗೆ ಕ್ಯಾಬಿನೆಟ್ ದರ್ಜೆಯ ಮಂತ್ರಿಯಾಗುವಂಥ ಒಂದು ಅವಕಾಶ ಸಿಕ್ಕಿತು.

ನನಗೆ ಇನ್ನೂ ಆ ದಿನ ಚೆನ್ನಾಗಿ ನೆನಪಿದೆ. ನಾನೂ ದೆಹಲಿಗೆ ಹೋಗಿದ್ದೆ. ಹಿಂದಿನ ದಿನ ರಾತ್ರಿ ೧೨:00ಗಂಟೆಗೆ ಅಡ್ವಾನಿಜೀಯವರ ಫೋನ್ ಬಂದಿತ್ತು. ನಾಳೇ ನೀನು ಮಂತ್ರಿಯಾಗಿ ಸ್ವೀಕರಿಸಬೇಕು ಅಂತ ಹೇಳಿದ ಅದ್ವಾನಿಜೀಯವರು, ಕ್ಯಾಬಿನೆಟ್ ದರ್ಜೆಯ ಮಂತ್ರಿಯಾಗಿ ನೀನು ಪ್ರಮಾಣವಚನವನ್ನ ಸ್ವೀಕರಿಸಬೇಕಾಗುತ್ತೆ ಬೆಳಗ್ಗೆ ೯:00ಗಂಟೆಗೆ ಸರಿಯಾಗಿ ರಾಷ್ಟ್ರಪತಿ ಭವನಕ್ಕೆ ಬರಬೇಕು ಅಂತ ಹೇಳಿದರು. ಅದರಂತೆ ಬೆಳಗ್ಗೆ ನಾವು ಹೋದೆವು. ಅಲ್ಲಿ ಮುಂದಿನ ಸಾಲಿನಲ್ಲಿ ಮೂರನೆಯ ಕುರ್ಚಿಯಲ್ಲಿ ಅನಂತಕುಮಾರ್ ಅವರು ಕುಳಿತುಕೊಂಡರು. ನಾನು, ನನ್ನ ಮೈದುನ ನಂದಕುಮಾರ್ , ರಾಮಚಂದ್ರ ಗೌಡರು ಮತ್ತು ಹೆಚ್.ಎನ್.ಎ.ಪ್ರಸಾದ್ ಅವರು ಪ್ರೇಕ್ಷಕರ ಸಾಲಿನಲ್ಲಿ ಹೋಗಿ ಕುಳಿತುಕೊಂಡೆವು. ಮೊದಲು ಅಟಲ್ ಬಿಹಾರಿ ವಾಜಪೇಯಿಯವರು ಪ್ರಮಾಣವಚನ ಸ್ವೀಕರಿಸಿದರು. ದೊಡ್ಡ ಚಪ್ಪಾಳೆ. ಯಾಕೆ ಅಂದರೆ ಅಟಲ್ ಜೀ ಪ್ರಧಾನಿ ಆಗಬೇಕು ಎಂಬ ಹಂಬಲದಲ್ಲಿ ಇಡೀ ದೇಶವೇ ಕಾದು ನೋಡುತ್ತಿತ್ತು. ನಂತರ ರಥ ಯಾತ್ರೆಯ ರೂವಾರಿ ಅಡ್ವಾನಿಯವರು. ಮತ್ತೆ ಚಪ್ಪಾಳೆಗಳು. ಆಮೇಲೆ ಅನಂತಕುಮಾರ್ ಅಂತ ಕರೆದರು. ನನಗೆ, ನಂದಕುಮಾರ್ ಅವರಿಗೆ ಎದೆ ಜಲ್ ಎನ್ನುವ ಉದ್ವೇಗ, ಕಾತರ. ಅನಂತಕುಮಾರ್ ಅವರು ಬಂದರು. ಒಂದೂ ಚಪ್ಪಾಳೆ ಇಲ್ಲ. ಅದೂ ಸಹಜವೇ. ಯಾಕೆ ಅಂದರೆ ಆಗ ದೂರದರ್ಶನದಲ್ಲೂ ಲೋಕಸಭೆಯ ಚಾನೆಲ್ ಬರುತ್ತಿರಲಿಲ್ಲ. ಇನ್ನು ಸಭಾಂಗಣದಲ್ಲಿ ಕರ್ನಾಟಕದಿಂದ ಹೋಗಿರುವವರೇ ಒಟ್ಟು ನಾವು ನಾಲ್ಕೇ ಜನ. ನಮಗೇ ಚಪ್ಪಾಳೆ ತಟ್ಟಬೇಕು ಅಂತಲೂ ತಕ್ಷಣಕ್ಕೆ ತೋಚಲಿಲ್ಲ . ನಮ್ಮ ನಾಲ್ಕು ಜನಕ್ಕೆ ನಮಗೆ ಅಷ್ಟು ಸಂತೋಷವಾಗಿತ್ತು. ಕೊನೆಗೆ ನಾವೇ ಎಚ್ಚೆತ್ತು ಜೋರಾಗಿ ಚಪ್ಪಾಳೆ ಬಾರಿಸಿದೆವು. ನಮ್ಮ ಕರತಾಡನವನ್ನು ಬೆಂಬಲಿಸಿ ಇನ್ನಷ್ಟು ಜನ ದಕ್ಷಿಣ ಭಾರತದವರು ಚಪ್ಪಾಳೆ ತಟ್ಟಿದರು.

ಅನಂತಕುಮಾರ್ ಅವರ ಪ್ರಮಾಣವಚನ ಸ್ವೀಕಾರವಾಯಿತು. ಮನೆಗೆ ಹಿಂತಿರುಗಿದೆವು. ಹಿಂದಿನ ರಾತ್ರಿಯಿಡೀ ಮಂತ್ರಿಮಂಡಲದ ರಚನೆಯ ಚರ್ಚೆ, ಮತ್ತಿತರ ತಯಾರಿ ಕೆಲಸ ಎಲ್ಲದರ ನಡುವೆ ಅನಂತಕುಮಾರ್ ನಿದ್ರೆ ಮಾಡಿರಲೇ ಇಲ್ಲ. ಬೆಳಗ್ಗೆ ಪ್ರಮಾಣವಚನ ಮುಗಿದ ಮೇಲೆ ಸತತವಾಗಿ ಫೋನ್ ಕರೆಗಳು. ಎಲ್ಲದಕ್ಕೂ ಉತ್ತರಿಸಿ ತೋಗೋಂಡು ಊಟ ಮಾಡಿದಮೇಲೆ 'ಇನ್ನೊಂದು ಗಂಟೆ ವಿಶ್ರಾಂತಿ ತೆಗೆದುಕೊಳ್ಳುತ್ತೇನೆ, ರಾತ್ರೀ ಇಡೀ ನಿದ್ದೆಯಿಲ್ಲ' ಎಂದು ಮಲಗಿಕೊಂಡರು. ಸಂಜೆ ೪:೩೦ಗೆ ಪ್ರಮೋದ್ ಮಹಾಜನ್ ಅವರಿಂದ ಫೋನ್ ಬಂದಿತು. ನಾನು ಅನಂತ್ ಕುಮಾರರನ್ನು ಎಬ್ಬಿಸಿದೆ . ಪ್ರಮೋದ್ ಮಹಾಜನ್ " ಏನು ಮಾಡುತ್ತಿದ್ದೀಯಾ?" ಎಂದು ಕೇಳಿದರು. ಪ್ರಮೋದ್ ಮಹಾಜನ್ ಯಾವಾಗಲೂ ಹಾಸ್ಯ ಮಾಡುವವರು. ಊಟ ಮಾಡಿ ಚೆನ್ನಾಗಿ ಮಲಗಿಕೊಂಡು ಬಿಟ್ಟೆ ತಾನೇ ಎಂದರು . ಹೌದು ಮಲಗಿಕೊಂಡು ಬಿಟ್ಟಿದ್ದೆ ಎಂದ ಅನಂತಕುಮಾರರನ್ನು ತರಾಟೆಗೆ ತೆಗೆದುಕೊಂಡ ಮಹಾಜನ್, " ಅಲ್ಲಯ್ಯ ಬುದ್ಧಿ ಬೇಡವಾ ನಿನಗೆ ? ಹೋಗಲಿ ಯಾವ ಮಿನಿಸ್ಟ್ರೀ ಕೊಡ್ತೀರಾ ಅಂತ ಏನಾದರೂ ಕೇಳಿದ್ದೀಯ? ಅಂದರು. ಇಲ್ಲ, ಕೇಳಿಲ್ಲ. ಏನೋ ಯಾವುದೋ ಕೊಡುತ್ತಾರೆ ಎಂದು ಅನಂತ್ ಉತ್ತರಿಸಿದರು . ಆಯ್ತು, ಕೇಳುವುದು ಹೋಗಲಿ. ಅಟಲ್ ಜೀ ಅವರಿಗೆ ಥ್ಯಾಂಕ್ಸ್ ಹೇಳಿದೆಯಾ ? ಎಂದು ಮಹಾಜನ್ ಕೇಳಿದ್ದಕ್ಕೆ ಇಲ್ಲ ಎಂಬ ಉತ್ತರ ಹೊರಟಿತು. ಅದೇ ನನಗೆ ಗೊತ್ತು ನಿನಗೆ ಅದು ಗೊತ್ತಾಗುವುದೂ ಇಲ್ಲ ಅಂತ. ನೋಡು ಸ್ವೀಟ್ ಬಾಕ್ಸ್, ಹೂಗುಚ್ಛ ತರಿಸಿಇಟ್ಟಿದ್ದೀನಿ. ನಿನ್ನ ಡ್ರೈವರ್ ಕಳುಹಿಸಿ ತೆಗೆದುಕೊಳ್ಳುವಂತೆ ಹೇಳು. ಮತ್ತೆ ಹೋಗಿ ಅಟಲ್ ಜೀಯವರನ್ನು ಭೇಟಿಯಾಗು. ಎಂದು ಪ್ರಮೋದ್ ಮಹಾಜನ್ ಪಾಠ ಹೇಳಿದರು.

ಡ್ರೈವರ್ ಕಳುಹಿಸುವುದಿರಲಿ, ನಮ್ಮ ಹತ್ತಿರ ಕಾರೇ ಇರಲಿಲ್ಲ. ಸರಿ ಮತ್ತೆ ಒಂದು ಟ್ಯಾಕ್ಸಿಯನ್ನ ವ್ಯವಸ್ಥೆ ಮಾಡಿಕೊಂಡು ಮಹಾಜನ್ ಅವರ ಮನೆಯಿಂದ ಅವರೇ ತರಿಸಿಟ್ಟಿದ್ದ ಒಂದು ಸ್ವೀಟ್ ಬಾಕ್ಸ್ ಮತ್ತು ಹೂಗುಚ್ಛ ತೆಗೆದುಕೊಂಡು ಅಟಲ್ ಜೀ ಅವರ ಮನೆಗೆ ಹೋದರು. ಅವರಿಗೆ ಧನ್ಯವಾದಗಳನ್ನ ಹೇಳಿದಾಗ ಅಟಲ್ ಜೀ ಅನಂತಕುಮಾರ್ ಅವರಿಗೆ ಹಾಸ್ಯ ಮಾಡಿದರಂತೆ. 'ಏನು, ನಿನ್ನನ್ನು ಇಲ್ಲಿಗೆ ಯಾರು ಕಳುಹಿಸಿದರು ? ' ಅಂತ ಕೇಳಿದರಂತೆ. ಅನಂತಕುಮಾರ್ ತನ್ನನ್ನು ಪ್ರಮೋದ್ ಮಹಾಜನ್ ಅವರೇ ಕಳುಹಿಸಿದರೆಂದು ಹೇಳಿದರು . ಮಾತ್ರವಲ್ಲ, ಸ್ವೀಟ್ ಡಬ್ಬಾನೂ ಅವರೇ ಕೊಡಿಸಿಬಿಟ್ಟರು ಅಂತ. ಅದನ್ನು ಕೇಳಿದ ಅಟಲ್ ಜೀ ಆಹಾ ಅಂತ ಜೋರಾಗಿ ನಕ್ಕರಂತೆ. " ಮುಜೇ ಮಾಲೂಮ್ ಥಾ. ನೀನು ಸ್ವಂತ ಬುದ್ಧಿಯಿಂದ ಬಂದಿಲ್ಲ ಅಂತ ನನಗೆ ಗೊತ್ತಾಗಿದೆ. ಸರಿ, ಈಗ ನಿನಗೆ ಯಾವ ಮಂತ್ರಾಲಯ (ಇಲಾಖೆ) ಬೇಕು ? ಎಂದು ಪ್ರಧಾನಿಯವರು ಕೇಳಿದರು. ಆಗ ಅನಂತಕುಮಾರ್ ಅವರು ನನಗೇ ಗ್ರಾಮೀಣ ಅಭಿವೃದ್ಧಿ ಇಲಾಖೆ ಕೊಡಿ ಎಂದು ಹೇಳಿದರು. ಪ್ರಧಾನಿಯವರ ಪ್ರತಿಕ್ರಿಯೆ ಹೇಗಿರಬಹುದೋ ಎಂದುಕೊಂಡು ಅದಿಲ್ಲದಿದ್ದರೆ ಕೃಷಿ ಇಲಾಖೆ ಕೊಡಿ ಅಂತ ಏನೇನೋ ಕೇಳಿದರಂತೆ.

ಅಟಲ್ ಜೀ ಅವರ ಪಕ್ಕದಲ್ಲಿ ಒಂದು ವಿಮಾನದ ಚಿಕ್ಕ ಪ್ರತಿಕೃತಿ ಇತ್ತು. ಅದನ್ನು ತೆಗೆದು ಅನಂತಕುಮಾರ್ ಕೈಯಲ್ಲಿ ಕೊಟ್ಟು ಜಾವ್ ಅಂತ ಅಂದರಂತೆ. ಆ ಹೊತ್ತಿಗೆ ಅವರಿಗೇನೂ ಗೊತ್ತಾಗಲಿಲ್ಲ. ಪ್ರಧಾನಿಯವರು ಕೊಟ್ಟಿದ್ದನ್ನು ತೆಗೆದುಕೊಂಡು ಮನೆಗೆ ಬರುವಷ್ಟರಲ್ಲೇ ಟಿ.ವಿ.ಯಲ್ಲಿ ಲೈವ್ ಮಾಹಿತಿ ಬರುವುದಕ್ಕೆ ಶುರುವಾಯಿತು. ಅನಂತಕುಮಾರ್ ಅವರಿಗೆ ವಿಮಾನಯಾನ ಖಾತೆಯನ್ನು ವಹಿಸಿಕೊಡಲಾಗಿತ್ತು.



ನೆನಪಿನ ಅಂಗಳದಿಂದ

# ಮಂಜಿನಲ್ಲಿ ಮರೆಯಾಗಿದ್ದ ಮಾವ

ಅನುಭವ ಕಥನ: ತೇಜಸ್ವಿನಿ ಅನಂತಕುಮಾರ್

ಡಿಸೆಂಬರ್ ಅಂದರೆ ಮೊದಲಿಗೆ ನೆನಪಾಗುವುದೇ ಸಂಸತ್ತಿನ ಚಳಿಗಾಲದ ಅಧಿವೇಶನ. ಸಾಮಾನ್ಯವಾಗಿ ಸಂಸತ್ತಿನ ಚಳಿಗಾಲದ ಅಧಿವೇಶನ ನವೆಂಬರ್ ಕೊನೆಗೆ ಅಥವಾ ಡಿಸೆಂಬರ್ ಮೊದಲ ವಾರದಲ್ಲಿ ಪ್ರಾರಂಭವಾಗಿ ಡಿಸೆಂಬರ್ ೨೫ರ ಹೊತ್ತಿಗೆ ಮುಗಿಯುತ್ತಿತ್ತು. ೧೯೯೮ರ ಡಿಸೆಂಬರ್ ಅಧಿವೇಶನದ ಸಂದರ್ಭ. ಆಗಲೇ ನಾವು ಬೆಂಗಳೂರಿನಿಂದ ದೆಹಲಿಗೆ ನಮ್ಮ ವಾಸ್ತವ್ಯವನ್ನು ಬದಲಿಸಬೇಕೆಂದು ನಿರ್ಧರಿಸಿದೆವು.

೧೯೯೮ ರಲ್ಲಿ ಅನಂತಕುಮಾರ್ ಎರಡನೆಯ ಬಾರಿಗೆ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿ ಅತ್ಯಂತ ಹೆಚ್ಚಿನ ಬಹುಮತದಿಂದ ಗೆದ್ದರು. ವಾಜಪೇಯಿಯವರ ಸರ್ಕಾರದಲ್ಲಿ ಕ್ಯಾಬಿನೆಟ್ ದರ್ಜೆಯ ಮಂತ್ರಿಯಾಗಿ ನೇಮಕಗೊಂಡರು. ಈ ಹರುಷದ ಸಂಭ್ರಮ ಏನೇ ಇದ್ದರೂ ೧೯೯೮ ಹಲವು ಕಾರಣಗಳಿಗಾಗಿ ನಮ್ಮ ಪಾಲಿಗೆ ಹಿತಕರವಾಗಿರಲಿಲ್ಲ. ಫೆಬ್ರವರಿ ೯೮ರಲ್ಲಿ ಚುನಾವಣೆಗೆ ಕೆಲವೇ ದಿನಗಳಿಗೆ ಮೊದಲು ಅನಂತಕುಮಾರ್ ಅವರ ಸೋದರಮಾವ ಪದ್ಮಶ್ರೀ ಡಾ. ನೀಲಕಂಠರಾವ್ ಅನಾರೋಗ್ಯದಿಂದಾಗಿ ತೀರಿಕೊಂಡರು. ಮೇ ೯೮ರಲ್ಲಿ ನನ್ನ ತಂದೆ ಪ್ರಭಾಕರ್ ಓಕ್ ರವರಿಗೆ ಫೆಬ್ರವರಿಯಲ್ಲೇ ಅನಾರೋಗ್ಯವಾಗಿ ಅವರು ಮೇ ತಿಂಗಳಿನಲ್ಲಿ ನಿಧನರಾದರು. ಜುಲೈತಿಂಗಳಲ್ಲಿ ನನ್ನ ತಾತನವರು ತೀರಿಕೊಂಡರು. ಈ ಅವಧಿಯಲ್ಲಿ ನನ್ನ ಮಾವ ನಾರಾಯಣ ಶಾಸ್ತ್ರಿಯವರು ಕರುಳಿನ ಕ್ಯಾನ್ಸರ್ ನಿಂದ ಬಳಲುತ್ತಿದ್ದು ಅಕ್ಟೋಬರ್ ೯೮ರಲ್ಲಿ ತೀರಿಕೊಂಡರು.

ನಮ್ಮ ಕುಟುಂಬದ ಹಲವು ಹಿರಿಯರ ಸಾವುನೋವುಗಳು ನಮ್ಮನ್ನು ಕಂಗೆಡಿಸಿದ್ದವು. ಮನೆಯ ನಾಲ್ಕು ಜನ ಹಿರಿಯರನ್ನು ಕಳೆದುಕೊಂಡ ದುಗುಡದ ವಾತಾವರಣದಲ್ಲಿ ಇರುವುದೇ ಬಹಳಷ್ಟು ಕಷ್ಟ ಅನ್ನಿಸುವುದಕ್ಕೆ ಶುರುವಾಯಿತು. ಇನ್ನೊಂದೆಡೆ ಅನಂತಕುಮಾರ್ ಮಂತ್ರಿಗಳಾದಮೇಲೆ ಪ್ರವಾಸ ನಿಮಿತ್ತ ಓಡಾಟ ಹೆಚ್ಚಿತ್ತು, ದೆಹಲಿಗಂತೂ ಬಿಡುವಿಲ್ಲದಂತೆ ಹೋಗಿ ಬರಬೇಕಾಗಿತ್ತು. ಹೀಗಾಗಿ ನಾವೇ ದೆಹಲಿಗೆ ಕುಟುಂಬ ಸ್ಥಳಾಂತರವಾದರೆ ಒಳ್ಳೆಯದು. ಅನಂತಕುಮಾರ್ ಅವರಿಗೂ ಸಹಾಯವಾಗುತ್ತೆ ಎಂದು ಯೋಚಿಸಿದೆವು.

ದೆಹಲಿಯಲ್ಲಿ ಕೇಂದ್ರ ಮಂತ್ರಿಗಳ ನಿವಾಸಕ್ಕೆಂದು ಎರಡು ಎಕರೆಯಷ್ಟು ಜಾಗದಲ್ಲಿ ಒಂದು ಸುಂದರವಾದ ದೊಡ್ಡ ಮನೆ ಕೊಟ್ಟಿದ್ದರು. ಇಲ್ಲಿ ಬೆಂಗಳೂರಿನ ವೈಯಾಳಿಕಾವಲ್ ಬಡಾವಣೆಯಲ್ಲಿ ನಾವು ಒಂದೇ ಬೆಡ್ ರೂಮಿನ ಬಹಳ ಚಿಕ್ಕ ಮನೆಯಲ್ಲಿದ್ದೆವು. ನಮ್ಮ ಮಗಳು ಐಶ್ವರ್ಯ ಆಗ ಎರಡನೇ ಕ್ಲಾಸಿನಲ್ಲಿ ಓದುತ್ತಿದ್ದಳು. ಹೇಗೂ ಕೇಂದ್ರೀಯ ವಿದ್ಯಾಲಯದಲ್ಲಿ ಓದುತ್ತ ಇದ್ದಿದ್ದರಿಂದ ವರ್ಷದ ಮಧ್ಯದಲ್ಲೇ ನಾವು ಶಿಫ್ಟ್ ಮಾಡುವುದಕ್ಕೂ ಏನೂ ತೊಂದರೆಯಾಗುವುದಿಲ್ಲ ಅಂದುಕೊಂಡು ದೆಹಲಿಗೆ ಸ್ಥಳಾಂತರ ಮಾಡುವ ನಿರ್ಣಯ ಮಾಡಿದೆವು

ದೆಹಲಿಯಲ್ಲಿ ಡಿಸೆಂಬರ್ ತಿಂಗಳಿನ ಚಳಿ ಬಹಳ ಭಯಾನಕವೆಂದೇ ಹೇಳಬಹುದು. ಹವಾಮಾನದ ಉಷ್ಣಾಂಶ ಎರಡೋ ಮೂರೋ ಡಿಗ್ರಿಗೆ ಕುಸಿದುಬಿಡುವುದು. ದಟ್ಟವಾಗಿ ಮುಸುಕಿದ ಮಂಜಿನಲ್ಲಿ ಐದಾರು ಅಡಿ ಮುಂದಿರುವಂಥ ವ್ಯಕ್ತಿಯೂ ಕಾಣುವ ಸಂಭವವಿಲ್ಲ. ಎದುರು ಬರುವ ವಾಹನಗಳು ಕಾಣುತ್ತಲೇ ಇರಲಿಲ್ಲ. ವಾಹನಚಾಲನೆಯೇ ಒಂದು ದೊಡ್ಡ ಸವಾಲಾಗಿ ಪರಿಣಮಿಸುತ್ತಿತ್ತು. ವಿಮಾನಗಳ ಲ್ಯಾಂಡಿಂಗ್ ಆಗುವುದೇ ಕಷ್ಟ. ಬೆಳಗ್ಗೆ ಎಂಟೊಂಬತ್ತು ಗಂಟೆಯಾದರೂ ಚಳಿ ಬಿಡುತ್ತಿರಲಿಲ್ಲ . ಅದೇ ಚಳಿಯಲ್ಲಿ ಬೆಳಗ್ಗೆ ಮಗಳನ್ನು ಶಾಲೆಗೆ ಕಳುಹಿಸಬೇಕು . ಇಂಥ ನೂರೆಂಟು ಸಮಸ್ಯೆಗಳು ಆ ಡಿಸೆಂಬರ್ ತಿಂಗಳು.

ನನ್ನ ಜೊತೆಗೆ ದೆಹಲಿಯಲ್ಲಿ ಇರುವುದಕ್ಕೆ ನನ್ನ ತಾಯಿ ಮತ್ತು ನನ್ನ ಸೋದರಮಾವ ಇಬ್ಬರನ್ನೂ ನಾವು ಜೊತೆಗೆ ಕರೆದುಕೊಂಡು ಹೋಗಿದ್ದೆವು. ನನ್ನ ತಾಯಿಯ ತಮ್ಮ ವಿಶೇಷಚೇತನರು; ಮಾನಸಿಕ ಬೆಳವಣಿಗೆ ಸಾಲದುದರಿಂದ ಅವರಿಗೆ ಯಾವಾಗಲೂ ಯಾರಾದರೊಬ್ಬರ ಸಹಾಯದ ಅವಶ್ಯಕತೆ ಇತ್ತು. ನಮ್ಮ ತಂದೆ ತೀರಿಕೊಂಡ ಮೇಲೆ ನಮ್ಮ ತಾಯಿ ಒಬ್ಬರಿಗೇ ಅಲ್ಲಿದ್ದು ತಮ್ಮನನ್ನು ನೋಡಿಕೊಳ್ಳುವುದು ಕಷ್ಟವಾಗುತ್ತಿತ್ತು. ದೆಹಲಿಯ ದೊಡ್ಡಮನೆಯಲ್ಲಿ ಅವರು ಆರಾಮವಾಗಿ ಇರಬಹುದು , ಮತ್ತೆ ನಮಗೂ ಜೊತೆಯಾಗು ತ್ತದೆಯೆಂದು ಅವರನ್ನೂ ಕರೆದುಕೊಂಡು ಹೋದೆವು.

ನಮ್ಮ ಸೋದರಮಾವನಿಗೆ ಸುಮಾರು ನಲ್ವತ್ತು ವರ್ಷ ವಯಸ್ಸು ಇರಬಹುದು. ಪ್ರತಿದಿನ ಬೆಳಗ್ಗೆ ಬೇಗ ಎದ್ದು ಸುಮ್ಮನೇ ಒಂದು ಸುತ್ತು ತಿರುಗಾಡಿ ಬರುವ ರೂಢಿ . ಹೀಗೆಯೇ ಡಿಸೆಂಬರ್ ೧೭ ರಂದು ಅವರು ಬೆಳಗ್ಗೆ ಹಾಗೇ ಹೊರಗಡೆ ಹೋಗಿದ್ದಾರೆ. ಮುಸುಕಿದ ಮಂಜಿನಲ್ಲಿ ಅವರಿಗೆ ವಾಪಸ್ಸು ಮನೆ ಗೊತ್ತಾಗಲಿಲ್ಲ. ಪಕ್ಕದ ಮನೆಗೇನ್ನೋ ಹೋಗಿದ್ದಾರೆ ; ಅದು ತಮ್ಮ ಮನೆಯಲ್ಲ. ಹೀಗೆ ಮನೆ ನೋಡುತ್ತ ನೋಡುತ್ತ ನೋಡುತ್ತ ಮುಂದೆ ಎಷ್ಟು ದೂರ ಹೋಗಿಬಿಟ್ಟರೋ ಗೊತ್ತಿಲ್ಲ. ಒಂಬತ್ತು ಹತ್ತು ಗಂಟೆಯಾದರೂ ಬರಲೇ ಇಲ್ಲ. ನಾವು ಕಾದು ಕಾದು ಸಾಕಾಯಿತು. ಹುಡುಕಾಟದಲ್ಲಿ ಸಂಜೆ ಕಳೆದು ರಾತ್ರಿಯಾದರೂ ಸಿಗಲಿಲ್ಲ.

ವಿಷಯ ತಿಳಿದು ಬೆಂಗಳೂರಿನಲ್ಲಿ ಇರುವ ನನ್ನ ಅಣ್ಣ. ಅಕ್ಕ, ಭಾವ ಎಲ್ಲರೂ ಮಾರನೇ ದಿನ ಬಂದರು. ಸೋದರಮಾವನಿಗೆ ಹಿಂದಿಯಾಗಲಿ ಇಂಗ್ಲೀಷ್ ಆಗಲಿ ತಿಳಿಯದು. ಕನ್ನಡ ಮತ್ತು ಮರಾಠಿ ಮಾತಾಡುತ್ತ ಇದ್ದರು. ಮನೆಯಿಂದ ಹೊರಟಾಗ ಅವರು ಕಾಲಲ್ಲಿ ಚಪ್ಪಲಿ ಸಹ ಹಾಕಿಕೊಂಡಿರಲಿಲ್ಲ. ಡಿಸೆಂಬರ್ ಚಳಿಯಲ್ಲಿ ಎಲ್ಲಿ ಇರುತ್ತಾರೋ ಏನು ಮಾಡುತ್ತಾರೋ ತಿಳಿಯದೆ ನಮಗೆಲ್ಲ ಭಯವಾಗಿ ಹೋಯಿತು. ಅವರ ಫೋಟೋವನ್ನು ಅಚ್ಚುಮಾಡಿಸಿ ಎಲ್ಲ ಪೋಲೀಸ್ ಕಛೇರಿಗಳಿಗೆ ತಲುಪಿಸಿ ದೂರು ಸಲ್ಲಿಸಿದ್ದಾಯಿತು.

ಮೂರು ನಾಲ್ಕು ದಿನಗಳಾದರೂ ಸಿಗಲಿಲ್ಲ. ಅವರ ಜೇಬಿನಲ್ಲಿ ಒಂದು ರೂಪಾಯಿ ಇಲ್ಲ. ಕಾಲಿನಲ್ಲಿ ಚಪ್ಪಲಿ ಇಲ್ಲ. ಭಾಷೆ ಗೊತ್ತಿಲ್ಲ ಅವರಿಗೆ ವಿಳಾಸ ಹೇಳುವುದಕ್ಕೂ ಬರದು. ಏನಪ್ಪ ಮಾಡುತ್ತಾರೆ ಅನ್ನುವಂಥ ಭಯ, ಆತಂಕ.

ಆಗ ಗೃಹಮಂತ್ರಿಗಳಾಗಿದ್ದ ಎಲ್.ಕೆ.ಅಡ್ವಾನಿಜೀಯವರನ್ನೂ ಭೇಟಿಮಾಡಿ ಸೋದರಮಾವನನ್ನು ಹುಡುಕಿಸಿಕೊಡುವಂತೆ ಕೇಳಿಕೊಂಡೆವು. ಮಾವ ಕಾಣೆಯಾದ ಮೂರನೇ ದಿನದಿಂದ ನಾವೇ ನಾಲ್ಕು ದಿಕ್ಕಿನಲ್ಲಿ ಪ್ರತ್ಯೇಕವಾಗಿ ಹೊರಟು, ಒಂದು ವಾಹನಕ್ಕೆ ನನ್ನ ಅಣ್ಣ, ಇನ್ನೊಂದಕ್ಕೆ ದಿವಾಕರ್ , ಮತ್ತೊಂದು ಕಡೆ ನಾನು - ಹೀಗೆ ಮೂರು ತಂಡಗಳಲ್ಲಿ ಹೊರಟೆವು. ಹಾದಿಯಲ್ಲಿ ಕಾಣಸಿಕ್ಕ ಲಂಗರ್, ದೇಗುಲ ಎಲ್ಲಾಕಡೆ ಸೋದರಮಾವನ ಫೋಟೋ ತೋರಿಸಿ ವಿಚಾರಿಸುತ್ತ , ದೆಹಲಿಯ ಭೂಪಟವನ್ನು ಕೈಯಲ್ಲಿ ಹಿಡಿದು ಇಡೀ ರಾಜಧಾನಿಯನ್ನೇ ಜಾಲಾಡಿಸಿಬಿಟ್ಟೆವು. ಆಶ್ಚರ್ಯವೆಂದರೆ ಐದನೇ ದಿನ ದಿವಾಕರ್ ತಂಡಕ್ಕೆ ಸೋದರಮಾವ ಸಿಕ್ಕಿಬಿಟ್ಟರು. ರಸ್ತೆ ಬದಿಯಲ್ಲಿ ಕುಳಿತಿದ್ದ ಅವರನ್ನು ಮನೆಗೆ ಕರೆದುಕೊಂಡು ಬಂದದ್ದಾಯಿತು.

ಏನೋ ಬದಲಾವಣೆಯಿರಲಿ ಎಂದು ದೆಹಲಿಗೆ ಬಂದರೆ ಹೀಗೆಲ್ಲ ಆಗಿಹೋಯಿತಲ್ಲ ಎಂದು ಮನಸ್ಸಿಗೆ ದುಗುಡ ಕವಿಯಿತು. ದೆಹಲಿಯ ವಾಸ್ತವ್ಯ ಬೇಡ ಅನ್ನಿಸಿ ನಮ್ಮ ತಾಯಿ " ನಾನು ವಾಪಸ್ಸು ಹೋಗಿಬಿಡುತ್ತೇನೆ, ಇವನನ್ನು ಇಲ್ಲಿ ನೋಡಿಕೊಳ್ಳುವುದು ಕಷ್ಟವಾಗುತ್ತೆ " ಎಂದರು. ಡಿಸೆಂಬರ್ ೨೫ ರ ಹೊತ್ತಿಗೆ ಅಧಿವೇಶನ ಮುಗಿಯಿತು. ನಾವು ಬೆಂಗಳೂರಿಗೆ ಒಂದು ಸ್ವಲ್ಪ ದಿನ ಬದಲಾವಣೆಗೆಂದು ಬಂದವರು ದೆಹಲಿಗೆ ಹಿಂತಿರುಗುವುದೋ ಬೇಡವೋ ಎಂದು ಯೋಚಿಸುವಷ್ಟರಲ್ಲಿ ಕೇಂದ್ರ ಸರ್ಕಾರ ಹದಿಮೂರು ತಿಂಗಳುಗಳಲ್ಲೇ ಅಧಿಕಾರ ಕಳೆದುಕೊಂಡಿತು. ಮರಳಿ ಚುನಾವಣೆ ನಡೆಸುವುದೆಂದು ಘೋಷಣೆಯಾಯಿತು. ತತ್ಕಾಲಕ್ಕೆ ನಾವು ಬೆಂಗಳೂರಿನಲ್ಲೇ ಉಳಿಯುವಂತಾಯಿತು. ಹೇಗೂ ಇರಲಿ, ಆ ಡಿಸೆಂಬರ್ ಚಳಿಗಾಲದ ನಮ್ಮ ದೆಹಲಿ ವಾಸ್ತವ್ಯವಂತೂ ನೆನಪಿನಂಗಳದಲ್ಲಿ ಶಾಶ್ವತವಾಗಿ ಉಳಿದುಕೊಂಡಿತು.

## ಶ್ರದ್ಧಾಂಜಲಿ



ಮುಕುಂದ ನಾತು

ಅನಂತಕುಮಾರ್ ಮತ್ತವರ ಕುಟುಂಬದ ಹಿತೈಷಿಗಳೂ ಹಿರಿಯ ಮಿತ್ರರೂ ಆಗಿದ್ದ ಶ್ರೀ ಮುಕುಂದ ನಾತು (೭೪) ಅವರು ಇತ್ತೀಚೆಗೆ (೧೨ ಡಿಸೆಂಬರ್ ೨೦೨೦) ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಹುಬ್ಬಳ್ಳಿಯ ವಲಯಗಳಲ್ಲಿ ನಾತು ಮಾಸ್ತರರೆಂದು ಜನಪ್ರಿಯರಾಗಿದ್ದ ಶ್ರೀಯುತರು ಹುಬ್ಬಳ್ಳಿಯ ನ್ಯೂ ಇಂಗ್ಲೀಷ್ ಶಾಲೆಯಲ್ಲಿ ಶಿಕ್ಷಕರಾಗಿ, ಪ್ರಾಚಾರ್ಯರಾಗಿ ಸುದೀರ್ಘಕಾಲ ಸೇವೆ ಸಲ್ಲಿಸಿದ್ದರು. ನಿವೃತ್ತಿಯ ನಂತರ ಧಾರವಾಡ ಜಿಲ್ಲಾ ಬ್ರಹ್ಮಣ ಸೇವಾಸಂಘದ ಅಧ್ಯಕ್ಷರಾಗಿದ್ದರಲ್ಲದೆ ಹಲವು ಬಗೆಯ ಸಾಮಾಜಿಕ ಸೇವಾಕಾರ್ಯಗಳಲ್ಲಿ ತೊಡಗಿಕೊಂಡಿದ್ದರು. ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದರು. ಅವರ ಮಕ್ಕಳಲ್ಲಿ ಏಷ್ಯಾನೆಟ್ ಸುವರ್ಣ ಪ್ರತಿನಿಧಿಯೂ ಪತ್ರಕರ್ತರೂ ಆಗಿರುವ ಪ್ರಶಾಂತ್ ನಾತು ಒಬ್ಬರು. ಮುಕುಂದ ನಾತು ಮಾಸ್ತರರು ತಮ್ಮ ಪತ್ನಿ, ಇಬ್ಬರು ಮಕ್ಕಳು, ಸೊಸೆಯಂದಿರು ಮತ್ತು ಅಪಾರ ಬಂಧುವರ್ಗವನ್ನು ಅಗಲಿದ್ದಾರೆ. ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ ಅನಂತಕುಮಾರ್ ಪ್ರತಿಷ್ಠಾನದ ಪರವಾಗಿ ಶ್ರದ್ಧಾಂಜಲಿ ಸಲ್ಲಿಸುತ್ತಿದ್ದೇವೆ. ಕೆಲವು ತಿಂಗಳುಗಳ ಮುನ್ನ ಶ್ರೀ ಮುಕುಂದ ನಾತುರವರು ಹಂಚಿಕೊಂಡಿದ್ದ ಅನಂತಕುಮಾರ್ ಬಗೆಗಿನ ಕೆಲವು ನೆನಪುಗಳನ್ನು ಈ ಸಂಚಿಕೆಯಲ್ಲಿ ಪ್ರಕಟಿಸುತ್ತಿದ್ದೇವೆ.